೩) ಗ್ರಾಮಮಟ್ಟದ ಪ್ರಾಥಮಿಕ ಸಹಕಾರ ಸಂಘಗಳ ವಾರ್ಷಿಕ ಮಹಾ ಸಭೆ ಮತ್ತು ಚುನಾವಣೆಯನ್ನು ಬರುವ ಡಿಸೆಂಬರ್ ತಿಂಗಳವರೆಗೆ ಮುಂದೂಡುವಂತೆ ಅಗ ಹ

ಉಪಾಧ್ಯಕ್ಷರು.— ಶ್ರೀ ಕೆ. ಲಕ್ಕಪ್ಪನವರು.

(ಮಾನ್ಯ ಸದಸ್ಯರು ಕೆ. ಲಕ್ಕಪ್ಪನವರು ಗೈರು ಹಾಜರಾಗಿದ್ದರು.)

ಶ್ರೀ ಜಿ. ಎಸ್. ಆಚಾರ್. (ಬೈಂದೂರು).— ಮಾನ್ಯ ಉಪಾಧ್ಯಕ್ಷರೇ, ರಾಜ್ಯದಲ್ಲಿ ಗ್ರಾಮ ಮಟ್ಟದ ಪ್ರಾಥಮಿಕ ಸಹಕಾರಿ ಸಂಘಗಳ ವಾರ್ಷಿಕ ಮಹಾಸಭೆ ಮತ್ತು ಚುನಾವಣೆ ಇದೇ ಜೂನ್ ತಿಂಗಳ ಅಂತ್ಯದೊಳಗೆ ತಾಲ್ಲೂಕು ಮಟ್ಟದ ಸಂಘಗಳ ಮಹಾಸಭೆ ಮತ್ತು ಚುನಾವಣೆ ಜುಲೈಯ ಅಂತ್ಯದೊಳಗೆ, ಜಿಲ್ಲಾ ಮಟ್ಟದ ಸಂಘಗಳದ್ದು ಆಗಸ್ಟ್ ಅಂತ್ಯದೊಳಗೆ ಹಾಗೂ ರಾಜ್ಯಮಟ್ಟದ್ದು ಸೆಪ್ಟೆಂಬರ್ ಅಂತ್ಯದೊಳಗೆ ಆಗಬೇಕೆಂದು ಇತ್ತೀಚೆಗೆ ಸರ್ಕಾರಿ ಆಜ್ಞೆ ಆಗಿದೆ. ಜೂನ್ ಜುಲೈ ತಿಂಗಳಲ್ಲಿ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ವಿಪರೀತ ಮಳೆ ಇದ್ದು, ಬಹುತೇಕ ಸದಸ್ಯರು ಕೃಷಿ ಕೆಲಸದಲ್ಲಿ ಮಗ್ನರಾಗಿರುತ್ತಾರೆ. ಹಾಗಾಗಿ ಮಹಾಸಭೆ ಮತ್ತು ಚುನಾವಣೆಯಲ್ಲಿ ಸದಸ್ಯರು ಆಸಕ್ತಿ ವಹಿಸುವುದಿಲ್ಲ ಸಾಲ ಮನ್ನಾ ಕುರಿತಾದ ಧೋರಣೆ ಇನ್ನೂ ತೀರ್ಮಾನ ಆಗದ ಪ್ರಯುಕ್ತ ಚುನಾಯಿತರಾದವರು ಸಹಾ ಸ್ಥಾನ ಕಳೆದುಕೊಳ್ಳುವ ಸಂಭವ ಇದೆ. ನೂರಾರು ಶಾಸಕರು ಹಾಗೂ ಸಹಸ್ರಾರು ಸಹಕಾರಿ ಸಂಘ ಸಂಸ್ಥೆಗಳು ಈಗಾಗಲೇ ಚುನಾವಣೆಯನ್ನು ಮುಂದುವರಿಸಲು ಸರಕಾರವನ್ನು ಒತ್ತಾಯಿಸಿರುವುದರಿಂದ, ಮಹಾಸಭೆ ಮತ್ತು ಚುನಾವಣೆಗಳನ್ನು ಬರುವ ಡಿಸೆಂಬರ್ ಅಂತ್ಯದವರೆಗೆ ಮುಂದೂಡಬೇಕೆಂದು ಆಗ್ರಹಪೂರ್ವಕವಾಗಿ ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮಂತ್ರಿಗಳು).— ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಹಕಾರಿ ಸಚಿವರು ಇದಕ್ಕೆ ಉತ್ತರವನ್ನು ಈ ಸದನ ಮುಗಿಯುವುದರ ಮೊದಲು ಕೊಡುತ್ತಾರೆ. ಏಕೆಂದರೆ ಈ ಬಗ್ಗೆ ಸರ್ಕಾರಕ್ಕೆ ಅನೇಕ ಶಾಸಕರುಗಳು ಮನವಿಯನ್ನು ಕೊಟ್ಟಿದ್ದಾರೆ. ಅನೇಕ ಸಾವಿರಾರು ಅರ್ಜಿಗಳು ಬೇರೆ ಬೇರೆ ಸೊಸೈಟಿಗಳಿಂದ ಸರ್ಕಾರಕ್ಕೆ ಬಂದಿದೆ. ಅದಕ್ಕೆ ಈ ಸದನ ಏಳುವ ಮೊದಲು ಇದಕ್ಕೆ ಒಂದು ಉತ್ತರವನ್ನು ಸಹಕಾರಿ ಸಚಿವರು ಕೊಡುತ್ತಾರೆ.

ಉಪಾಧ್ಯಕ್ಷರು.— ಬೇಡಿಕೆಗಳ ಮೇಲಿನ ಚರ್ಚೆಯನ್ನು ಮುಂದುವರಿಸಬಹುದು. ಇವತ್ತು ಐದು ಗಂಟೆಗೆ ನಾವು ಈ ಚರ್ಚೆಯನ್ನು ಮುಗಿಸಿದ ಮೇಲೆ ಮಾನ್ಯ ಮಂತ್ರಿಗಳು ಇದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ. ಮಾನ್ಯ ಸದಸ್ಯರು ಆದಷ್ಟು ೧೫ ನಿಮಿಷ ಅಥವಾ ೨೦ ನಿಮಿಷದ ಒಳಗೆ ತಮ್ಮ ಒಂದು ವಿಷಯಗಳನ್ನು ಹೇಳಲಿಕ್ಕೆ ಪ್ರಯತ್ನವನ್ನು ಮಾಡಬೇಕು ಎಂದು ಹೇಳುತ್ತೇನೆ. ಈಗ ಶ್ರೀಯುತ ವಾಟಾಳ್ ನಾಗರಾಜ್‌ರವರು ತಮ್ಮ ಚರ್ಚೆಯನ್ನು ಮುಂದುವರೆಸಬಹುದು.

ವಿತ್ತೀಯ ಕಾರ್ಯ ಕಲಾಪಗಳು

೧೯೯೦-೯೧ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).— ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ಒಂದು ಬೇಡಿಕೆಗಳ ಬಗ್ಗೆ ಮಾತನಾಡುವಾಗ ಇಷ್ಟೊಂದು ಬೇಡಿಕೆಗಳನ್ನು ಒಂದೇ ಸಾರಿ ತಂದಿಟ್ಟು ೧-೨ ದಿವಸದಲ್ಲಿ ಈ ಬೇಡಿಕೆಗಳ ಬಗ್ಗೆ ಚರ್ಚೆ ನಡೆಯಬೇಕೆನ್ನತಕ್ಕದ್ದು ನಮ್ಮ ದೃಷ್ಟಿಯಲ್ಲಿ ಸರಿಯಲ್ಲ. ಒಂದೊಂದು ಇಲಾಖೆಯ ಬೇಡಿಕೆಯನ್ನು ಕನಿಷ್ಟ ೩-೪ ದಿವಸದ ಮಟ್ಟಿಗಾದರೂ ಮಾಡಿದರೆ ಸಮಗ್ರವಾಗಿ ಎಲ್ಲಾ ಇಲಾಖೆಗಳ ಬಗ್ಗೆಯೂ ಬೆಳಕನ್ನು ಚೆಲ್ಲುವುದಕ್ಕೆ ಅನುಕೂಲವಾಗುತ್ತದೆ. ಒಟ್ಟೊಟ್ಟಿಗೆ ೫-೬ ಇಲಾಖೆಗಳನ್ನು ಸೇರಿಸುವುದರಿಂದ ಯಾವ ಇಲಾಖೆಯ ಬಗ್ಗೆ ಮಾತನಾಡಬೇಕು ಹಾಗೂ ಯಾವುದನ್ನು ಬಿಡಬೇಕೆನ್ನುವ ಪ್ರಶ್ನೆ ಬರುತ್ತದೆ. ಆದರೂ ತಮಗೆ ನಾನು ಮನವಿ ಸಲ್ಲಿಸಿದ್ದೇನೆ. ದಯಮಾಡಿ ಅದನ್ನು ಯಾವ ರೀತಿ ತೀರ್ಮಾನ ಮಾಡುತ್ತೀರಿ ಎಂಬುದು ತಮಗೆ ಬಿಟ್ಟಿದ್ದು. ಈ ಸ್ಥಳೀಯ ಸಂಸ್ಥೆಗಳ ಬಗ್ಗೆ ನಾವು ಇವತ್ತು ಪ್ರಧಾನಮಂತ್ರಿಗಳವರು ಮುಖ್ಯ ಮಂತ್ರಿಗಳ ಸಭೆಯಲ್ಲಿ ಆಶಾದಾಯಕವಾದ ಕೆಲವು ಮಾತುಗಳನ್ನಾಡಿದ್ದಾರೆ. ಅದನ್ನು ನಾನಾದರೂ ಈ ಸಭೆಯಲ್ಲಿ ಸ್ವಾಗತಿಸುತ್ತೇನೆ. ಸ್ಥಳೀಯ ಸಂಸ್ಥೆಗಳು ಪ್ರಜಾಪ್ರಭುತ್ವದ ಒಂದು ತಳಹದಿ. ಆ ಸ್ಥಳೀಯ ಸಂಸ್ಥೆಗಳ ತಳಹದಿ ಉಳಿಯಬೇಕಾದರೆ ಆ ಸಂಸ್ಥೆಗಳಿಗೆ ಸಮಗ್ರವಾದಂತಹ ಅಧಿಕಾರವನ್ನು ನೀಡಬೇಕು. ಸಮಗ್ರವಾಗಿ ಮುಕ್ತ ಚುನಾವಣೆ ನಡೆಯುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು. ಸ್ಥಳೀಯ ಸಂಸ್ಥೆಗಳಾಗಲಿ, ಪುರಸಭೆಗಳಾಗಲಿ, ನಗರದ ಮಹಾನಗರಪಾಲಿಕೆಗಳಾಗಲಿ, ಈ ಚುನಾವಣೆಯ ವ್ಯವಸ್ಥೆಯನ್ನು ರಾಜ್ಯ

ಸರ್ಕಾರದಿಂದ ಕೇಂದ್ರದ ಚುನಾವಣಾ ಆಯೋಗಕ್ಕೆ ವಹಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೇಂದ್ರದ ಚುನಾವಣಾ ಆಯೋಗಕ್ಕೆ ಈ ಒಂದು ವ್ಯವಸ್ಥೆಯನ್ನು ವಹಿಸಿದಾಗ ಮುಕ್ತ ಚುನಾವಣೆ ನಡೆಯುತ್ತದೆ. ಕಾಲಕ್ಕೆ ತಕ್ಕಂತೆ ಚುನಾವಣೆ ಬರುತ್ತದೆ. ಈಗ ಸರ್ಕಾರ ಚುನಾವಣೆ ನಡೆಸತಕ್ಕ ರೀತಿ ನೀತಿಗಳನ್ನು ತಾವು ಇವತ್ತಿನ ದಿನಗಳಲ್ಲಿ ನೋಡಿದ್ದೀರಿ; ನಗರಪಾಲಿಕೆ ಚುನಾವಣೆ ಮಹಾನಗರಪಾಲಿಕೆ ಚುನಾವಣೆ, ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಬೇಕೆಂದು ನಿರ್ಧಾರವಾದಂತಹ ದಿನಾಂಕ ಒಂದು ಮತ್ತೆ ಅದು ಬದಲಾವಣೆ ಆದ ದಿನಾಂಕ ಬೇರೆ ಹೀಗೆ ಒಂದಲ್ಲ ಒಂದು ರೀತಿಯಲ್ಲಿ ಸರ್ಕಾರದ ಹಸ್ತಕ್ಷೇಪ ಈ ಚುನಾವಣೆಗಳ ಮೇಲೆ ನಡೆಯಿತು. ಇದರ ಪರಿಣಾಮವಾಗಿ ಪ್ರಜಾ ಪ್ರಭುತ್ವದ ದೇಗುಲಗಳಾದಂತಹ ಸ್ಥಳೀಯ ಸಂಸ್ಥೆಗಳ ಮೇಲೆ ತೀವ್ರ ತರವಾದ ಪರಿಣಾಮ ಬಿದ್ದು ಜನತೆಯಲ್ಲೂ ಈ ಚುನಾವಣೆಯ ಬಗ್ಗೆ ಏನು ಒಂದು ನಂಬಿಕೆ ಇತ್ತು ಆ ನಂಬಿಕೆ ಸಹ ಹೋಗಿದೆ ಈ ದೃಷ್ಟಿಯಿಂದ ಈ ಒಂದು ಚುನಾವಣೆಗಳನ್ನು ಶಾಸನಸಭೆಗೆ ಮತ್ತು ಲೋಕಸಭೆಗೆ ನಡೆಯುವ ರೀತಿ ಯಲ್ಲಿ ಈ ಚುನಾವಣೆ ನಿರ್ಧಾರವನ್ನು ಕೈಗೊಳ್ಳತಕ್ಕ ಸಮಗ್ರ ಅಧಿಕಾರವನ್ನು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದಿಂದ ಕಸಿದುಕೊಂಡು ಚುನಾವಣಾ ಆಯೋಗಕ್ಕೆ ಕೊಡಬೇಕೆಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಈ ಸ್ಥಳೀಯ ಸಂಸ್ಥೆಗಳು ಅದರಲ್ಲೂ ಪುರಸಭೆಗಳ ಪರಿಸ್ಥಿತಿ ಅತ್ಯಂತ ಶೋಚನೀಯವಾದಂಥ ಪರಿಸ್ಥಿತಿಯಲ್ಲಿದೆ. ಅವರಿಗೆ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳು ವುದಕ್ಕೋಸ್ಕರವಾಗಿ ಯಾವುದೇ ಒಂದು ವಿಧಾನ ಇಲ್ಲ. ಆದುದರಿಂದ ಕರ್ನಾಟಕದಲ್ಲಿರತಕ್ಕ ಅನೇಕ ಪುರಸಭೆಗಳು ಅತ್ಯಂತ ಸತ್ವಹೀನವಾಗಿ ಪುರಸಭೆಯ ವ್ಯಾಪ್ತಿಯಲ್ಲಿರತಕ್ಕ ನಾಗರೀಕರಿಗೆ ಉತ್ತಮವಾದ ಸೌಲಭ್ಯವನ್ನು ಕೊಡುವುದರಲ್ಲಿ ವಂಚಿತರಾಗಿದ್ದಾರೆ. ಮತ್ತು ಪುರಸಭೆ ಕೆಲಸಗಾರರಿಗೆ ಸಂಬಳ ಕೊಡುವುದರಲ್ಲಿಯೂ ಬಹಳ ಹಿಂದೆ ಬಿದ್ದಿರತಕ್ಕ ಅನೇಕ ಪುರಸಭೆಗಳು ಇವೆ. ನಾನು ಈ ಬಗ್ಗೆ ನಿನ್ನೆ ಈ ಸಭೆಯಲ್ಲಿ ತಿಳಿಸಿದೆ. ಅನೇಕ ಕಡೆ ಕಸ ಗುಡಿಸುವುದಕ್ಕೆ ಪರಕೆಯನ್ನು ಕೊಂಡುಕೊಳ್ಳುವುದಕ್ಕೆ ಹಣವೇ ಇಲ್ಲ ಇಂತಹ ಪರಿಸ್ಥಿತಿ ಇದೆ. ಇದು ನನ್ನ ಸ್ಪಷ್ಟವಾದ ಅಭಿಪ್ರಾಯ ಆಗಿದೆ. ಆದ್ದರಿಂದ ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಈ ಪುರಸಭೆಗಳ ಸಂಪನ್ಮೂಲದ ಬಗ್ಗೆ ಸಮಗ್ರವಾಗಿ ಒಂದು ವರದಿಯನ್ನು ೩೦ ದಿವಸ ದೊಳಗಾಗಿ ಕೊಡುವುದಕ್ಕೆ ಸದನ ಸಮಿತಿ ರಚಿಸಬೇಕು. ಪುರಸಭೆಯ ವ್ಯಾಪ್ತಿಯ ನಾಗರೀಕರಿಗೆ ಅನುಕೂಲ ಒದಗಿಸುವ ಸಲುವಾಗಿ ಒಂದು ವರದಿಯನ್ನು ಕೊಡುವುದಕ್ಕೆ ಒಂದು ಸದನದ ಸಮಿತಿಯನ್ನು ಸರ್ಕಾರ ರಚಿಸಬೇಕು. ಆ ಸಮಿತಿಯ ವರದಿಯ ಆಧಾರದ ಮೇಲೆ ಈ ಪುರಸಭೆಗಳ ಸಂಪನ್ಮೂಲಕ್ಕೆ ಸರ್ಕಾರದಿಂದ ಅನುದಾನ ಅಥವಾ ಯಾವುದೇ ರೂಪದಲ್ಲಿ ಪ್ರತಿವರ್ಷ ನಿಮ್ಮ ಪುರಸಭೆಯ ಮೂಲಕ ನೀವು ತೆರಿಗೆಯನ್ನು ವಸೂಲು ಮಾಡಿ ಮಾಡದೇ ಇರಿ, ನಾವಂತೂ ಸರ್ಕಾರದಿಂದ ಇಷ್ಟನ್ನು ಕೊಟ್ಟೇ ಕೊಡುತ್ತೇವೆಂದು ಹೇಳಬೇಕು. ಕೊನೆಯ ಪಕ್ಷ ಕಸ ಹೊಡೆಯುವುದಕ್ಕಾದರೂ ಹಣ, ಮತ್ತು ಅಲ್ಲಿನ ಕೆಲಸಗಾರರ ಸಂಬಳಕ್ಕಾದರೂ ಹಣ ಕೊಡುವ ನೀತಿಯಲ್ಲಿ ಸರ್ಕಾರ ಹೋಗಬೇಕು. ಕನಿಷ್ಟ ಪ್ರತಿ ಪುರಸಭೆಗಳಿಗೆ ಸರ್ಕಾರ ಪ್ರತಿವರ್ಷ ನಿಮ್ಮಿಂದ ಯಾವುದೇ ಒಂದು ನಿರೀಕ್ಷಣೆಯನ್ನು ಮಾಡದೆ ನಾವು ವರ್ಷಕ್ಕೊಂದು ಸಾರಿ ಇಷ್ಟು ಸಹಾಯ ಧನವನ್ನು ಕೊಡುತ್ತೇವೆನ್ನತಕ್ಕ ನಿರ್ಧಾರವನ್ನು ಸರ್ಕಾರ ಮಾಡಿದರೆ ಯಾವ ಒಂದು ಪ್ರಜಾಪ್ರಭುತ್ವದ ದೇಗುಲಗಳಾದಂತಹ ಪುರಸಭೆಗಳು ಉಳಿಯುತ್ತವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಅತ್ಯಂತ ಪ್ರಮಾಣಿಕವಾಗಿ ನಾನು ಮಾನ್ಯ ಸಚಿವರಿಗೆ ಈ ಸಲಹೆಯನ್ನು ಕೊಡುತ್ತಿದ್ದೇನೆ.

ಮಾನ್ಯ ನರಸಿಂಹಮೂರ್ತಿಯವರು ಈ ಇಲಾಖೆಗೆ ಬಂದಿದ್ದಾರೆ ಎಂದು ನಾನು ಬಹಳ ಸಂತೋಷ ಪಟ್ಟೆ. ಅವರು ಬಹಳ ಚುರುಕಿನಿಂದ ಕೆಲಸ ಮಾಡತಕ್ಕ ವ್ಯಕ್ತಿ. ಅವರಿಗೆ ಯಾವುದೇ ಇಲಾಖೆ ಕೊಟ್ಟರೂ ಸಹ ಬಹಳ ದಕ್ಷತೆಯಿಂದ, ಚೈತನ್ಯದಿಂದ, ಕೆಲಸ ಮಾಡುತ್ತಾರೆ. ಅವರಲ್ಲಿ ನಗು ಉತ್ಸಾಹ ಇದೆಲ್ಲಾ ಇದೆ. ಇನ್ನೂ ೪-೫ ಇಲಾಖೆಗಳನ್ನು ಕೊಟ್ಟರೂ ಕೂಡ ದಕ್ಷತೆಯಿಂದ ಕೆಲಸ ಮಾಡುತ್ತಾರೆಂದು ನನಗೆ ವಿಶ್ವಾಸ ಇದೆ. ಅವರ ಬಗ್ಗೆ ನನಗೆ ಮೆಚ್ಚುಗೆ ಇದೆ. ಆ ಮೆಚ್ಚುಗೆಯನ್ನು ಅವರು ಕಾರ್ಯರೂಪದಲ್ಲಿ ತರಬೇಕು. ಈ ಸ್ಥಳೀಯ ಸಂಸ್ಥೆಗಳಿಗೆ ಒಂದು ಹೊಸ ಚೈತನ್ಯವನ್ನು ತಮ್ಮ ಕಾಲದಲ್ಲಿ ಕೊಡಬೇಕು ಎಂದು ಹೇಳುತ್ತೇನೆ. ಹಿಂದೆ ನಜೀರ್ ಸಾಹೇಬ್‌ರವರು ಈ ಪ್ರಜಾಪ್ರಭುತ್ವವನ್ನು ಉಳಿಸುವುದಕ್ಕೆ ಪಂಚಾಯತ್‌ರಾಜ್ ವ್ಯವಸ್ಥೆಯ ಪದ್ಧತಿಯನ್ನು ಏನು ತಂದಿದ್ದಾರೆ ಅದು ಇಡೀ ದೇಶದಲ್ಲಿಯೇ ಬಹಳ ಯಶಸ್ವಿಯಾಗಿದೆ. ಕರ್ನಾಟಕದಲ್ಲಿ ಈ ವ್ಯವಸ್ಥೆ ಬಹಳ ಚೆನ್ನಾಗಿ ಕೆಲಸ ಮಾಡಿದೆ ಎಂದು ಮಾನ್ಯ ಪ್ರಧಾನ ಮಂತ್ರಿಗಳೂ ಸಹ ಹೊಗಳಿದ್ದಾರೆ. ಆದ್ದರಿಂದ ತಮ್ಮ ಅಧಿಕಾರದಲ್ಲಿ ಈ ಸ್ಥಳೀಯ ಸಂಸ್ಥೆಗಳನ್ನು ಉತ್ತಮಗೊಳಿಸುವುದಕ್ಕೆ ಒಂದು ಒಳ್ಳೆಯ ಪ್ರಯತ್ನ ಮಾಡಬೇಕು. ಕೆಲವು ಮಧ್ಯಂತರ ಮಂಡಲಿಗಳು ಇವೆ. ಅದೂ ಸಹ ಹಿಂದೆ ಪುರಸಭೆಗಳು ಆಗಿದ್ದು ಚೆನ್ನಾಗಿ ನಡೆಯುತ್ತಿದ್ದವು. ಅವು ವ್ಯವಸ್ಥಿತವಾಗಿ ನಡೆಯುತ್ತಿದ್ದವು. ಆದರೆ ಈಗ ಅವು

ಕೆಟ್ಟಿವೆ. ತಮ್ಮ ತಾಲ್ಲೂಕ್ ಆದ ಟಿ. ನರಸೀಪುರ ಹಾಗೂ ನನ್ನ ತಾಲ್ಲೂಕಿಗೆ ಸಂಬಂಧಪಟ್ಟಂತೆ ಎರಡು ಕಡೆ ಮಧ್ಯಂತರ ಮಂಡಲಿಗಳು ಏನಿವೆ, ಅದನ್ನು ಹಾಗೂ ಇನ್ನಿತರ ಮಂಡಲಿಗಳನ್ನು ಬದಲಾಯಿಸಿ ಎಲ್ಲವನ್ನೂ ಪುರಸಭೆಯ ವ್ಯಾಪ್ತಿಗೆ ತೆಗೆದುಕೊಂಡು ಅವುಗಳ ಬೆಳವಣಿಗೆಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಬೆಂಗಳೂರು ನಗರಕ್ಕೆ ಬರುತ್ತೇನೆ. ಬೆಂಗಳೂರು ಮಹಾ ನಗರ ಪಾಲಿಕೆಗೆ ಹಾಗೂ ಬೆಂಗಳೂರಿಗೆ ಒಂದು ಇತಿಹಾಸ ಇದೆ. ಬೆಂಗಳೂರು ನಗರಕ್ಕೆ ಶತಶತಮಾನಗಳ ಇತಿಹಾಸ ಇದೆ. ಈ ಬೆಂಗಳೂರು ನಗರವನ್ನು ಕಟ್ಟಿದಂತಹ ಮಹಾನುಭಾವ ಕೆಂಪೇಗೌಡ. ಅವರನ್ನು ನೆನೆಸಿಕೊಳ್ಳಬೇಕು. ಬೆಂಗಳೂರಿನ ನಾಲ್ಕೂ ಕಡೆ ಅವರದ್ದು ಒಂದೊಂದು ಗೋಪುರ ಇದೆ. ಈ ನಾಲ್ಕೂ ಕಡೆಯಿಂದ ಬೆಂಗಳೂರು ನಗರ ಆಚೆಗೆ ಹೋಗಬಾರದು ಎಂದು ಅವರ ನಿರ್ಧಾರ ಇತ್ತು ಎಂದು ನನಗನ್ನಿಸುತ್ತದೆ. ಇವೊತ್ತು ಬೆಂಗಳೂರು ನಗರ ಯಾವ ರೀತಿಯಿಂದ ಬೆಳೆಯುತ್ತಾ ಇದೆ. ಎಷ್ಟು ದೂರ ಮುಂದೆ ಹೋಗಿದೆ ಎಂಬ ಬಗ್ಗೆ ಮಾತನಾಡುವಾಗ ಈ ಬೆಂಗಳೂರಿನಲ್ಲಿಯೇ ಮಂತ್ರಿಗಳು ಇರತಕ್ಕದ್ದು, ಶಾಸನಸಭೆ ಇರತಕ್ಕದ್ದೂ ಸಹ ಬೆಂಗಳೂರಿನಲ್ಲಿ, ಮಂತ್ರಿಗಳ ವಾಸ ಸಹ ಬೆಂಗಳೂರಿನಲ್ಲಿ. ಎಲ್ಲಾ ಉನ್ನತ ಮಟ್ಟದ ಅಧಿಕಾರಿಗಳೂ ಬೆಂಗಳೂರಿನಲ್ಲಿದ್ದಾರೆ ದೊಡ್ಡ ದೊಡ್ಡ ಅಧಿಕಾರಿಗಳು. ಬೇರೆ ಬೇರೆ ರಾಜ್ಯದ ಉನ್ನತ ಮಟ್ಟದ ವ್ಯಕ್ತಿಗಳೂ ಸಹ ಬೆಂಗಳೂರಿನಲ್ಲಿದ್ದಾರೆ. ಆದರೆ ತಾವು ಈ ಬೆಂಗಳೂರು ನಗರದ ಬೆಳವಣಿಗೆ ಬಗ್ಗೆ ಏನು ಕಾಳಜಿ ವಹಿಸಿದ್ದೀರಿ ಅಂದರೆ ಏನೂ ಇಲ್ಲ. ನನ್ನ ಪ್ರಕಾರ ಚುನಾವಣೆಗಳು ನಡೆಯುತ್ತವೆ. ಆಡಳಿತಾಧಿಕಾರಿಗಳು ಬರುತ್ತಾರೆ. ಅದು ಬಿಟ್ಟರೆ ನನಗೆ ಅನ್ನಿಸುವುದು ಬೇರೆ ಏನೂ ಇಲ್ಲ. ಹಿಂದೆ ಪ್ರಧಾನ ಮಂತ್ರಿಗಳಾಗಿದ್ದಂತಹ ದಿ. ಪಂಡಿತ್ ಜವಾಹರ್‌ಲಾಲ್ ನೆಹರೂ ಅವರು ಬೆಂಗಳೂರಿಗೆ ಬಂದಿದ್ದಾಗ ಬೆಂಗಳೂರನ್ನು 'ಕೆಂಪು ಹೂವಿನ ನಗರ' ಎಂದು ಹೇಳಿದ್ದರು. ಇದು ಒಂದು ಸುಂದರವಾದ ನಗರ ಎಂದು ಹೇಳಿದ್ದರು. ಇವೊತ್ತು ಆ ಸುಂದರ ನಗರ ಹೋಗಿ ಕೊಳಚೆ ನಗರ ಆಗಿದೆ. ಬೆಂಗಳೂರು ನಗರವನ್ನು ಸ್ಥಾಪನೆ ಮಾಡಿದ ಕೆಂಪೇಗೌಡರಿಗೆ ಅಪಚಾರ ಮಾಡತಕ್ಕಂಥ ಪರಿಸ್ಥಿತಿ ಇವೊತ್ತು ನಿರ್ಮಾಣ ಆಗಿದೆ. ಬೆಂಗಳೂರು ನಗರದ ಬೆಳವಣಿಗೆ ಬಗ್ಗೆ ಯಾರೂ ಸಹ ಕಾಳಜಿ ವಹಿಸುತ್ತಾ ಇಲ್ಲ. ೫೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಸಹಿತ ಸಾಕಾಗುವುದಿಲ್ಲ ಮೊದಲನೇ ಯೋಜನೆಯಲ್ಲಿ ೫೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಅವಕಾಶ ಇದ್ದರೂ, ಅನೇಕ ಕೆಲಸಗಳು ಇನ್ನೂ ಮುಗಿದಿಲ್ಲ. ಇವೊತ್ತು ಏನು ಆಗಿದೆ, ಬೆಂಗಳೂರು ನಗರ ಪಾಲಿಕೆಗೆ ಚುನಾವಣೆ ಆಗುತ್ತದೆ. ನಗರ ಪಾಲಿಕೆ ಮೇಯರ್‌ರವರು ಬರುತ್ತಾರೆ. ಅವರು ಒಂದು ವರ್ಷ ಇದ್ದು ಹೋಗುತ್ತಾರೆ. ಬೆಂಗಳೂರಿನ ಬೆಳವಣಿಗೆ ಬಗ್ಗೆ ಇವೊತ್ತು ಯಾರಿಗೂ ಕಾಳಜಿ ಇಲ್ಲದಿರುವ ಕಾರಣ ಬೆಂಗಳೂರು ನಗರ ದುರ್ನಾತದ ನಗರ ಆಗಿದೆ. ಬೆಂಗಳೂರಿಗೆ ಬರತಕ್ಕ, ಅಥವಾ ಬೆಂಗಳೂರಿಗೆ ಬಂದು ಸೇರತಕ್ಕ ರಾಜ ಮಾರ್ಗಗಳು ಏನಿವೆ, ಅಂದರೆ, ಮೈಸೂರಿನಿಂದ ಬರತಕ್ಕ, ದಾವಣಗೆರೆಯಿಂದ ಬರತಕ್ಕ, ಕೋಲಾರದಿಂದ ಬರತಕ್ಕ ಕನಕಪುರದಿಂದ ಮಹಾನಗರಕ್ಕೆ ಬರತಕ್ಕ ದೊಡ್ಡ ದೊಡ್ಡ ರಸ್ತೆಗಳ ಪರಿಸ್ಥಿತಿ ತೀವ್ರ ಶೋಚನೀಯವಾಗಿದೆ. ಮೈಸೂರು ನಗರದಿಂದ ಹೊರಟು ಬೆಂಗಳೂರಿಗೆ ಬರಬೇಕಾದರೆ ಕೆಟ್ಟ ವಾಸನೆ ಬರುತ್ತದೆ. ವೃಷಭಾವತಿ ನದಿಯಿಂದ ಈ ರೀತಿ ವಾಸನೆ ಬರುತ್ತದೆ. ವೃಷಭಾವತಿ ನದಿಗೆ ಒಂದು ಮಹತ್ತರವಾದ ಇತಿಹಾಸ ಇದೆ. ಅಲ್ಲಿ ಕೊಳಚೆ ನಿಂತು ಕೆಟ್ಟು ನಾರುತ್ತಿದೆ. ಈ ರೀತಿಯಿಂದ ಬೆಂಗಳೂರು ನಗರ ನಾರುತ್ತಿದೆ. ಕೆಟ್ಟ ವಾಸನೆಯಿಂದ ಕೂಡಿದೆ. ಕೊಳಚೆಗೆ ಆಗರವಾಗಿದೆ. ಈ ಕೊಳಚೆಯಿಂದಾಗಿ ಬರಬಾರದ ೧೦೮ ರೋಗಗಳು ಬರುತ್ತವೆ. ಇದರ ಬಗ್ಗೆ ಸಮಗ್ರವಾದ ಚಿಂತನೆಯನ್ನು ಯಾರೂ ಸಹ ಮಾಡಿಲ್ಲ. ಇಂತಹ ಅನೇಕ ವಿಚಾರಗಳಲ್ಲಿ ಬೆಂಗಳೂರು ನಗರವನ್ನು ಸಮಗ್ರವಾಗಿ ಕಡೆಗಾಣಿಸಿದ್ದಾರೆ. ಹಿಂದೆ ಬೆಂಗಳೂರು ನಗರದ ಜನಸಂಖ್ಯೆ ಹತ್ತು ಲಕ್ಷ ಇದ್ದುದು ಇವೊತ್ತು ೪೫ ಲಕ್ಷಕ್ಕೆ ಬಂದಿದೆ. ೧೦ ಲಕ್ಷ ಜನಸಂಖ್ಯೆ ಇದ್ದಾಗ ಯಾವ ಒಂದು ರಸ್ತೆಗಳು ನಿರ್ಮಾಣ ಆಗಿತ್ತು, ೪೫ ಲಕ್ಷ ಜನರಿಗೂ ಸಹ ಅದೇ ರಸ್ತೆಗಳಿವೆ. ಇಂತಹ ಒಂದು ಪರಿಸ್ಥಿತಿಯನ್ನು ನೋಡಿದರೆ ಎರಡು ಸಾವಿರ ವರ್ಷಕ್ಕೆ ಈ ಜನಸಂಖ್ಯೆಯು ಹೆಚ್ಚಾಗಿ ಒಂದು ಕೋಟಿಗೆ ತಲುಪುತ್ತದೆ. ನಾವೇನು ಮಾಡಿದ್ದೇವೆ ಏನೂ ಮಾಡಿಲ್ಲ. ಬೆಂಗಳೂರು ನಗರದಲ್ಲಿ ಆಶ್ರಯ ಪಡೆದಿರತಕ್ಕವರು ಅಂದರೆ ಶಾಸನಸಭೆ ಇದೆ, ಮಂತ್ರಿಗಳಿದ್ದಾರೆ ಮತ್ತು ಮಹಾ ಉನ್ನತವಾದಂಥ ಶಕ್ತಿಗಳು ಇಲ್ಲಿದ್ದಾರೆ. ಬೆಂಗಳೂರು ನಗರವನ್ನು ಬೆಳೆಸುವ ಬಗ್ಗೆ ಇವರು ಯಾರಿಗೂ ಗಮನವಿಲ್ಲ. ಇವತ್ತು ಬೆಂಗಳೂರು ನಗರವನ್ನು ಬೆಳೆಸುವುದಕ್ಕೆ ಒಂದು ಮಾಸ್ಟರ್‌ಪ್ಲಾನನ್ನು ಒಂದು ಉನ್ನತವಾದಂಥ ಯೋಜನೆಯನ್ನು ಸರ್ಕಾರ ಹಾಕಿಕೊಳ್ಳಬೇಕಾಗಿದೆ. ಬೆಂಗಳೂರು ನಗರ ಕರ್ನಾಟಕದ ಹೃದಯ. ಕರ್ನಾಟಕದ ರಾಜಧಾನಿ. ಈ ಬೆಂಗಳೂರು ನಗರದ ಅಭಿವೃದ್ಧಿಯ ಬಗ್ಗೆ ಮೂರು ವರ್ಷಗಳ ಅವಧಿಯಲ್ಲಿ ಸಮರ್ಥವಾದಂಥ ಒಂದು ಯೋಜನೆಯನ್ನು, ಉಪಯುಕ್ತವಾದಂಥ ಯೋಜನೆಯನ್ನು ಹಾಕಿಕೊಳ್ಳಬೇಕು. ಸುಮಾರು

ಕನಿಷ್ಟ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಬೆಂಗಳೂರು ನಗರವನ್ನು ಸುಂದರವನ್ನಾಗಿ ಮಾಡುವಂಥ ಒಂದು ಯೋಜನೆಯನ್ನು ಸರ್ಕಾರ ಹಾಕಿಕೊಳ್ಳಬೇಕು. ಈಗಾಗಲೇ ಕೇಂದ್ರ ಸರ್ಕಾರದಿಂದ ಬಾಂಬೆ ನಗರಕ್ಕೆ ಹಣವನ್ನು ಪಡೆದಿದ್ದಾರೆ, ಕೇಂದ್ರ ಸರ್ಕಾರದಿಂದ ಕಲ್ಕತ್ತ ನಗರಕ್ಕೆ ಹಣವನ್ನು ಪಡೆದಿದ್ದಾರೆ, ಡೆಲ್ಲಿ ನಗರವನ್ನು ಬೆಳೆಸುವುದಕ್ಕೆ ಕೇಂದ್ರದಿಂದ ಹಣವನ್ನು ಪಡೆದಿದ್ದಾರೆ. ಆದರೆ ಬೆಂಗಳೂರಿನವರು ಬೆಂಗಳೂರು ನಗರದ ಬೆಳವಣಿಗೆಗೆ ಇವತ್ತಿನವರೆಗೂ ನನಗೆ ತಿಳಿದ ಮಟ್ಟಿಗೆ ಯಾವುದೇ ವಿಧವಾದ ಅಭಿವೃದ್ಧಿ ಕಾರ್ಯಕ್ಕೆ ಹಣವನ್ನು ಇಲ್ಲಿ ಪಡೆದಿಲ್ಲ. ಇವತ್ತೂ ಸಹ ಹಳೇ ಕಾಲದ ಅದೇ ವಿದ್ಯುಚ್ಛಕ್ತಿ ತಂತಿಗಳು, ಅದೇ ಕಂಬಗಳು ಇವೆ. ಜೋರಾಗಿ ಗಾಳಿ ಬೀಸಿ, ಮಳೆ ಬಿದ್ದರೆ ಪ್ರತಿ ವರ್ಷ ವಿದ್ಯುಚ್ಛಕ್ತಿ ಕಂಬದಿಂದ ಸಾಯತಕ್ಕಂಥ ವಿಷಯವನ್ನು ತಾವು ಕೇಳಿದ್ದೀರಿ ಮಳೆ ಬಂದರೆ ಬೆಂಗಳೂರು ನಗರದಲ್ಲಿ ಇದ್ದಕ್ಕಿದ್ದಹಾಗೆ ಪ್ರವಾಹ ಬರುತ್ತದೆ. ನನಗೆ ತಿಳಿದಹಾಗೆ ೮-೯ ತಿಂಗಳ ಹಿಂದೆ ಅಥವಾ ಒಂದು ವರ್ಷದ ಹಿಂದೆ ಭಾರಿ ಮಳೆ ಬಂದು ಇಡೀ ಊರು ಊರಿಗೆ ನೀರು ನುಗ್ಗಿ, ಕೇರಿ ಕೇರಿಗೇ ನೀರು ನುಗ್ಗಿ ಅನೇಕ ಜನರ ಪ್ರಾಣವನ್ನು ಆಹುತಿ ತೆಗೆದುಕೊಂಡಿರತಕ್ಕದ್ದನ್ನು ತಾವು ನೋಡಿದ್ದೀರಿ. ಒಳಚರಂಡಿ ವ್ಯವಸ್ಥೆ ಅತ್ಯಂತ ಶೋಚನೀಯವಾಗಿದೆ. ಬೆಂಗಳೂರು ನಗರದ ಒಳಚರಂಡಿ ವ್ಯವಸ್ಥೆ ಕೆಟ್ಟಿರುವಷ್ಟು ಇನ್ನೇನೂ ಕೆಟ್ಟಿಲ್ಲ, ಅಷ್ಟು ಒಳಚರಂಡಿ ಕೆಟ್ಟಿದೆ ವಿದ್ಯುಚ್ಛಕ್ತಿ ಸಮಗ್ರವಾಗಿ ಕೆಟ್ಟಿದೆ. ಇವು ಮಹಾ ಪಾತಕಿಗಳು. ವಿದ್ಯುಚ್ಛಕ್ತಿ ಮಂಡಲಿ, ಒಳಚರಂಡಿ ಮಂಡಲಿ ಇವೆಲ್ಲ ಒಂದುರೀತಿ ಮಹಾ ಪಾತಕಿಗಳು ಇದ್ದಹಾಗೆ. ನಗರದ ಜನತೆಗೆ ಕೊಡತಕ್ಕಂಥ ಸೌಲಭ್ಯದ ಬಗ್ಗೆ ಅವರು ಗಮನಹರಿಸುತ್ತಾ ಇಲ್ಲ, ಅತ್ಯಂತ ಶೋಚನೀಯವಾದಂಥ ಪರಿಸ್ಥಿತಿ ಬಂದಿದೆ. ಕೆಲವು ಕಡೆ ಭೂಮಿಯ ಒಳಗಡೆ ಕೊಳವೆಯನ್ನು ಹಾಕಿ ವಿದ್ಯುಚ್ಛಕ್ತಿ ಕೇಬಲ್‌ನ್ನು ಒಳಗಡೆ ಹಾಕಿ ಹೊಸ ಮಾದರಿಯಲ್ಲಿ ವಿದ್ಯುತ್ ಕೊಡಬೇಕು ಎನ್ನತಕ್ಕಂಥ ಒಂದು ಯೋಜನೆ ಸುಮಾರು ವರ್ಷದಿಂದ ಇದೆ. ಆದರೆ ಆ ಯೋಜನೆ ಇವತ್ತು ಇಲ್ಲ. ಇವತ್ತು ಬರೀ ಕಂಬಗಳಿಗೆ ತಂತಿಗಳನ್ನು ಹಾಕಿ ಪ್ರತಿ ಮನೆಗೆ ವಿದ್ಯುತ್ ಕೊಡತಕ್ಕಂಥಾದ್ದು ನಡೆಯುತ್ತಾ ಇದೆ. ಇದೇರೀತಿ ಇವತ್ತು ಮುಂದುವರಿಯುತ್ತಿದೆಯೇ ಹೊರತು ಒಂದು ವ್ಯವಸ್ಥಿತವಾದಂಥ ಯೋಜನೆ ವಿದ್ಯುಚ್ಛಕ್ತಿ ಮಂಡಲಿಯಲ್ಲಿ ಇಲ್ಲ ಒಳಚರಂಡಿ ಮಂಡಲಿಯಲ್ಲಿ ಇಲ್ಲ. ಈ ಬೆಂಗಳೂರು ನಗರವನ್ನು ಬೆಳಸದೇ ಇರಬಾರದು, ನಗರ ಉಳಿಯಬೇಕು ಎಂಬ ಪ್ರಾಮಾಣಿಕವಾದಂಥ ಪ್ರಯತ್ನ ನಮ್ಮ ರಾಜ್ಯದ ಅತ್ಯಂತ ಉನ್ನತವಾದಂಥ, ಆಡಳಿತವನ್ನು ನಡೆಸಿದಂಥ ಈ ಸದನವನ್ನು ಕಟ್ಟಿದಂಥ ಕೆಂಗಲ್ ಹನುಮಂತಯ್ಯನವರಿಗೆ ಒಂದು ದೂರ ದೃಷ್ಟಿ ಇತ್ತು. ಈ ನಗರ ಬೆಳೆಯಬೇಕು, ಈ ನಗರ ಉಳಿಯಬೇಕು ಎಂಬ ಅತ್ಯಂತ ಭವ್ಯವಾದಂಥ ದೃಷ್ಟಿ ಇತ್ತು. ನಂತರ ಈ ನಗರದಲ್ಲಿ ಅನೇಕ ಜನ ಮೇಯರುಗಳಾದರು, ಅವರೂ ಸಹ ಬಹಳ ಪ್ರಾಮಾಣಿಕವಾದಂಥ ಪ್ರಯತ್ನ ಮಾಡಿದರು. ಆದರೆ ಹಣದ ಕೊರತೆಯಿಂದ ನಗರ ಸುಂದರವಾಗುವುದಕ್ಕೆ ಬಿಟ್ಟಿಲ್ಲ. ಆದರೆ ಈ ನಗರ ಬೆಳೆಯುತ್ತಾ ಇದೆ. ನಗರ ಎಲ್ಲಿಯವರೆಗೆ ಹೋಗುತ್ತಿದೆಯೆಂದರೆ ಇದು ಎಲ್ಲೆ ಮೀರಿ ಹೋಗುತ್ತಿದೆ. ಜನಸಂಖ್ಯೆ ೧೦ ಲಕ್ಷ ಇದ್ದದ್ದು ಇವತ್ತು ೪೫ ಲಕ್ಷಕ್ಕೆ ಬಂದಿದೆ. ಬೇರೆ ಬೇರೆ ರಾಜ್ಯಗಳಿಂದ ಬೆಂಗಳೂರು ನಗರಕ್ಕೆ ಬರತಕ್ಕ ವಲಸೆಯನ್ನು ನಾವು ತಡೆಯಲಿಲ್ಲ ಅಂದರೆ ನಿಜವಾಗಲೂ ಅಂತಿಮವಾಗಿ ಬೆಂಗಳೂರು ನಗರದಲ್ಲಿ ಒಂದು ದೊಡ್ಡ ಯುದ್ಧವೇ ಪ್ರಾರಂಭವಾಗುತ್ತದೆ ಎಂದು ನಾನು ತಮಗೆ ಹೇಳುತ್ತಾ ಇದ್ದೇನೆ. ಇವತ್ತು ಬೆಂಗಳೂರು ನಗರದಲ್ಲಿ ನಾವು ನಿವೇಶನ ಕೊಡುವುದಕ್ಕೆ ಆಗುತ್ತಾ ಇಲ್ಲ, ನೀರು ಕೊಡುವುದಕ್ಕೆ ಆಗುತ್ತಾ ಇಲ್ಲ, ಸಾರಿಗೆ ವ್ಯವಸ್ಥೆ ಕೊಡುವುದಕ್ಕೆ ಆಗುತ್ತಾ ಇಲ್ಲ. ಈ ಪರಿಸ್ಥಿತಿಯನ್ನು ನೋಡಿದಾಗ ಬೆಂಗಳೂರು ನಗರ ಒಂದು ರೀತಿಯಲ್ಲಿ ವಿಷದಿಂದ ಬೆಳೆಯುತ್ತಿದೆ. ಯಾವ ಈ ಬೆಂಗಳೂರು ನಗರವನ್ನು ನಾವು ಎಷ್ಟು ವೈಭವದಿಂದ ಕಟ್ಟಿದ್ದೆವೋ ಈ ಸಾರಿಗೆ ಅತಿರೇಕದಿಂದ ವಾಹನಗಳ ಓಡಾಟದಿಂದ ನಮಗೆ ಒಳ್ಳೆಯ ಗಾಳಿ ಸಿಗುತ್ತಾ ಇಲ್ಲ. ನಾವು ಒಂದು ಸರ್ಕಲ್‌ನಲ್ಲಿ ನಿಂತರೆ ಸುಮಾರು ಹತ್ತು ಸಾವಿರ ವಾಹನಗಳು ಒಂದೇ ಸಾರಿ ಬರುತ್ತವೆ. ಅವುಗಳ ಹೊಗೆ ಮುಗಿಲೆದ್ದು ಆಕಾಶಕ್ಕೆ ಹೋಗುತ್ತದೆ; ಇದನ್ನು ನಾವು ಅನೇಕಸಾರಿ ನೋಡಿರಬಹುದು. ಈ ಬೆಂಗಳೂರಿನ ಪರಿಸರ ಸಮಗ್ರವಾಗಿ ನಾಶವಾಗುತ್ತಿದೆ. ಒಂದರಿಂದ ಒಂದು ಎಲ್ಲವನ್ನೂ ಲೆಕ್ಕ ಹಾಕಿದಾಗ ಈ ಬೆಂಗಳೂರು ಯಾವ ಪವಿತ್ರವಾದಂಥ ಸುಂದರನಗರವಾಗಿತ್ತು ಅದು ಕಲುಷಿತ ನಗರವಾಗುತ್ತಾ ಇದೆ.

ವಿಷದಿಂದ ಕೂಡಿದ ನಗರವಾಗಿದೆ, ವಿಷದ ಗಾಳಿಯನ್ನು ಕುಡಿಯತಕ್ಕ ನಗರವಾಗಿದೆ. ಇವತ್ತು ಅಡ್ಡಾದಿಡ್ಡಿ ಬೆಳೆಯತಕ್ಕ ನಗರವಾಗಿದೆ. ಆದ್ದರಿಂದ ಹೊರಗಡೆಯಿಂದ ಬರತಕ್ಕ ವಲಸೆಯನ್ನು ತಡೆಯುವುದಕ್ಕೆ ಸರ್ಕಾರ ಕಾನೂನು ಮಾಡಬೇಕು. ಮಾನ್ಯ ಮಂತ್ರಿಗಳು ಮೊನ್ನೆ ಉತ್ತರ ಕೊಡುವಾಗ ಹೊರಗಡೆಯಿಂದ ಬರತಕ್ಕ ಜನರನ್ನು ತಡೆಯುವುದಕ್ಕೆ ಅನೇಕ ಕಾರ್ಯಕ್ರಮಗಳನ್ನು ಹಾಕಿ

ಕೊಂಡಿದ್ದೇವೆಂದು ಹೇಳಿದರು. ಆದರೆ, ಅವರು ಹಾಕಿಕೊಂಡಿರತಕ್ಕ ಕಾರ್ಯಕ್ರಮ ಕಾರ್ಯರೂಪಕ್ಕೆ ಬರಲಿಲ್ಲ. ಬೆಂಗಳೂರು ನಗರದ ಬಗ್ಗೆ ನಿಮಗೆ ಚಿಂತನೆ ಇದ್ದರೆ. ಮೊದಲು ವಲಸೆಯನ್ನು ತಡೆಯ ಬೇಕು ವಲಸೆಯಲ್ಲಿ ಮತದಾರರಿಗೇನೂ ಕಡಿಮೆ ಇಲ್ಲ. ಭೂಟಾಸಿಂಗ್ ವಲಸೆ ಬಂದವರು, ಜೇಠ್ಮಲಾನಿ ವಲಸೆ ಬಂದವರು. ಅವರಿಗೆ ಹಾರತುರಾಯಿ ಹಾಕಿ, ಬೆಳ್ಳಿ ತಟ್ಟೆಯಲ್ಲಿಟ್ಟು ಒಳ್ಳೊಳ್ಳೆಯ ನಿವೇಶನ ಕೊಟ್ಟಿದ್ದೇವೆ. ಅದು ಎಂಥ ಕಡೆ ಸದಾಶಿವನಗರದಂಥ ಕಡೆ ಕೊಟ್ಟಿದ್ದೇವೆ. ನಿಮ್ಮ ಸರ್ಕಾರಕ್ಕೆ ಪ್ರಾಮಾಣಿಕತೆ ಇದ್ದರೆ. ಇದರ ಬಗ್ಗೆ ಒಂದು ತನಿಖೆ ನಡೆಸಿ, ಯಾರು ಯಾರಿಗೆ ನಿವೇಶನಗಳನ್ನು ಹಂಚಿದ್ದಾರೆ. ಎಷ್ಟು ಜನ ಹೊರಗಡೆಯವರಿಗೆ ನಿವೇಶನ ಕೊಟ್ಟಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಇದರಲ್ಲಿ ಅನೇಕ ಜನ ದೊಡ್ಡ ದೊಡ್ಡವರು ಇದ್ದಾರೆ, ಉನ್ನತ ಸ್ಥಾನದಲ್ಲಿರತಕ್ಕವರು ಇದ್ದಾರೆ ಅದೇ ಕರ್ನಾಟಕದವರಿಗೆ ಎಲ್ಲಿ ನಿವೇಶನ ಕೊಟ್ಟಿದ್ದಾರೆ ಬೇರೆ ಯಾವ ನಗರದಲ್ಲಿ ನಿವೇಶನ ಕೊಟ್ಟಿದ್ದಾರೆ ? ಬೆಂಗಳೂರು ನಗರ ಚನ್ನಾಗಿದೆ, ಆರಾಮವಾಗಿ ನಿವೇಶನ ಸಿಗುತ್ತದೆಂದು ಇಲ್ಲಿಗೆ ಕಾಶ್ಮೀರ, ಭೂಪಾಲ್ ಹಾಗೂ ಡೆಲ್ಲಿಯಿಂದ ಅನೇಕ ಜನ ಬಂದಿದ್ದಾರೆ. ಬೆಂಗಳೂರು ನಗರದಲ್ಲಿ ನಿವೃತ್ತ ರಾಜ್ಯಪಾಲರಿಗೆ ನಿವೇಶನ ಕೊಟ್ಟಿದ್ದಾರೆ. ಧರ್ಮವೀರ ಅವರಿಗೆ ಒಂದು ಸೈಟ್ ಕೊಟ್ಟಿದ್ದಾರೆ. ನನ್ನ ಹತ್ತಿರ ಒಂದು ಪಟ್ಟಿ ಇದೆ. ಬೆಂಗಳೂರು ನಗರಕ್ಕೆ ವಲಸೆ ಬರುವವರಲ್ಲಿ ಉನ್ನತ ವ್ಯಕ್ತಿಗಳೂ ಸೇರಿದ್ದಾರೆ. ಸಾಮಾನ್ಯ ಜನಗಳೂ ಸೇರಿದ್ದಾರೆ. ಈ ಒಂದು ವಲಸೆಯನ್ನು ತಡೆಯಲಿಲ್ಲ ಅಂದರೆ, ಬೆಂಗಳೂರು ನಗರಕ್ಕೆ ಅಪಚಾರವಾಗುತ್ತದೆ. ಇವತ್ತು ಯಾರಿಗೋಸ್ಕರ ಈ ನಗರ ಸೌಲಭ್ಯ ಸಿಗಬೇಕಾಗಿತ್ತೋ, ಅವರಿಗೆ ಸಿಕ್ಕಿಲ್ಲ. ಅವರೆಲ್ಲಾ ನಗರವನ್ನು ಬಿಟ್ಟು ಹೊರಗಡೆ ಹೋಗಿದ್ದಾರೆ. ಸ್ವಾಮಿ, ಇತ್ತೀಚಿಗೆ ಈ ನೆಲಗಳ್ಳರ ಕಾಟ ಜಾಸ್ತಿಯಾಗಿದೆ. ಇದರಲ್ಲಿ ಎರಡು ವರ್ಗದವರು ಇದ್ದಾರೆ. ಒಂದು ಆಕಾಶ ಚುಂಬಿ ಮನೆಗಳು ಈ ಒಂದು ವ್ಯವಹಾರ ಬಾಂಬೆಯ ದೊಡ್ಡ ದೊಡ್ಡ ಹೋಟೆಲಿನಲ್ಲಿ ನಡೆದಿದೆ. ಈ ಮನೆಗಳನ್ನು ಕಟ್ಟಿರುವವರು ಕನ್ನಡಿಗರಿಗಲ್ಲ. ಕರ್ನಾಟಕದವರಲ್ಲ. ಹೊರಗಡೆಯಿಂದ ಬಂದಿರತಕ್ಕ ಬಾರಿ ಬಾರಿ ಕಳ್ಳ ಕದೀಮರು. ಇವರು ಕೋಟಿ ಕೋಟಿ ಹಣ ಕೊಟ್ಟು ದೊಡ್ಡ ದೊಡ್ಡ ನಿವೇಶನ ಪಡೆದು ಬೀದಿ ಬೀದಿಯಲ್ಲಿ ಗಗನ ಚುಂಬಿ ಕಟ್ಟಡಗಳನ್ನು ಕಟ್ಟಿಸುತ್ತಿದ್ದಾರೆ, ಇವತ್ತು ನಾವು ಮೇಲಕ್ಕೆ ಹೋಗುತ್ತಿದ್ದೇವೆ, ಚಂದ್ರಲೋಕಕ್ಕೆ ತಲುಪುತ್ತಿದ್ದೇವೆ. ನಗರಸಭೆಯ ಅಧಿಕಾರಿಗಳು ಇದರಲ್ಲಿ ಮೋಸ ಮಾಡಿದ್ದಾರೆ, ಅವರಿಗೆ ಅನುಮತಿ ಕೊಡುವುದರಲ್ಲಿ ಅಧಿಕಾರಿಗಳು ಸಹ ಭ್ರಷ್ಟರಾಗಿದ್ದಾರೆ. ರಾಜಕಾರಣಿಗಳು ಭ್ರಷ್ಟರಾಗಿದ್ದಾರೆ. ಅಂದಿನ ಸರ್ಕಾರ ಸಹ ಭ್ರಷ್ಟವಾಗಿದೆ ಬೆಂಗಳೂರು ನಗರದಲ್ಲಿ ಗಗನ ಚುಂಬಿಯ ಮನೆಗಳು ಯಾರಿಗೆ ಬೇಕಿತ್ತು, ಯಾರ ಉದ್ಧಾರಕ್ಕೆ ಈ ಮನೆಗಳು ಬೇಕಿತ್ತು. ಇವತ್ತು ಈ ಮನೆಗಳೆಲ್ಲಾ ಮಾರ್ವಾಡಿಗಳಿಗೆ, ಗುಜರಾತಿಗಳಿಗೆ ಮತ್ತು ಸಿಂಧಿಗಳಿಗೆ ಸಿಕ್ಕಿವೆ. ಕನ್ನಡಿಗರಿಗೆ ಒಬ್ಬರಿಗೂ ಸಿಕ್ಕಿಲ್ಲ. ರಸ್ತೆ ರಸ್ತೆಯಲ್ಲಿ ಮನೆ ಕೊಡುತ್ತೇವೆ ಬನ್ನಿ ಎಂದು ಕರೆಯುತ್ತಿದ್ದಾರೆ ಒಂದು ಕಡೆ ನೆಲಗಳ್ಳರ ಕಾಟ, ಮತ್ತೊಂದು ಕಡೆ ಗೃಹ ನಿರ್ಮಾಣ ಸಹಕಾರ ಸಂಘಗಳ ಲೂಟಿ ಇತಿಹಾಸದಲ್ಲಿ ಯಾರೂ ಮಾಡದೇ ಇರತಕ್ಕ ಅಪರಾಧವನ್ನು ಮತ್ತು ಮೋಸವನ್ನು ಈ ಸಹಕಾರ ಸಂಘಗಳು ಮಾಡಿವೆ. ಇವುಗಳ ಬಗ್ಗೆ ಜಿ. ವಿ. ಕೆ. ರಾವ್ ಸಮಿತಿ ವರದಿ ಬಂತು. ಇದರ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಇಂಥ ಒಂದು ವ್ಯವಹಾರ ಇರಾನಿನ ಖೊಮೇನಿ ಸರ್ಕಾರದಲ್ಲಿ ನಡೆದಿದ್ದರೆ, ಈ ಗೃಹನಿರ್ಮಾಣ ಮಂಡಲಿಯ ಅಧ್ಯಕ್ಷರನ್ನು ಮತ್ತು ವ್ಯವಸ್ಥಾಪಕರನ್ನು ಕ್ರೇನ್‌ನಲ್ಲಿ ಹಾಕಿ, ಬಹಿರಂಗವಾಗಿ ನೇತು ಹಾಕುತ್ತಿದ್ದರು.

ಉಪಾಧ್ಯಕ್ಷರು.—ನೀವು ಅರ್ಧಗಂಟೆ ಬೇಕೆಂದು ಹೇಳಿದ್ದೀರಿ, ಈಗ ೨೫ ನಿಮಿಷ ಮಾತನಾಡಿದ್ದೀರಿ. ಇನ್ನು ೫ ನಿಮಿಷದಲ್ಲಿ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್.—ಇನ್ನು ೨-೩ ನಿಮಿಷದಲ್ಲಿ ಖಂಡಿತ ಮುಗಿಸುತ್ತೇನೆ.

ಉಪಾಧ್ಯಕ್ಷರು.—ಇನ್ನು ೫ ನಿಮಿಷಗಳಲ್ಲಿ ಮುಗಿಸಿ.

೨—೪೫ ಪಿ. ಎಂ.

ನಮ್ಮ ಬೆಂಗಳೂರು ನಗರ ಯಾವ ಯಾವ ರೀತಿ ಕೆಟ್ಟಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವೊತ್ತು ಬೆಂಗಳೂರು ನಗರ ಒಂದು ಹೃದಯ ಇದ್ದ ಹಾಗೆ. ಈ ಗೃಹ ನಿರ್ಮಾಣ ಸಹಕಾರ ಸಂಘಗಳ ಬಗ್ಗೆ ಮತ್ತೊಂದು ಮಾತನ್ನು ಹೇಳಬೇಕಾಗಿದೆ. ಈ ಗೃಹನಿರ್ಮಾಣ ಸಹಕಾರ ಸಂಘಗಳ ಬಗ್ಗೆ ಮಾನ್ಯ ಸಚಿವರಿಗೆ ಕಳಕಳಿ ಇದ್ದರೆ, ಅವರ ಕಾಗದ ಪತ್ರಗಳನ್ನು ಪರಿಶೀಲಿಸಬೇಕು. ಇತ್ತೀಚಿಗೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಮನೆಗಳನ್ನು ಕಟ್ಟುವವರಿಗೆ ಸಹಾಯ ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ನೋಡಿ ನನಗೆ ಭಯ ಬಂದಿದೆ. ಈಗಾಗಲೇ ಕಲ್ಲನ್ನು ನುಂಗಿ ಕೆಟ್ಟ ಹೆಸರನ್ನು ತಾವು ತೆಗೆದುಕೊಂಡಿದ್ದೀರಿ. ಮುಂದೆ ಈ

ಒಂದು ಗೃಹನಿರ್ಮಾಣ ಮಂಡಲಿಯು ಕಳ್ಳ ಖದೀಮರುಗಳ ಬಗ್ಗೆ ಒಂದು ಕಿರುಗಣ್ಣನ್ನು ಬಿಟ್ಟರೂ ಸಹ ಅದು ನಿಮ್ಮ ಸರ್ಕಾರಕ್ಕೆ ಅಪಕೀರ್ತಿ ಬರುತ್ತದೆ. ಎನ್ನುವ ಮಾತನ್ನು ನಾನು ತಮಗೆ ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಬೆಂಗಳೂರು ನಗರದ ಡೆವಲಪ್‌ಮೆಂಟ್ ಅಥಾರಿಟಿ ಅವರು ಎಷ್ಟು ನಿವೇಶನಗಳನ್ನು ಬಡವರಿಗೆ ಕೊಟ್ಟಿದ್ದಾರೆ. ಇದರ ಬಗ್ಗೆ ತಾವು ಒಂದು ಶ್ವೇತ ಪತ್ರವನ್ನು ಹೊರಡಿಸಿ. ಎಷ್ಟೆಷ್ಟು ವರ್ಷಗಳಿಂದ ಅರ್ಜಿಗಳನ್ನು ಹಾಕಿರುವವರಿಗೆ ಅವರು ಸೈಟು ಕೊಟ್ಟಿದ್ದಾರೆಂಬುದನ್ನು ತಿಳಿಸಬೇಕು. ಒಂದು ಕಡೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತೊಂದು ಕಡೆ ಗೃಹನಿರ್ಮಾಣ ಸಹಕಾರ ಸಂಘಗಳು ಬೇರೆ ಬೇರೆಯಾಗಿ ನಿವೇಶನಗಳನ್ನು ಹಂಚತಕ್ಕಂಥ ಅಂಗಡಿಗಳು. ಬೆಂಗಳೂರು ನಗರದಲ್ಲಿ ಹಸಿರು ವಲಯ, ಗ್ರೀನ್ ಬೆಲ್ಟ್ ಎಂದು ಮಾಡಿತ್ತು, ಆ ಸೊಪ್ಪು ತಿಂದು ಜೀರ್ಣಿಸಿಕೊಂಡು ಬಿಟ್ಟಿದ್ದಾರೆ. ಈಗ ಹಸಿರು ವಲಯ ಎಲ್ಲಿಯೂ ಇಲ್ಲ. ಎಲ್ಲವನ್ನು ಗುಡಿಸಿ ಗುಂಡಾಂತರ ಮಾಡಿದ್ದಾರೆ. ಹತ್ತಾರು ಸಾವಿರ ಎಕರೆ ಪ್ರದೇಶಗಳನ್ನು ಪಡೆದು ಗೃಹನಿರ್ಮಾಣ ಸಂಘಗಳಿಗೆ ಕೊಟ್ಟಿದ್ದಾರೆ. ಇವರಲ್ಲಿ ಕೋಟ್ಯಾಂತರ ರೂಪಾಯಿ ವ್ಯವಹಾರ ನಡೆದಿದೆ. ಇದರ ಬಗ್ಗೆ ಸರ್ಕಾರ ಧೈರ್ಯವಾಗಿ ನಿಟ್ಟನಿಲುವಿನಲ್ಲಿ ತೀರ್ಮಾನಕ್ಕೆ ಬರಬೇಕು, ಇದನ್ನು ನಿಮ್ಮ ಸರ್ಕಾರ ಮಾಡಿದೆ ಎಂದು ನಾನು ಆರೋಪ ಮಾಡುತ್ತಿಲ್ಲ. ನಿಮಗಿಂತಲೂ ಮುಂಚೆ ಇದ್ದಂಥ ಸರ್ಕಾರ ಈ ಎಲ್ಲ ಅನುಕೂಲಗಳನ್ನು ಮಾಡಿಕೊಟ್ಟಿದ್ದಾರೆ. ತಮ್ಮದು ಆದರ್ಶ ಸರ್ಕಾರ ಎಂದು ಹೇಳುವ ನೀವು ಈ ಬಗ್ಗೆ ಸಮಗ್ರವಾಗಿ ತನಿಖೆ ನಡೆಸಿ, ಈ ಗೃಹನಿರ್ಮಾಣ ಮಂಡಲಿಯ ಮೇಲೆ ಕೂಡಲೇ ಕ್ರಮವನ್ನು ತೆಗೆದುಕೊಳ್ಳಬೇಕು. ಮೊದಲು ಬೆಂಗಳೂರು ನಗರದಲ್ಲಿ ೨೮೦ ಒಳ್ಳೆಯ ಒಳ್ಳೆಯ ಕೆರೆಗಳು ಇದ್ದವು. ಆ ಕಾಲದಲ್ಲಿ ದನಗಳು, ಕರುಗಳು ಜನರು ನೀರು ಕುಡಿಯುವಂಥ ಕೆರೆಗಳು ಆಗಿದ್ದವು. ಆ ಕೆರೆಗಳನ್ನೆಲ್ಲಾ ಈ ಗೃಹನಿರ್ಮಾಣ ಮಂಡಲಿಯವರು ನೆಲಗಳ್ಳರು ಪಡೆದು ನಿವೇಶನ ಮಾಡಿ ಹಂಚಿ, ಕೆರೆಗಳನ್ನು ನಿರ್ನಾಮ ಮಾಡಿದ್ದಾರೆ. ಇವೊತ್ತು ಬೆಂಗಳೂರು ನಗರದಲ್ಲಿ ಏನು ಆಗುತ್ತಿದೆ, ಒಂದು ಕಡೆ ಯಾರು ನಗರಕ್ಕೆ ಅಡಿಪಾಯವನ್ನು ಇಟ್ಟರೋ ಅವರ ಹೆಸರನ್ನು ಅಳಿಸತಕ್ಕಂಥ ದೊಡ್ಡ ಒಂದು ಅಗೋಚರ ಕೆಲಸ ಇವೊತ್ತು ಆಗುತ್ತಿದೆ. ಒಂದು ಕಡೆ ರಮಣ ಮಹರ್ಷಿ ಕೇಂದ್ರಕ್ಕೆ ಜಾಗ ಕೊಡಬಾರದು ಎಂದು ನಾವೆಲ್ಲಾ ಹೇಳಿದೆವು, ಅವರ ಬಗ್ಗೆ ನನಗೆ ಗೌರವ ಇದೆ. ಆದರೆ ಯಾವ ಕೆಂಪೇಗೌಡರ ಪ್ರತಿಮೆ, ಆ ಒಂದು ಮಂಟಪ. ಅದರ ಪಕ್ಕದಲ್ಲಿ ಜಾಗ ಕೊಟ್ಟರು, ಸದಾಶಿವನಗರದಲ್ಲಿ, ಸದಾಶಿವರಾಯರು, ಕಾರ್ನಾಡ್ ಸದಾಶಿವರಾಯರ ಹೆಸರಿನಲ್ಲಿ ನಿರ್ಮಾಣವಾದಂಥ ಸದಾಶಿವನಗರ. ಕಾರ್ನಾಡ್ ಸದಾಶಿವರಾಯರು ಸ್ವಾತಂತ್ರ್ಯ ಹೋರಾಟಗಾರರು ರಾಜ್ಯ ನಿರ್ಮಾಣದಲ್ಲಿ ಭಾಗವಹಿಸಿದಂಥವರು. ಆ ಸ್ಥಳದಲ್ಲಿ ಎಲ್ಲಾ ಭಾರಿ ಭಾರಿ ಜನರು ಇದ್ದಾರೆ, ಬಡವರು ಒಬ್ಬರೂ ಇಲ್ಲ. ದೊಡ್ಡ ದೊಡ್ಡ ಜನರು ಇದ್ದಾರೆ. ಅದು ಹೋಗಲಿ ಪಕ್ಕಕ್ಕೆ ಬಂದರೆ, ನಮ್ಮ ಹಿಂದಿನ ಸರ್ಕಾರದವರು ಅಲ್ಲಿ ಶಿವಾಜಿ ಪ್ರತಿಮೆಗೆ ಸ್ಥಳವನ್ನು ಕೊಟ್ಟರು. ಬೆಂಗಳೂರು ನಗರದಲ್ಲಿ ನೀವು ಪ್ರತಿಮೆ ಸ್ಥಾಪನೆ ಮಾಡಲಿಕ್ಕೆ ಅವಕಾಶ ಕಲ್ಪಿಸಿಕೊಂಡಿರಿ, ಬಾಂಬೆ ನಗರದಲ್ಲಿ ನಾವು ಕಿತ್ತೂರು ರಾಣಿ ಚೆನ್ನಮ್ಮನವರ ಪ್ರತಿಮೆ ಇಡಬೇಕು ನಮಗೆ ಸ್ಥಳ ಕೊಡಿ ಅಂದರೆ ಬಾಂಬೆಯಲ್ಲಿ ಸ್ಥಳ ಕೊಡಲಿಕ್ಕೆ ಅವರು ತಯಾರಿಲ್ಲ. ಅದೇ ಇಲ್ಲಿ ಕರ್ನಾಟಕದಲ್ಲಿ ಶಿವಾಜಿ ಪ್ರತಿಮೆ ಪೇಯಾರ್ ನಗರ, ಅಣ್ಣಾ ನಗರ, ಇದು ನಮ್ಮ ಹಣೆಯಬರಹ ಈ ಒಂದು ಪರಿಸ್ಥಿತಿ ಇದೆ, ಮತ್ತೆ ಇನ್ನೊಂದು ವಿಷಯ ಹೇಳಿದರೆ ತಾವು ಆಶ್ಚರ್ಯ ಪಡುತ್ತೀರಿ. ನಮ್ಮ ಯು ಬಿ ಒಂದು ದೊಡ್ಡ ಡಿಸ್ಟಿಲರಿ ಏನಿದೆ, ಅದು ವಿಠಲ್ ಮಲ್ಯ ಅವರಿಗೆ ಸೇರಿದ್ದು. ಅಲ್ಲಿ ಗ್ರಾಂಟ್ ರೋಡ್ ಎಂದು ಇದೆ

ಈಗ ವಿಠಲ್ ಮಲ್ಯ ಎಂಬ ಹೆಸರನ್ನು ಆ ರಸ್ತೆಗೆ ಇಟ್ಟಿದ್ದಾರೆ. ಈ ರಸ್ತೆಗೆ ಇವರ ಹೆಸರನ್ನು ಇಡುವುದಕ್ಕೆ ಇವರು ಯಾವ ಧರ್ಮ ಮಾಡಿದ್ದರು, ಯಾವ ದಾನ ಮಾಡಿದ್ದರು ? ಇದಕ್ಕಿಂತ ನಾಚಿಕೆಗೇಡಿನ ಕೆಲಸ ಬೇರೆ ಯಾವುದು ಇದೆ. ಇದಕ್ಕೆ ಅವಕಾಶ ಕೊಟ್ಟವರು ತಲೆ ಮೇಲೆ ಬಟ್ಟೆ ಹೊದ್ದುಕೊಂಡು ಹೋಗಬೇಕು, ಗ್ರಾಂಟ್ ರೋಡ್ ಇದ್ದದ್ದು ವಿಠಲ್ ಮಲ್ಯ ರಸ್ತೆ ಆಗಿದೆ. ಅದನ್ನು ನೋಡಿ ನನಗೆ ಆಶ್ಚರ್ಯವಾಯಿತು ಮತ್ತು ನನ್ನ ಮನಸ್ಸಿಗೆ ನೋವಾಯಿತು. ವಿಠಲ್‌ಮಲ್ಯರಿಗೂ ಬೆಂಗಳೂರಿಗೂ ಏನು ಸಂಬಂಧ ಇದೆ. ಅವರು ಮದ್ಯಪಾನವನ್ನು ಸಮಗ್ರವಾಗಿ ತಯಾರು ಮಾಡಿ ಜನತೆಗೆ ಕುಡಿಸಿ ಮತ್ತೇರಿಸಿ ಜನರನ್ನು ಕೊಲ್ಲುವುದರಲ್ಲಿ ನಿಸ್ಸೀಮರಾಗಿದ್ದಂತಹವರು ಹಾಗೂ ಜೈಲಿಗೆ ಹೋಗಬೇಕಾಗಿರತಕ್ಕಂತಹವರ ಹೆಸರು ನಮ್ಮ ರಸ್ತೆಗಳಲ್ಲಿ ಇಂದು ನಾಮಕರಣವಾಗಿದೆ. ಇದನ್ನು ಮಾಡಿದವರು ಯಾರು? ಶಿವಾಜಿ ಪ್ರತಿಮೆಯನ್ನು ಅನಾವರಣ ಮಾಡಲು ಅವಕಾಶ ಕೊಟ್ಟವರು ಯಾರು ? ಇದು ಹಿಂದಿನ ಸರಕಾರದ ವಿಠಲ್ ಮಲ್ಯ ಎಂಬ ಹೆಸರನ್ನು ಇಟ್ಟದ್ದು ಕೂಡ ಅವರ ಕೃಪೆಯೇ ಆಗಿದೆ. ಮಲ್ಯ ಅವರ ಕೃಪೆಯನ್ನು ಈ ಸರಕಾರದವರು ತೆಗೆದುಕೊಳ್ಳುವುದಕ್ಕೆ ಹೊರಟಿದ್ದಾರೆ. ಸ್ವಲ್ಪ ಸ್ವಲ್ಪ ಅವರ ಹತ್ತಿರಕ್ಕೆ ಬಂದಿದ್ದಾರೆ ಈ ರಸ್ತೆಗೆ ಅವರ ಹೆಸರನ್ನು ಏನು ನಾಮಕರಣ ಮಾಡಿದ್ದಾರೆ ಅದು ಸರಿಯಾದಂತಹ ಕೆಲಸ ಅಲ್ಲ, ಅದನ್ನು ಕೂಡಲೇ ಬದಲಾಯಿಸುವಂತೆ ಸರಕಾರ ನಗರಸಭೆಯ ಆಡಳಿತಗಾರರಿಗೆ ಒಂದು ಎಚ್ಚರಿಕೆಯನ್ನು ಕೊಡಬೇಕೆಂತ ಕೇಳುತ್ತೇನೆ. ನಾಳೆ ಬೆಳಿಗ್ಗೆ ಆ ರಸ್ತೆಯಲ್ಲಿ ಇರುವ ಫಲಕವನ್ನು ಕಿತ್ತುಹಾಕಬೇಕು. ನಿಮ್ಮ

ಕೈಯಲ್ಲಿ ಆಗದಿದ್ದರೆ ನಾನೇ ಅದನ್ನು ಕಿತ್ತು ಹಾಕುತ್ತೇನೆ. ಈ ಬಗ್ಗೆ ಯಾವುದಾದರೂ ಒಂದು ತೀರ್ಮಾನ ತೆಗೆದುಕೊಳ್ಳಿ. ಬೆಂಗಳೂರು ನಗರದಲ್ಲಿ ಇವತ್ತು ಹೆಣವನ್ನು ಹೂಳುವುದಕ್ಕೆ ಸ್ಮಶಾನ ಇಲ್ಲ. ಆ ಕಡೆ ಹೆಣ ಸುಡತಕ್ಕಂತಹ ಮನೆಗಳನ್ನು ಕಟ್ಟಿದ್ದಾರೆ. ಹೆಣ ಹೂಳುವುದಕ್ಕೆ ಜಾಗ ಇಲ್ಲದೆ ಒಂದು ಹೆಣವನ್ನು ಹೂಳುವುದಕ್ಕೆಂದು ೬ ಅಡಿ ಗುಂಡಿ ತೆಗೆದರೆ ಎಂಟು ಹೆಣಗಳ ತಲೆ ಬುರುಡೆಗಳನ್ನು ಮೇಲಕ್ಕೆ ತೆಗೆಯಬೇಕಾಗಿದೆ. ಅಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಬೆಂಗಳೂರು ನಗರದ ಬೆಳವಣಿಗೆಯ ಯೋಜನೆಯನ್ನು ಮಾಡತಕ್ಕಂತಹವರು ಸಾರ್ವಜನಿಕರ ಉಪಯೋಗಕ್ಕೆ ಬೇಕಾದಂತಹ ವ್ಯವಸ್ಥೆಗಳನ್ನು ಮಾಡಬೇಕಾಗಿತ್ತು. ಆದರೆ ಆ ವ್ಯವಸ್ಥೆ ಇವತ್ತು ಇಲ್ಲದೆ ಅವ್ಯವಸ್ಥೆಯ ನಗರವನ್ನಾಗಿ ನಿರ್ಮಾಣ ಮಾಡಿದ್ದಾರೆಂದರೆ ತಪ್ಪಾಗಲಾರದು. ಹೀಗೆ ಒಂದು ಕಡೆ ಹೆಣವನ್ನು ಹೂಳುವುದಕ್ಕೆ ಬೇಕಾದಂತಹ ಸ್ಥಳ ಇಲ್ಲ. ಮತ್ತೊಂದು ಕಡೆ ಯಾರೇ ಅಧಿಕಾರಕ್ಕೆ ಬರಲಿ, ನಾವು ಸೊಳ್ಳೆ ನಿಯಂತ್ರಣ ಮಾಡುತ್ತೇವೆಂದು ಹೇಳುತ್ತಾರೆ ಆದರೆ ಮಾಡುವುದಿಲ್ಲ, ಆರಿಸಿ ಬಂದಂತಹ ಪ್ರತಿಯೊಬ್ಬ ಮೇಯರ್‌ಗಳೂ ಕೂಡ ಇದೇ ಮಾತನ್ನು ಹೇಳುತ್ತಾರೆ. ಆದರೆ ಸೊಳ್ಳೆಗಳ ಕಾಟ ದಿನದಿನಕ್ಕೆ ಜಾಸ್ತಿಯಾಗುತ್ತಾ ಹೋಗುತ್ತಿದೆ. ಇನ್ನು ಕೊಳಗೇರಿಗಳ ನಿರ್ಮಾಣ ಯಾರಿಂದ ಆಗುತ್ತಿದೆ ಎಂಬ ಬಗ್ಗೆ ಹೇಳುವುದಾದರೆ, ಹೊರಗಡೆಯಿಂದ ಬಂದಂತಹ ಜನರು ಕೊಳಗೇರಿಗಳ ನಿರ್ಮಾಣ ಮಾಡುತ್ತಿದ್ದಾರೆ. ಹೊರಗಡೆಯಿಂದ ಬಂದಂತಹ ಈ ಜನರಿಗೆ ನಾವು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಈ ಕೊಳಗೇರಿಗಳ ಅಭಿವೃದ್ಧಿಗೆಂದು ಇರುವ ಮಂಡಳಿಯ ಬಜೆಟ್ ೧ ಕೋಟಿ ೭೦ ಲಕ್ಷ ಆದರೆ, ಅದರಲ್ಲಿ ೭೫ ಲಕ್ಷ ರೂಪಾಯಿಗಳು ಸಂಬಳಕ್ಕೇ ಖರ್ಚಾದರೆ ಎಷ್ಟರ ಮಟ್ಟಿಗೆ ಈ ಕೊಳಗೇರಿಗಳನ್ನು ಸರಿಪಡಿಸಲಿಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಈ ಕೊಳಗೇರಿಗಳನ್ನು ಸಂಪೂರ್ಣವಾಗಿ ನಿರ್ನಾಮ ಮಾಡತಕ್ಕಂಥ ಒಂದು ಯೋಜನೆಯನ್ನು ತಾವು ಹಾಕಿಕೊಳ್ಳಬೇಕು. ಬೆಂಗಳೂರು ನಗರದಲ್ಲಿ ಹರಿಕುಂಟೆ ಎಂಬ ಪ್ರದೇಶ ಇದೆ. ನಾನು ಅಲ್ಲಿನ ನಗರ ಸಭೆಯ ಸದಸ್ಯನಾಗಿದ್ದಾಗ ಅಲ್ಲಿ ಜನರಿಗೆ ಅನುಕೂಲವಾಗಲೀ ಎಂದು ಶೌಚಾಲಯವನ್ನು ಕಟ್ಟಿಸಿದ್ದೆ. ಆದರೆ ಈಗಿನ ನಗರ ಸಭೆಯವರು ಅದನ್ನು ಒಡೆದು ಹಾಕಿ ಅಲ್ಲಿ ನಿವೇಶನವನ್ನು ಮಾಡಿ ಹಂಚಬೇಕೆಂದು ಹೊರಟಿದ್ದಾರೆ. ಇದನ್ನು ನೋಡಿದರೆ ಗೊತ್ತಾಗುತ್ತದೆ ಬೆಂಗಳೂರು ನಗರದ......

ಉಪಾಧ್ಯಕ್ಷರು.—ಸಾಕು ಇನ್ನು ೫ ನಿಮಿಷದಲ್ಲಿ ಮುಗಿಸಿ......

ಶ್ರೀ ವಾಟಾಳ್ ನಾಗರಾಜ್.—ಆದಷ್ಟು ಬೇಗ ಮುಗಿಸುತ್ತೇನೆ ಕೆಲವು ಅಮೂಲ್ಯವಾದಂತಹ ವಿಚಾರಗಳಿವೆ ಇನ್ನೊಂದು ಹತ್ತು ನಿಮಿಷದಲ್ಲಿ ಮುಗಿಸುತ್ತೇನೆ.

ಮಾನ್ಯ ಉಪಾಧ್ಯಕ್ಷಿಣಿಯವರೆ, ಗಂಗಾರಾಂ ಬಿಲ್ಡಿಂಗ್ ಕೊಲ್ಯಾಪ್ಸ್ ಆದ ಬಗ್ಗೆ ತಾವು ಕೇಳಿದ್ದೀರಿ. ಇವತ್ತು ಮಾನ್ಯ ಮಂತ್ರಿಗಳು ಅಲ್ಲಿ ಹೋಗಿ ಸ್ಥಳವನ್ನು ನೋಡಿಕೊಂಡು ಬರಬೇಕು. ಆ ದಿವಸ ಅಲ್ಲಿ ಕೊಲ್ಯಾಪ್ಸ್ ಆದ ಕಟ್ಟಡದ ದುರಂತದ ಬಗ್ಗೆ ನೆನೆಸಿಕೊಂಡರೆ ಕಣ್ಣೀರಿನ ದೊಡ್ಡ ಹೊಳೆಯೇ ಬರುತ್ತದೆ; ಅಲ್ಲಿಯ ಕಟ್ಟಡವನ್ನು ನಿರ್ಮಾಣ ಮಾಡಿದವನು ಹಿಂದಿನ ಸರ್ಕಾರದ ದಾಯಾದಿ, ಆತನು ಮಾಡಿದ ಕೆಲಸಕ್ಕೆ ಅವನನ್ನು ಜೈಲಿಗೆ ಕಳುಹಿಸಬೇಕಾಗಿತ್ತು, ಆದರೆ ಅವನು ಜೈಲಿನಿಂದ ಹೊರಗೆ ಬಂದ. ಇವತ್ತಿನವರೆಗೂ ಆ ದುರಂತದಲ್ಲಿ ಸತ್ತವರ ಕುಟುಂಬದವರಿಗೆ ಪರಿಹಾರ ಸಿಕ್ಕಿಲ್ಲ. ಇದು ಸಿಕ್ಕುವುದಕ್ಕೆ ಮೊದಲೇ ಅದೇ ಜಾಗದಲ್ಲಿ ಈಗ ಇನ್ನೊಂದು ಹೊಸ ಕಟ್ಟಡ ನಿರ್ಮಾಣಕ್ಕೆ ಬರುತ್ತಿದೆ, ಈ ಗಂಗಾರಾಂ ಕಟ್ಟಡಕ್ಕೆ ಅನುಮತಿಯನ್ನು ಕೊಟ್ಟಂಥ ಅಧಿಕಾರಿಗಳು ಯಾರಿದ್ದಾರೆ, ಅವರನ್ನು ಮನೆಗೆ ಕೂಡ ಕಳುಹಿಸಲಿಲ್ಲ. ಆ ಕಟ್ಟಡದ ದುರಂತದಲ್ಲಿ ಸುಮಾರು ೮೩ ಜನ ಸಿಕ್ಕಿಹಾಕಿಕೊಂಡು ನೆಲಸಮಾಧಿ ಆದರು. ಅವರ ಬಗ್ಗೆ ಯಾರೂ ಸಹ ಇಲ್ಲಿಯವರೆಗೆ ಗಮನಹರಿಸಲಿಲ್ಲ.

ಇನ್ನೊಂದು ಮಾತನ್ನು ತಮಗೆ ಹೇಳುವುದಾದರೆ ಈ ಬೆಂಗಳೂರು ನಗರ ಒಂದರಲ್ಲೇ ವಾಹನ ಸರಿಗೆಯಿಂದ ೧.೫ ಕೋಟಿ ರೂಪಾಯಿ ಬರುತ್ತಿದೆ. ಆದರೆ ಬೆಂಗಳೂರು ನಗರ ಸಭೆಗೆ ನೀವು ಕೊಡುತ್ತಿರತಕ್ಕದ್ದು ಕೇವಲ ೫ ಲಕ್ಷ ರೂಪಾಯಿ. ಇದು ಹಿಂದೆ ಯಾವಾಗಲೋ ನಿಗದಿ ಮಾಡಿದ್ದುದು. ಇದನ್ನು ಇನ್ನೂ ಹೆಚ್ಚು ಮಾಡಲಿಲ್ಲ. ಇನ್ನು ಮನೆಗಂದಾಯ ಬಾಬಿನಿಂದ ಇವತ್ತು ೩೦ ಕೋಟಿ ರೂಪಾಯಿ ಬರುತ್ತಿದೆ. ಆದರೆ ಈ ಕಂದಾಯವನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಬಂದಂಥವರು ಕೋಟಿಗಟ್ಟಲೆ ಲಂಚವನ್ನು ತಿಂದು ತಮಗೆ ಇಷ್ಟಬಂದಂತೆ ಫಿಕ್ಸ್ ಮಾಡಿ ಹೋದರು. ನಾನು ತಮಗೆ ಹೇಳುತ್ತೇನೆ. ಈ ಬೆಂಗಳೂರು ನಗರದಲ್ಲಿ ಸರಿಯಾಗಿ ಕಂದಾಯವನ್ನು ವಸೂಲ್ಮಾಡಿದರೆ ೧೧೦ ಕೋಟಿ ರೂಪಾಯಿ ಆದಾಯ ಬರುತ್ತದೆ.

ಮಾನ್ಯ ಉಪಾಧ್ಯಕ್ಷಿಣಿಯವರೆ, ಬೆಂಗಳೂರು ನಗರಸಭೆಗೆ ಆಕ್ಟ್ರಾಯ್ ಬಾಬಿನಿಂದ ೩೦ ಕೋಟಿ ರೂಪಾಯಿ ಆದಾಯ ಬರುತ್ತಿತ್ತು. ಆದರೆ ಇವೊತ್ತಿಗೂ ತಾವು ೩೦ ಕೋಟಿ ರೂಪಾಯಿಗಳನ್ನು ಈ ಬಾಬ್ತಿಗೋಸ್ಕರ ಅವರಿಗೆ ಕೊಡುತ್ತಿದ್ದೀರಿ. ಸ್ವಾಮಿ ಏನಾದರೂ ತಮಗೆ ಹೇಳುತ್ತೇನೆ, ಇವತ್ತೂ ಕೂಡ

ಆಕ್ಟ್ರಾಯ್‌ನಿಂದ ಸುಮಾರು ೭೦ ಕೋಟಿ ರೂಪಾಯಿಗಳನ್ನು ವಸೂಲ್ಮಾಡಬಹುದು. ಇಡೀ ರಾಜ್ಯದಲ್ಲಿ ನಗರಸಭೆ ಮತ್ತು ಪುರಸಭೆಗಳ ಸಂಪನ್ಮೂಲಗಳನ್ನು ರೂಢಿಸುವ ವಿಚಾರದಲ್ಲಿ ದಕ್ಷತೆಯಿಂದ ಕೆಲಸಮಾಡಬೇಕು. ಆಕ್ಟ್ರಾಯ್‌ನ್ನು ಈಗ ತಾವು ಪುನಃ ಜಾರಿಗೆತರಬೇಕು. ಪರಿಣಾಮಕಾರಿ ರೀತಿಯಲ್ಲಿ ಕೆಲಸ ಮಾಡಬೇಕು. ಯಾರೋ ಕೆಲವು ಮಾಲೀಕರಿಗೆ ಅನುಕೂಲ ಮಾಡಿಕೊಡುವುದಕ್ಕೋಸ್ಕರ, ಅಥವಾ ಅವರ ದಾಕ್ಷಿಣ್ಯಕ್ಕೋಸ್ಕರ ನೀವು ಕಟ್ಟುಬೀಳದೆ ದಕ್ಷತೆಯಿಂದ ಕೆಲಸಮಾಡಬೇಕು. ಈ ರೀತಿ ಕೆಲಸಮಾಡಿದರೆ ಮಾತ್ರ ನಗರಸಭೆಗಳ ಮತ್ತು ಪುರಸಭೆಗಳ ಉದ್ಧಾರವಾಗುತ್ತದೆಯೋ ಹೊರತು ಇಲ್ಲದಿದ್ದರೆ ಇಲ್ಲ

ಇನ್ನು ನನ್ನ ಕ್ಷೇತ್ರವಾದ ಚಾಮರಾಜನಗರ ಪುರಸಭೆಯ ವಿಚಾರದಲ್ಲಿ ಹೇಳುವುದಾದರೆ ಅಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಮಾಡಿಸಬೇಕೆಂದು ಮಾನ್ಯ ಮಂತ್ರಿಗಳಿಗೆ ಸುಮಾರು ೫ ತಿಂಗಳ ಹಿಂದೆ ಪತ್ರವನ್ನು ಬರೆದೆ. ಅದು ಆಗಲಿಲ್ಲ. ನಂತರ ಸಂಬಂಧಪಟ್ಟವರಿಗೆ ಪತ್ರ ಬರೆದೆ, ಏನೂ ಆಗಲಿಲ್ಲ. ಅಲ್ಲಿಯ ಅಭಿವೃದ್ಧಿ ಕೆಲಸಕಾರ್ಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯ ಕಾರ್ಯದರ್ಶಿಯವರಿಗೆ ಪತ್ರವನ್ನು ಬರೆದೆ, ಅದೂ ಕೂಡ ಏನೂ ಆಗಲಿಲ್ಲ, ಇನ್ನು ಕಾವೇರಿ ಯೋಜನೆಗ ಮುಂದೆ ಶಂಕುಸ್ಥಾಪನೆಯನ್ನು ಮಾ ಡ ಬೇ ಕಾ ಗಿ ದೆ. ಈ ನನ್ನ ಕ್ಷೇತ್ರದ ಪ್ರಗತಿಯ ಬಗ್ಗೆ ಹೇಳುವುದಾದರೆ ನಾನು ಇಲ್ಲಿ ಏನೇನು ಪ್ರಯತ್ನಗಳನ್ನು ಮಾಡಿದ್ದೇನೆಂದು ನನ್ನ ಕ್ಷೇತ್ರದ ಜನರಿಗೆ ತೋರಿಸಲು ಇಂಥ ನೂರಾರು ಪತ್ರಗಳ ಪ್ರತಿಗಳನ್ನು ಮಾಡಿಸಿ ಇಟ್ಟುಕೊಂಡಿದ್ದೇನೆ. ನಿಜವಾಗಿಯೂ ಹೇಳಬೇಕೆಂದರೆ ನಮ್ಮ ಪುರಸಭೆಯ ಸ್ಥಿತಿ ತುಂಬಾ ಶೋಚನೀಯವಾಗಿದೆ. ಚಾಮರಾಜ ನಗರದ ಪಕ್ಕದಲ್ಲಿ ತಮಿಳ್ನಾಡಿನ ಭಾಗ ಇದೆ. ಅಲ್ಲಿಯ ಜನರು ನಮ್ಮ ಕ್ಷೇತ್ರದ ಜನರನ್ನು ನೋಡಿ ನಗುತ್ತಿರುತ್ತಾರೆ. ಈ ಪುರಸಭೆಯನ್ನು ಹೇಳುವವರು ಕೇಳುವವರು ಯಾರೂ ಇಲ್ಲ. ಯಾವುದೇ ಅಭಿವೃದ್ಧಿ ಕೆಲಸಗಳೂ ಆಗುತ್ತಿಲ್ಲ. ೩೦-೪೦ ವರ್ಷಗಳಾದರೂ ರಸ್ತೆಗಳನ್ನು ಹೊಸದಾಗಿ ಮಾಡುವುದಿರಲಿ ಅವುಗಳ ರಿಪೇರಿಯನ್ನೂ ಕೂಡ ಮಾಡುವುದಿಲ್ಲ. ಇದು ಎಂಥ ಊರು ಎಂದು ಹೇಳುತ್ತಿದ್ದಾರೆ ಇದು ನಮಗೆ ಅಸಹ್ಯವಾಗುತ್ತಿದೆ. ಈ ಬಗ್ಗೆ ಸರ್ಕಾರ ತೀವ್ರ ಗಮನಹರಿಸಿ ಚಾಮರಾಜನಗರದಲ್ಲಿ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಹಿಂದೆ ಅನೇಕಸಾರಿ ತಮ್ಮ ಮೇಲೆ ಒತ್ತಾಯತಂದು ಈ ಚಾಮರಾಜನಗರ ಪುರಸಭೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ಸಮಗ್ರವಾದ ಒಂದು ಚಿಂತನೆಯನ್ನು ಮಾಡಿ, ಕಾವೇರಿ ಯೋಜನೆ ಸಮಾರಂಭಕ್ಕೆ ತಾವು ಬರುವಾಗ ಒಳಚರಂಡಿ ವ್ಯವಸ್ಥೆಯನ್ನೂ ಸಹ ಸಮಗ್ರವಾಗಿ ಕೈಗೊಳ್ಳಲು ಅಡಿಗಲ್ಲನ್ನು ಹಾಕಬೇಕು, ಎಂದು ಕೇಳಿಕೊಳ್ಳುತ್ತೇನೆ ಇದಕ್ಕೆ ಬೇಕಾದರೆ ಈ ಮಾನ್ಯ ಸಭೆಯ ಎಲ್ಲ ಸದಸ್ಯರ ಸಹಿಯನ್ನೂ ಹಾಕಿಸಿ ಹಾಕಿಸಿಕೊಡುತ್ತೇನೆ......

ಉಪಾಧ್ಯಕ್ಷಿಣಿಯವರು.—ನಾಗರಾಜ್‌ರವರೇ, ಬೇಗ ಮುಗಿಸಿ. ಇನ್ನೂ ೧೭ ಜನ ಮಾನ್ಯ ಸದಸ್ಯರು ಮಾತನಾಡುವವರಿದ್ದಾರೆ. ತಾವು ಜಾಗ್ರತೆ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್.—ಇಷ್ಟು ಹೇಳಿ, ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—(ಜೇವರ್ಗಿ).—ಮಾನ್ಯ ಉಪಸಭಾಧ್ಯಕ್ಷಿಣಿಯವರೇ ಈ ದಿನಸ ಈ ಸದನದಲ್ಲಿ ನಗರಾಭಿವೃದ್ಧಿ ಮಂತ್ರಿಗಳು ಮಾಡಿಸಿರುವ ಬೇಡಿಕೆಗೆ ನಾನು ಬೆಂಬಲವನ್ನು ಕೊಡುತ್ತಾ ಕೆಲವಾರು ವಿಚಾರಗಳನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಈಗಾಗಲೇ ಈ ಒಂದು ಬೇಡಿಕೆಯ ಬಗ್ಗೆ ಪ್ರಸ್ತಾಪ ಮಾಡುತ್ತಾ ಮಾನ್ಯ ಆರ್. ವಿ. ದೇಶಪಾಂಡೆಯವರು ಬಹಳಷ್ಟು ವಿಚಾರಗಳ ಬಗ್ಗೆ ಪ್ರಸ್ತಾಪನೆಯನ್ನು ಮಾಡಿದ್ದಾರೆ. ಮತ್ತೆ ಪತ್ರಿಕೆಗಳಲ್ಲೂ ಕೂಡ ಇವತ್ತು ಬಂದಿದೆ. ಅವರು ಹೇಳಿದ ಹಾಗೆ ಕಳೆದ ಆರು ತಿಂಗಳಲ್ಲಿ ರಾಜ್ಯಪಾಲರ ಆಡಳಿತದಲ್ಲಿ ಅರ್ಬನ್ ಲ್ಯಾಂಡ್ ಸೀಲಿಂಗ್ ಬಗ್ಗೆ ಎಕ್ಸೆಮ್ಪ್‌ಷನ್ ಕೊಡುವುದಾಗಲಿ, ಮತ್ತೆ ಕೆಲವು ವಿಷಯಗಳ ಬಗ್ಗೆ ಪ್ರಸ್ತಾವನೆಯನ್ನು ಮಾಡುತ್ತಾ ಅದರ ಬಗ್ಗೆ ವೈಟ್ ಪೇಪರ್‌ನ್ನು ಈ ಸದನದಲ್ಲಿ ಇಡಬೇಕು. ಮತ್ತು ಅದರ ಬಗ್ಗೆ ಚರ್ಚೆ ಆಗಬೇಕೆಂದು ಅವರು ಹೇಳಿದ್ದಾರೆ. ನಾನು ಇವತ್ತು ಮಾನ್ಯ ಮಂತ್ರಿಗಳಿಗೆ ಹೇಳಬಯಸುತ್ತೇನೆಂದರೆ, ೧೯೭೨ರಿಂದ ಮಾನ್ಯ ದೇವರಾಜ ಅರಸ್‌ರವರು ಮುಖ್ಯ ಮಂತ್ರಿಗಳಾಗಿದ್ದಾಗ ಈ ಒಂದು ಪಟ್ಟಣ ಪ್ರದೇಶದಲ್ಲಿರತಕ್ಕಂಥ ಬಡ ಜನರ ಬಗ್ಗೆ ಏನೇನು ಕಾರ್ಯಕ್ರಮಗಳು ಹಾಗೂ ಮತ್ತು ಹಳ್ಳಿ ಪ್ರದೇಶದಲ್ಲಿರತಕ್ಕಂಥ ಮತ್ತು ಪಟ್ಟಣ ಪ್ರದೇಶಗಳಲ್ಲಿರತಕ್ಕಂಥ ಬಡಜನರಿಗೆ ನಿವೇಶನಗಳನ್ನು ಕೊಡತಕ್ಕಂಥ ಕಾರ್ಯಕ್ರಮ, ಮತ್ತೆ ಯಾರು ಬಡತನದ ರೇಖೆಯ ಕೆಳಗಡೆ ಇದ್ದಾರೆ ಅವರಿಗೆ ಕೂಡ ಜನತಾ ಮನೆಗಳನ್ನು ಕೊಡತಕ್ಕಂಥ ಕಾರ್ಯಕ್ರಮಗಳು ಆಗಲೀ ಮತ್ತೆ ಪುರಸಭೆಗಳಿಂದ ಮತ್ತು ಮಹಾನಗರ ಪಾಲಿಕೆಗಳಿಂದ ಹಾಗೂ ಸಣ್ಣ ಪುಟ್ಟ ಮುನಿಸಿಪಾಲಿಟಿಗಳಿಂದ ಹರಿಜನರಿಗೆ ಮತ್ತು

ಗಿರಿಜನರಿಗೆ ಆಗಬೇಕಾದ ಕೆಲಸ ಕಾರ್ಯಗಳನ್ನು ೧೯೭೨ ರಿಂದ ೧೯೮೩ರವರೆಗೆ ಕಾಂಗ್ರೆಸ್ ಸರ್ಕಾರ ಮಾಡಿಕೊಂಡು ಬಂದಿದೆ. ಅದೇ ರೀತಿ ೧೯೮೩ ರಿಂದ ೧೯೮೮ರವರೆಗೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾಗಿ ಬಂದ ಮೇಲೆ ಮತ್ತು ಆನಂತರ ಶ್ರೀಮಾನ್ ಬೊಮ್ಮಾಯಿಯವರು ಮುಖ್ಯ ಮಂತ್ರಿಗಳಾದ ಮೇಲೆ ಏನೇನು ಇಂತಹ ಕೆಲಸ ಕಾರ್ಯಗಳು ಬಡವರ ಬಗ್ಗೆ ಆಗಿವೆ ಎನ್ನುವುದನ್ನು ಕೂಡ ವೈಟ್ ಪೇಪರ್‌ನಲ್ಲಿ ಈ ಸದನದ ಮುಂದಿಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇವತ್ತು ಜನತಾ ನಿವೇಶನಗಳನ್ನು ಕೊಡತಕ್ಕಂಥ ವಿಚಾರದಲ್ಲಿ ಕರ್ನಾಟಕ ರಾಜ್ಯ ರಾಷ್ಟ್ರ ಮಟ್ಟದಲ್ಲಿಯೇ ಹೆಚ್ಚಿನ ರೀತಿಯಲ್ಲಿ ಸಾಧನೆ ಮಾಡಿದೆ ಎನ್ನುವ ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗಡೆಯವರೇ ಹೇಳಿದ್ದಾರೆ. ಇದೆಲ್ಲಾ ಕರ್ನಾಟಕ ರಾಜ್ಯದ ಜನತೆಗೆ ತಿಳಿಯ ಬೇಕಾದರೆ ನಮ್ಮ ಸರ್ಕಾರ ಎಷ್ಟು ಕೆಲಸ ಕಾರ್ಯಗಳನ್ನು ಕಳೆದ ೯ ವರ್ಷಗಳಲ್ಲಿ ಮಾಡಿದೆ ಆನಂತರ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಸುಮಾರು ೭ ವರ್ಷಗಳ ಕಾಲ ಈ ರಾಜ್ಯವನ್ನಾಳಿದ ಇಬ್ಬರು ಮುಖ್ಯ ಮಂತ್ರಿಗಳು ಏನೇನು ಕೆಲಸ ಕಾರ್ಯ ಮಾಡಿದ್ದಾರೆ ಎಂಬುವರ ವಿವರಗಳನ್ನು ಮಾನ್ಯ ಮಂತ್ರಿಗಳು ನೀಡಬೇಕು. ನಿನ್ನೆ ದಿವಸ ಮಾತನಾಡಿದ ಶ್ರೀಮಾನ್ ದೇಶಪಾಂಡೆ ಅವರು ಇವತ್ತಿನ ದಿವಸ ಬಿ. ಡಿ. ಎ. ಯಿಂದಲಾಗಲಿ ಅಥವಾ ಸಿಟಿ ಇಂಪ್ರೂವ್‌ಮೆಂಟ್ ಬೋರ್ಡ್‌ಗಳಿಂದ ಆಗಲಿ ಹಾಗೂ ಬೇರೆ ಕಡೆಗಳಲ್ಲಿ ಆಗಲಿ ಯಾವ ಕೆಲಸ ಕಾರ್ಯಗಳು ಆಗಿಲ್ಲವೆಂದು ಆಪಾದನೆ ಮಾಡಿದ್ದಾರೆ. ನಾವು ಹೇಳುವುದೇನೆಂದರೂ ಇಷ್ಟೆ, ಕಳೆದ ೭½ ವರ್ಷಗಳ ಅವಧಿಯಲ್ಲಿ ಏನಾದರೂ ಕೆಲಸ ಕಾರ್ಯಗಳು ಆಗಿರುತ್ತದೆಯೇ ಎನ್ನುವುದನ್ನು ನೋಡಬೇಕಾಗಿದೆ. ನಗರಾಭಿವೃದ್ಧಿ ಸಚಿವರಾಗಿ ಬೆಂಗಳೂರು ನಗರದವರೇ ಆದ ಶ್ರೀಮಾನ್ ಚಂದ್ರಶೇಖರ್‌ರವರು ಇದ್ದರು, ಹಾಗೂ ಬೆಂಗಳೂರು ನಗರವನ್ನು ಪ್ರತಿನಿಧಿಸಿದ್ದ ಮಾನ್ಯ ಲಕ್ಷ್ಮೀಸಾಗರ್‌ರವರೇ ನಗರಾಭಿವೃದ್ಧಿ ಸಚಿವರಾಗಿ ಏಳು ವರ್ಷಗಳ ಕಾಲ ಆಡಳಿತವನ್ನು ನಡೆಸಿದರು. ನಾಲ್ಕು ಕೋಟಿ ಜನಸಂಖ್ಯೆ ಇರತಕ್ಕಂಥ ಕರ್ನಾಟಕ ರಾಜ್ಯದಲ್ಲಿದ್ದರೆ ಪಟ್ಟಣ ಪ್ರದೇಶಗಳಲ್ಲಿಯೇ ಮೂರರಲ್ಲೊಂದು ಪಾಲು ಪಾಪ್ಯುಲೇಷನ್ ಇದೆ. ಈ ಜನರಿಗೆ ನಿತ್ಯ ಜೀವನಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಕೂಲಂಕುಶವಾಗಿ ವಿಚಾರ ಮಾಡಿ ಅವರ ಮನಸ್ಸಿಗೆ ಹಿಡಿಯತಕ್ಕಂಥ ಕಾರ್ಯಕ್ರಮಗಳ ಪೈಕಿ ಕಳೆದ ಏಳು ವರ್ಷಗಳ ಅವಧಿಯಲ್ಲಿ ಒಂದನ್ನು ಕೂಡ ಮಾಡಲಿಕ್ಕೆ ಅವರಿಂದ ಸಾಧ್ಯವಾಗಲಿಲ್ಲ. ಏನಾದರು ಕೆಲಸ ಕಾರ್ಯಗಳು ಆಗಿದ್ದರೆ ಅದು ಎನ್‌ಆರ್‌ಐ ಕೆಲಸಗಳು ಮಾತ್ರ ಎಂದು ಹೇಳಬಹುದು. ಅಷ್ಟೇ ಅಲ್ಲದೆ ಗ್ರೀನ್ ಬೆಲ್ಟ್ ಏರಿಯಾ ಎಕ್ಸ್‌ಟೆಂಡ್ ಆಗಿದೆ. ಇದು ಎಷ್ಟು ಸಲ ಎಕ್ಸ್‌ಟೆಂಡ್ ಆಗಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈಗಾಗಲೇ ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದ ಹಾಗೆ ೧೯೭೧ರಲ್ಲಿ ಬೆಂಗಳೂರು ನಗರದ ಜನಸಂಖ್ಯೆ ೫ ಲಕ್ಷ ಇದ್ದರೆ ಈಗ ೪೭–೪೮ ಲಕ್ಷಕ್ಕೆ ಹೆಚ್ಚಾಗಿದೆ. ಇವತ್ತು ಎಕ್ಸ್‌ಪರ್ಟ್ಸ್ ಒಪೀನಿಯನ್ ಏನಿದೆ ಎಂದರೆ, ಮುಂದೆ ಬರತಕ್ಕ ೨೦೦೦ನೇ ವರ್ಷಕ್ಕೆ ಬೆಂಗಳೂರು ನಗರದ ಜನಸಂಖ್ಯೆ ೭೦ ಲಕ್ಷಕ್ಕಿಂತ ಹೆಚ್ಚಾಗುತ್ತದೆ ಎಂಬ ಅಂದಾಜಿದೆ. ಇಡೀ ದೇಶದಲ್ಲಿ ಯಾವುದಾದರೂ ಕ್ಯಾಪಿಟಲ್ ಸಿಟಿ ಹೆಚ್ಚು ಬೆಳೆಯುತ್ತಿದೆ ಎಂದರೆ ಅದು ಬೆಂಗಳೂರು ನಗರ. ಬಹಳ ವೇಗವಾಗಿ ದೇಶದಲ್ಲಿ ಬೆಳೆಯುತ್ತಿರುವ ನಗರ ಎಂದರೆ ಬೆಂಗಳೂರು ನಗರ. ಅಷ್ಟು ಜನಸಂಖ್ಯೆ ಬೆಳೆಯುತ್ತಿದೆ. ಶೇಕಡ ಅರ್ಧಕ್ಕಿಂತ ಹೆಚ್ಚು ಜನರು ಪ್ರಪಂಚದಲ್ಲಿ ವಾಸ ಮಾಡುತ್ತಿರುವುದು ಪಟ್ಟಣ ಪ್ರದೇಶಗಳಲ್ಲಿ ಆದ್ದರಿಂದ ಪಟ್ಟಣ ಪ್ರದೇಶಗಳಲ್ಲಿರತಕ್ಕ ಜನರ ಬಗ್ಗೆ, ಅವರ ಸಮಸ್ಯೆಗಳ ಬಗ್ಗೆ ಚಿಂತನೆ ಮಾಡತಕ್ಕ ಭಾರ ಮಾನ್ಯ ಮಂತ್ರಿಗಳಾದ ನರಸಿಂಹಮೂರ್ತಿಯವರ ಮೇಲಿದೆ. ಬಹಳ ಮುತುವರ್ಜಿಯಿಂದ (?) ಮೆಥಾಡಿಕಲ್ಲಾಗಿ ಅವರು ಕೆಲಸ ಮಾಡಬೇಕಾಗಿದೆ. ನಗರ ಪ್ರದೇಶದಲ್ಲಿ ಶಾಸಕರು ಏನಿದ್ದಾರೆ, ಅವರು ಈ ಸಮಸ್ಯೆಗಳ ಬಗ್ಗೆ ಪ್ರಸ್ತಾಪ ಮಾಡುತ್ತಾರೆ. ೧೯೭೫ರಲ್ಲಿ ಆಕ್ಟ್ರಾಯ್‌ಯನ್ನು ತೆಗೆದು ಹಾಕಿದ್ದಾರೆ. ಪುನ: ಆಕ್ಟ್ರಾಯ್ ಬರುತ್ತದೋ ಇಲ್ಲವೋ ಗೊತ್ತಿಲ್ಲ. ನಾನು ಮಂತ್ರಿಯಾಗಿದ್ದಾಗ, ೧೯೭೮ರಲ್ಲಿ ಆಕ್ಟ್ರಾಯ್ ತೆಗೆದು ಹಾಕಿದ ಮೇಲೆ ಸ್ಥಳೀಯ ಸಂಸ್ಥೆಗಳಿಗೆ ಆರ್ಥಿಕವಾಗಿ ಹೆಚ್ಚು ತೊಂದರೆಯಾಗಿದೆ. ಅದನ್ನು ಯಾವ ರೀತಿ ಬಗೆಹರಿಸಬೇಕಾಗಿದೆ ಎಂಬ ಬಗ್ಗೆ ಚಿಂತನೆ ಮಾಡಿದೆ. ಆಕ್ಟ್ರಾಯ್ ಕಾಂಪೆನ್‌ಸೇಷನ್ ಕೂಡ ನಾವು ಸರಿಯಾಗಿ ಬಿಡುಗಡೆ ಮಾಡುತ್ತಿಲ್ಲ. ಮೋಟಾರ್ ವೆಹಿಕಲ್ ಟ್ಯಾಕ್ಸ್ ಆಗಲೀ, ಅಬಕಾರಿ ತೆರಿಗೆ ಆಗಲೀ, ಎಕ್ಸೈಜ್ ಆಗಲೀ ಟೋಟಲ್ ರೆವಿನ್ಯೂ ಕರ್ನಾಟಕ ರಾಜ್ಯದಲ್ಲಿ ಏನಿದೆ ಅದರಲ್ಲಿ ಅರ್ಧದಷ್ಟು ಪಟ್ಟಣ ಪ್ರದೇಶದ ಜನರಿಂದ ವಸೂಲಾಗುತ್ತಿದೆ. ಇಲ್ಲಿ ವೆಹಿಕಲ್ ಟ್ಯಾಕ್ಸ್, ಪ್ರಾಪರ್ಟಿ ಟ್ಯಾಕ್ಸ್ ಎಲ್ಲಾ ವಸೂಲು ಮಾಡಿ ಎಂಟ್ರಿ ಟ್ಯಾಕ್ಸ್ ಸರಿಯಾದ ರೀತಿಯಲ್ಲಿ ಕೊಡುತ್ತಿಲ್ಲ. ಒಂದು ಕಡೆ ಆಕ್ಟ್ರಾಯ್ ತರಬಾರದು ಎಂದು ಹೇಳುತ್ತಿದ್ದಾರೆ. ಬಾಂಬೆಯಲ್ಲಿ ಫಿರೋಜ್ ಷಾ ಮೆಹತಾ ಅವರು ಬಾಂಬೆ ಕಾರ್ಪೊರೇಷನ್ ಆಕ್ಟ್ ಬರೆದಿದ್ದಾರೆ. ಅಲ್ಲಿ ವ್ಯಾಪಾರಿಗಳ ಒತ್ತಡದಿಂದ ಅಲ್ಲೂ ಆಕ್ಟ್ರಾಯ್ ಅಬಾಲಿಷ್ ಆಗಿರಬಹುದೇನೋ ಎಂಬ ಅನುಮಾನ ಇದೆ. ಯಾವುದಾದರೂ ಒಂದು ಸಮಸ್ಯೆಗಳ ಬಗ್ಗೆ ಶಾಸಕರಾಗಲೀ ಮುನಿಸಿಪಾಲಿಟಿ ಮೆಂಬರ್ಸ್ ಆಗಲೀ ಅವರು ತಮ್ಮ ಕ್ಷೇತ್ರದಲ್ಲಿ ಹೋದಾಗ ಜನರು ತಮ್ಮ ಸಮಸ್ಯೆಗಳನ್ನು ಹೇಳಿದಾಗ ಪುರಸಭೆಗಳಲ್ಲಿ ಕಾರ್ಪೋರೇಷನ್

ಗಳಲ್ಲಿ ಅದನ್ನು ಪರಿಹರಿಸಲು ಹಾಗೂ ಅದಕ್ಕೆ ಹಣ ಖರ್ಚು ಬೇಕಾದ ಮಾಡತಕ್ಕ ಸಾಮರ್ಥ್ಯ ಅವುಗಳಿಗೆ ಇಲ್ಲ. ಏಕೆಂದರೆ ಆಕ್ಟ್ರಾಯಿ ಅಬಾಲಿಷ್ ಮಾಡಿದ ಮೇಲೆ ಅವರಲ್ಲಿ ಖರ್ಚು ಮಾಡುವುದಕ್ಕೆ ಹಣ ಇಲ್ಲ. ೧೯೭೮ರ ಆಡಿಟರ್ ಸ್ಟೇಟ್‌ಮೆಂಟ್ ಏನಿದೆ. ಅದರ ಪ್ರಕಾರ ಹತ್ತು ಪರ್ಸೆಂಟ್ ಹೆಚ್ಚು ಮಾಡಿರಬಹುದು. ೧ ನೂರು ಕೋಟಿ ರೂಪಾಯಿ ವರಮಾನ ಬೆಂಗಳೂರು ಕಾರ್ಪೊರೇಷನ್‌ನಲ್ಲಾಗಲೀ ಗುಲ್ಬರ್ಗ ಕಾರ್ಪೊರೇಷನ್‌ನಲ್ಲಾಗಲೀ ೧೯೭೮ರಲ್ಲಿ ಇದ್ದರೆ ಇವತ್ತು ಅದು ಇನ್ನೂ ಹೆಚ್ಚಾಗಿದೆ. ಆಕ್ಟ್ರಾಯಿ ತೆಗೆದ ಮೇಲೆ ಪರ್ಯಾಯ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತಿಲ್ಲ. ಮತ್ತು ನಗರ ಪ್ರದೇಶದಲ್ಲಿ ವಸೂಲಾಗುವ ಹಣ ಸರ್ಕಾರದ ಬೊಕ್ಕಸಕ್ಕೆ ಹೋದರೆ ಸ್ಥಳೀಯ ಸಂಸ್ಥೆಗಳಿಗೆ ಬಹಳ ಅನಾನುಕೂಲ ಆಗುತ್ತಿದೆ. ಆದಕ್ಕೆ ನಾವು ನಮ್ಮ ಕಾಲದಲ್ಲಿ ನಾವು ಒಂದು ಎಕನಾಮಿಕ್ ಎಕ್ಸ್‌ಪರ್ಟ್ ಕಮಿಟಿ ಮಾಡಿದ್ದೆವು. ಗುಲಾಟಿ ಕಮಿಷನ್ ಕಾನ್‌ಸ್ಟಿಟ್ಯೂಟ್ ಮಾಡಿದ್ದೆವು. ಸ್ಥಳೀಯ ಸಂಸ್ಥೆಗಳಿಗೆ ಏನು ಆರ್ಥಿಕ ತೊಂದರೆಯಾಗುತ್ತಿದೆ. ಅದರ ಬಗ್ಗೆ ಯಾವ ರೀತಿ ನಿವಾರಣೆ ಮಾಡಬೇಕು ಎಂಬ ಬಗ್ಗೆ ಅಧ್ಯಯನ ಮಾಡಿ ರಿಪೋರ್ಟ್ ಕೊಡಬೇಕೆಂದು ಆ ಕಮಿಷನ್ನಿಗೆ ಹೇಳಿದ್ದೆವು. ಆಗಿನ ಸರ್ಕಾರ ಹೋದ ಮೇಲೆ ಜನತಾ ಸರ್ಕಾರ ಬಂದು ಜಾಕಬ್ ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡಿತು.

ಪಕ್ಷ ಯಾವುದೇ ಬದಲಾದರೂ ಸರ್ಕಾರ ನಿರಂತರವಾಗಿರುತ್ತದೆ. ನಮ್ಮ ಸರ್ಕಾರ ಹೋದ ಮೇಲೆ ಗುಲಾಟಿ ಕಮಿಷನ್ ವರದಿ ಬಂದಿಲ್ಲ. ಈಗಾಗಲೇ ಮಾನ್ಯ ಪಾಟೀಲ್ ನಾಗರಾಜ್ ಅವರು ಮಾತನಾಡುತ್ತಾ, ಆಕ್ಟ್ರಾಯ್ ಹೋಗಿರುವುದರಿಂದ ಆರ್ಥಿಕ ತೊಂದರೆ ಇದ್ದು ಈ ಬಗ್ಗೆ ಒಂದು ಸದನ ಸಮಿತಿ ರಚನೆ ಮಾಡಬೇಕು. ಅದು ಒಂದು ತಿಂಗಳ ಒಳಗೆ ಸದನದಲ್ಲಿ ವರದಿ ಇಡಬೇಕೆಂದು ಹೇಳಿದರು. ಹೋದ ನಮ್ಮ ಸರ್ಕಾರ ಗುಲಾಟಿ ಕಮಿಷನ್ ನೇಮಕ ಮಾಡಿದ್ದು ಅದರ ವರದಿ ಕೂಡಾ ಸದನದ ಮುಂದೆ ಬಂದಿಲ್ಲ. ಆ ಸಮಿತಿ ಕೂಡಾ ರದ್ದು ಆಯಿತು. Jacob Committee was constituted. Where is the Jocob Committee Report ? ಅದೂ ಕೂಡಾ ಸದನದಲ್ಲಿ ಇಲ್ಲ. ಆ ನಂತರ ಲಕ್ಷ್ಮಣರಾವ್ ಸಮಿತಿಯನ್ನು ನೇಮಕ ಮಾಡಿದರು. ಆಗ ಮಾನ್ಯ ದೇಶಪಾಂಡೆಯವರು ನಗರಾಭಿವೃದ್ಧಿ ಸಚಿವರಾಗಿದ್ದರು. ಅವರಿಗೆ ನಾನು ಕೇಳಿದೆ. Whare is that Lakshman Rao Committe recommendations ? ಅದಕ್ಕೆ ಅವರು ಅದು ತಯಾರಾಗಿದೆ, ಸದನದ ಮುಂದೆ ಇಡುತ್ತೇನೆಂದು ಹೇಳಿದರು. ಇವತ್ತು ಈ ಎಲ್ಲಾ ರಿಪೋರ್ಟ್‌ಗಳು ಬರಬೇಕಾಗಿದೆ. ಲಕ್ಷ್ಮಣರಾವ್ ಅವರ ರೆಕಮಂಡೇಷನ್ಸ್ ಏನಿದೆ ಅದನ್ನು ತಿಳಿಯಬೇಕಾಗಿದೆ. ಸ್ಥಳೀಯ ಸಂಸ್ಥೆಗಳಿಗೆ ಆರ್ಥಿಕವಾಗಿ ಸಹಾಯ ಮಾಡುವ ಬಗ್ಗೆ ಏನೇನು ಶಿಫಾರಸ್ಸು ಮಾಡಿದ್ದಾರೋ ಅವನ್ನು ಸದನದ ಮುಂದೆ ಇಟ್ಟರೆ ನಮಗೆ ಚರ್ಚೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಆ ಒಂದು ರೆಕಮೆಂಡೇಷನ್ಸ್ ಆಧಾರದ ಮೇಲೆ ಸ್ಥಳೀಯ ಸಂಸ್ಥೆಗಳಿಗಿರುವ ಆರ್ಥಿಕ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಬಗ್ಗೆ ಮಾನ್ಯ ನರಸಿಂಹಮೂರ್ತಿಯವರು ಆ ವರದಿಯನ್ನು ಸದನದ ಮುಂದೆ ಇಡಬೇಕೆಂದು ಹೇಳುತ್ತೇನೆ. ಮಾನ್ಯ ಪಾಟೀಲ್ ನಾಗರಾಜ್ ಅವರು ಗಂಗಾರಾಮ್ ಕಟ್ಟಡದ ಬಗ್ಗೆ ಹೇಳಿದ್ದಾರೆ. ದುರ್ದೈವಕ್ಕೆ ಜನತಾ ಸರ್ಕಾರ ಬಂದ ಆರು ತಿಂಗಳಲ್ಲಿ ಆ ಕಟ್ಟಡ ಬಿದ್ದು ಹೋಯಿತು. ಆಗ ಹೆಗ್ಡೆಯವರು ಮುಖ್ಯಮಂತ್ರಿಗಳಾಗಿದ್ದರು. ಆಗ ಎಲ್ಲಾ ಕಡೆ ಏನು ಪ್ರಚಾರ ಆಯಿತು ಎಂದರೆ ಧರ್ಮಸಿಂಗ್ ಅವರು ಇದ್ದಾಗ ಗಂಗಾರಾಮ್ ಕಟ್ಟಡಕ್ಕೆ ಅನುಮತಿ ಕೊಟ್ಟಿದ್ದಾರೆಂಬ ಮಾತು ಕೇಳಿ ಬಂತು. ಇದರಿಂದ ಬಹಳ ದೊಡ್ಡ ಅನಾಹುತವಾಯಿತು ಎಂದು ತಿಳಿದು ಬಂತು. ಆಮೇಲೆ ಈ ಕಟ್ಟಡದ ಬಗ್ಗೆ ಯಾವ ಯಾವ ಅಧಿಕಾರಿಗಳು ಶಾಮೀಲು ಆಗಿದ್ದಾರೆ, ಯಾರು ಪರವಾನಿಗೆ ಕೊಟ್ಟಿದ್ದಾರೆ ಎನ್ನುವ ಬಗ್ಗೆ ದೇಸಾಯಿ ಕಮಿಷನ್ ನೇಮಕ ವಾಯಿತು. ಆ ಕಮಿಷನ್ ವರದಿ ಏನಾಗಿದೆ ? ಅದನ್ನು ಈ ಸದನದ ಮುಂದೆ ಇಡಬೇಕು. ಇವತ್ತು ಸರ್ಕಾರ ಇಂತಹ ವಿಷಯಗಳ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ಎಂಬುದು ರಾಜ್ಯದ, ದೇಶದ ಜನರಿಗೆ ತಿಳಿಯಬೇಕು. ಈ ವರದಿಗಳು ಸದನದ ಮುಂದೆ ಬರಬೇಕಾಗಿದೆ. ಸರ್ಕಾರ ಒಂದು ವಿಷಯದ ಬಗ್ಗೆ ಸದನದಲ್ಲಿ ಆಶ್ವಾಸನೆ ಕೊಟ್ಟ ಮೇಲೆ ಆ ಬಗ್ಗೆ ವರದಿಯನ್ನು ಸದನ ದಲ್ಲಿ ಇಡಬೇಕಾಗುತ್ತದೆ. ಅದು ಸರ್ಕಾರ ನಡೆಸತಕ್ಕವರ ಪ್ರಾಮಾಣಿಕ ಪ್ರಯತ್ನವಾಗುತ್ತದೆ. ಇದನ್ನು ಹಿಂದಿನ ಸರ್ಕಾರ ಮಾಡಿಲ್ಲ. ಮಾನ್ಯ ನರಸಿಂಹಮೂರ್ತಿಯವರು ಇವುಗಳ ಆರ್ಥಿಕ ತೊಂದರೆ ನಿವಾರಣೆ ಬಗ್ಗೆ ಸೂತ್ರ ಕಂಡುಹಿಡಿಯಲು ಆ ಕಮಿಷನ್‌ಗಳ ವರದಿಯನ್ನು ಸಭೆಯ ಮುಂದೆ ಇಡಬೇಕು ಮತ್ತು ಗಂಗಾರಾಮ್ ಕಟ್ಟಡದ ಬಗ್ಗೆ ಏನು ಮಾಹಿತಿ ಇದೆ ಅದನ್ನು ಸರ್ಕಾರ ಒದಗಿಸ ಬೇಕು. ಈಗಾಗಲೇ ಬಹು ಅಂತಸ್ತುಗಳ ಕಟ್ಟಡಗಳ ಬಗ್ಗೆ ಸಾಕಷ್ಟು ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಕರ್ನಾಟಕದಲ್ಲಿ ಬಿಲ್ಡಿಂಗ್ ಬೈಲಾ ಬಗ್ಗೆ ಬದಲಾವಣೆ ತರುವ ಬಗ್ಗೆ ನಾನೂ ಕೂಡಾ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಬೆಂಗಳೂರು ನಗರದಲ್ಲಿ ೮ ಅಂತಸ್ತುಗಳ ಕಟ್ಟಡಕ್ಕೆ ಅನುಮತಿ ಕೊಡ

ಬೇಕೆಂದಾಗ ನಗರದ ಎಲ್ಲ ಶಾಸಕರ ಜೊತೆ ಸಮಾಲೋಚನೆ ಮಾಡಿ ಹಾಲಿ ಬೆಂಗಳೂರು ನಗರದಲ್ಲಿ ಪ್ರಸ್ತುತದಲ್ಲೇ ನೀರು ಕೊಡುವುದಕ್ಕೆ ಆಗುತ್ತಿಲ್ಲವಾದ್ದರಿಂದ ಮುಂದೆ ಇಂತಹ ಕಟ್ಟಡಗಳು ಬಂದಾಗ ತೊಂದರೆಯಾಗುತ್ತವೆಂದು ತಿಳಿಸಲಾಯಿತು. ಇಡೀ ರಾಷ್ಟ್ರದಲ್ಲಿ ಬೆಂಗಳೂರು ಆರನೇ ದೊಡ್ಡ ಪಟ್ಟಣ. ಇಲ್ಲಿಗೆ ನಾವು ನೀರನ್ನು ತರಬೇಕಾದರೆ ಲೋ ಲೆವೆಲ್‌ನಿಂದ, ಹೈ ಲೆವೆಲ್‌ವರೆಗೆ ಸುಮಾರು ೧೫೦೦ ಅಡಿಗಳಷ್ಟು ಮೇಲಕ್ಕೆ ನೀರನ್ನು ಲಿಫ್ಟ್ ಮಾಡಬೇಕಾಗುತ್ತದೆ. ಬೆಂಗಳೂರು ನಗರವನ್ನು ಈ ರೀತಿ ಬೆಳೆಯುವುದಕ್ಕೆ ಇವತ್ತು ಅವಕಾಶವನ್ನು ಕೊಡಬಾರದು ಬಿ ಡಿ ಎ ದವರೂ ಕೂಡಾ ಇವತ್ತು ಸೈಟ್ಸ್ ಮಾಡತಕ್ಕದ್ದು ತಪ್ಪು ಎಂದು ಹೇಳಿದ್ದಾರೆ. ಹಿಂದಿನ ಮುಖ್ಯ ಮಂತ್ರಿಗಳು ಎನ್ ಆರ್ ಐ ಬಗ್ಗೆ ಅಷ್ಟು ಪ್ರೇರಣೆ ಕೊಟ್ಟು ಪ್ರಚೋದನೆ ಮಾಡಿದರೋ ನನಗಂತೂ ಗೊತ್ತಿಲ್ಲ. ೧೯೭೫ರ ನವೆಂಬರ್ ಎರಡನೇ ತಾರೀಖು ಕರ್ನಾಟಕದಲ್ಲಿ ಹೈ ರೈಸ್ಡ್ ಬಿಲ್ಡಿಂಗ್ಸ್ ಸ್ಟಾಪ್ ಮಾಡಬೇಕೆಂದು ನಾವು ಪ್ರಥಮವಾಗಿ ನಿರ್ಣಯ ತೆಗೆದುಕೊಂಡು ಅವು ತಲೆ ಎತ್ತದಂತೆ ನಿಲ್ಲಿಸಿದೆವು. ಆದರೆ ಇವತ್ತು ಪ್ಯಾಲೇಸ್ ಆರ್ಚರ್ಡ್‌ನಲ್ಲಿ ಎತ್ತರದ ಬಿಲ್ಡಿಂಗ್ ಬಂದಿದೆ. ಅವರು ಹೈಕೋರ್ಟಿನಿಂದ ಆರ್ಡರ್ ತೆಗೆದು ಕೊಂಡು ಬಂದು

೩-೧೫ ಪಿ.ಎಂ.

ಕಟ್ಟಿದರೆ ಹೊರತು ನಮ್ಮ ಸರ್ಕಾರದಿಂದ ಅನುಮತಿ ಕೊಡಲಿಲ್ಲ. ಮುಂದೆ ಏಳು ವರ್ಷಗಳ ಅವಧಿಯಲ್ಲಿ ಈ ಬಗ್ಗೆ ಯಾವರೀತಿಯಾಗಿದೆ ಎಂಬುದನ್ನು ಮಂತ್ರಿಗಳು ಪರಿಶೀಲನೆ ಮಾಡಿ ಅದರ ಬಗ್ಗೆ ಸರಿಯಾದ ಮಾಹಿತಿಯನ್ನು ಸದನಕ್ಕೆ ತಿಳಿಸಬೇಕು. ಬೆಂಗಳೂರು ನಗರ ಕರ್ನಾಟಕ ರಾಜ್ಯದ ರಾಜಧಾನಿ ಯಾಗಿದೆ. ಬೆಂಗಳೂರು ನಗರ ಸುಂದರವಾದ ನಗರ. ಎಲ್ಲ ಕಡೆ ಹೆಚ್ಚಿನ ರೀತಿಯಲ್ಲಿ ಬೆಂಗಳೂರು ನಗರದ ಬಗ್ಗೆ ಅಭಿಮಾನವಿದೆ, ಅದರ ಸುಂದರತೆಯನ್ನು ಕಾಪಾಡಿಕೊಂಡು ಹೋಗಬೇಕಾಗಿದೆ, ಕಳೆದ ೨೦ ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ ಸಾಕಷ್ಟು ಏರುಪೇರಾಗಿದೆ. ಆದರೂ ಕೂಡ ಬೆಂಗಳೂರು ನಗರವನ್ನು ಬೇರೆ ರಾಜಧಾನಿಗಳ ನಗರಗಳಿಗೆ ಹೋಲಿಸಿದರೆ ಬೆಂಗಳೂರು ಆಕರ್ಷಕ ವಾಗಿಯೇ ಇದೆ. ಈ ನಗರಕ್ಕೆ ಏನಾದರೂ ಕೊರತೆ ಇದೆ ಅಂದರೆ ಅದು ನೀರಿನ ಕೊರತೆ. ಕಾವೇರಿ ಮೊದಲನೆಯ ಹಂತದ ಕೆಲಸ ಮುಗಿದಿದೆ, ಕಾವೇರಿ ಕುಡಿಯುವ ನೀರಿನ ಎರಡನೆಯ ಹಂತಕ್ಕೆ ೧೯೮೦ರಲ್ಲಿ ನಾನು ನಗರಾಭಿವೃದ್ಧಿ ಮಂತ್ರಿಯಾಗಿದ್ದಾಗ ೫೫ ಕೋಟಿ ರೂಪಾಯಿಗಳನ್ನು ನಿಗದಿಪಡಿಸ ಲಾಯಿತು. ಎಲ್ಲಿಯವರೆಗೆ ಸೆಕೆಂಡ್ ಸ್ಟೇಜ್ ಮುಗಿಯುವುದಿಲ್ಲ ಅಲ್ಲಿಯವರೆಗೆ ಜನಗಳಿಗೆ ನೀರು ಒದಗಿಸುವುದಕ್ಕೆ ಆಗುವುದಿಲ್ಲ, ನ್ಯಾಷನಲ್ ಆವರೇಜ್ ೪೫ ಗ್ಯಾಲನ್ ನೀರು ನಾವು ಒಬ್ಬರಿಗೆ ಒದಗಿಸಬೇಕು. ಆದರೆ ಎಲ್‌ಪಿಸಿಡಿ ೧೭ ಲೀಟರ್ ನೀರನ್ನು ಸಹ ಕೊಡುವ ಪರಿಸ್ಥಿತಿಯಲ್ಲಿ ನಾವಿಲ್ಲ. ಮೂರು ವರ್ಷಗಳ ಕಾಲ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಗುಂಡೂರಾಯರನ್ನು ನಾವು ಅಭಿನಂದಿಸ ಬೇಕಾಗಿದೆ. ಆಗ ಅರ್ಥಮಂತ್ರಿಗಳಾಗಿದ್ದ ನಮ್ಮ ವೀರಪ್ಪಮೊಯಿಲಿಯವರು ಸಹ ಇಲ್ಲಿ ಇದ್ದಾರೆ. ಕೇವಲ ಮೂರು ವರ್ಷಗಳಲ್ಲಿ ಬೆಂಗಳೂರು ನಗರಕ್ಕಾಗಿ ೩೭ ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿಗಾಗಿ ಖರ್ಚು ಮಾಡಿದ್ದೇವೆ. ಕಾವೇರಿ ಸೆಕೆಂಡ್ ಸ್ಟೇಜ್ ಏನು ಮಾಡಿದ್ದೇವೆ, ಅದನ್ನು ೧೯೮೪ರಲ್ಲಿ ಜನತಾ ಸರ್ಕಾರದವರು ಅದರ ಪ್ರಾರಂಭೋತ್ಸವ ಮಾಡಿದ್ದಾರೆಯೇ ಹೊರತು ಅವರ ಎಫರ್ಟ್ಸ್ ಏನೂ ಇಲ್ಲ. ಇವತ್ತು ಕಾವೇರಿ ಮೂರನೇ ಹಂತವನ್ನು ತೆಗೆದುಕೊಂಡಿದ್ದಾರೆ, ಅದಕ್ಕಾಗಿ ೧೫೦ ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ಇನ್ನೂ ೨೦೦ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಮೂರನೇ ಹಂತದ ಯೋಜನೆಯನ್ನು ಮುಗಿಸಿದರೆ ಬೆಂಗಳೂರು ನಗರದ ೩೭ ಲಕ್ಷ ಜನರಿಗೆ ನೀರು ಸಿಗುತ್ತದೆ. ನಂತರ ನಾಲ್ಕನೇ ಹಂತವನ್ನು ತೆಗೆದುಕೊಳ್ಳಬೇಕಾಗಿದೆ ಎಂದು ನಮ್ಮ ಅಧಿಕಾರಿಗಳ ಜೊತೆ ಮಾತನಾಡಿದಾಗ ಹೇಳಿದರು. ಸಂಬಂಧಪಟ್ಟ ಮುಖ್ಯ ಇಂಜಿನಿಯರ್ ಪುಟ್ಟಕೆಂಪಣ್ಣನವರು ಹೇಳುತ್ತಿದ್ದರು. ಇದನ್ನು ೮ನೇ ಪಂಚವಾರ್ಷಿಕ ಯೋಜನೆಯಲ್ಲಿ ಇನ್‌ಕ್ಲೂಡ್ ಮಾಡಬೇಕಾಗಿದೆ. ಸುಂದರವಾದ ಇಂತಹ ನಗರಕ್ಕೆ ನೀರಿನ ಕೊರತೆ ಇದೆ. ಜನಸಂಖ್ಯೆ ಜಾಸ್ತಿಯಾಗಿದೆ. ಮುಂದಿನ ಪೀಳಿಗೆಗೆ ನೀರನ್ನು ಒದಗಿಸುವುದು ಇರಲಿ ಇವತ್ತು ಇಲ್ಲಿರತಕ್ಕ ಜನರಿಗೆ ನೀರನ್ನು ಒದಗಿಸುವ ಪರಿಸ್ಥಿತಿಯಲ್ಲಿ ನಾವಿಲ್ಲ, ಎಲ್ಲಾ ಕಡೆ ನಗರದಲ್ಲಿ ಸೈಟು ಗಳನ್ನು ಕೊಡುತ್ತಿದ್ದೇವೆ. ಇವತ್ತು ಬೆಂಗಳೂರು ನಗರ [illegible] ೧೫೦ ಸ್ಕ್ವೇರ್ ಕಿಲೋಮೀಟರ್‌ವರೆಗೆ ಬೆಳವಣಿಗೆ ಆಗಿದೆ. ಇನ್ನೂ ನಗರ ಬೆಳೆಯುತ್ತಾ ಇದೆ. ಎಲ್ಲಾ ಕಡೆಗೆ ನೀರು [illegible] ಪರಿಸ್ಥಿತಿಯಲ್ಲಿ ಇಲ್ಲ. ನಾನು ಮಂತ್ರಿಗಳಿಗೆ ಹೇಳುತ್ತೇನೆ. [illegible] ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ಬೆಂಗಳೂರು ನಗರದ ಸಂಬಂಧಪಟ್ಟ ಶಾಸಕರ ಜೊತೆಯಲ್ಲಿ ತಾವು ಸಮಾಲೋಚನೆ ಮಾಡಬೇಕು. ನಾನು ಮಂತ್ರಿಯಾಗಿದ್ದಾಗ ಮೆಟ್ರೊಪಾಲಿಟನ್ ಸಿಟಿಗಳಿಗೆ ಭೇಟಿ ಕೊಟ್ಟಿದ್ದೇನೆ, ಮೆಟ್ರೋಪಾಲಿಟನ್ ಅಥಾರಿಟಿ ಮಾಡಬೇಕೆಂದು ಒಂದು ಬಿಲ್ ಕೂಡ ರೆಡಿಯಾಗಿದೆ,

ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಒಂದು ಸಮಿತಿ ಇದೆ. ಬೆಂಗಳೂರು ವಾಟರ್ ಸಪ್ಲೈ ಬೋರ್ಡ್ ಆಗಲಿ, ಹೌಸಿಂಗ್ ಬೋರ್ಡ್ ಆಗಲಿ ಸ್ಲಮ್ ಬೋರ್ಡ್ ಆಗಲಿ, ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಆಗಲಿ ಇವುಗಳೆಲ್ಲವನ್ನೂ ಕೂಡಿಸುವಂತಹ ಒಂದು ಅಥಾರಿಟಿ ಆಗಬೇಕು. ದೆಹಲಿ, ಕಲ್ಕತ್ತ ನಗರಗಳಲ್ಲಿ ಇಂತಹ ಅಥಾರಿಟಿಗಳಿವೆ. ಮದ್ರಾಸ್ ನಗರದಲ್ಲಿ ಮೆಟ್ರೊಪಾಲಿಟನ್ ಅಥಾರಿಟಿ ಇದೆ. ನಮ್ಮ ಬೆಂಗಳೂರು ನಗರ ಮಹಾನಗರಗಳಲ್ಲಿ ಐದನೇ ನಗರ ವಾಗಿದೆ. ಬೆಂಗಳೂರು ನಗರವನ್ನು ಮೆಟ್ರೊಪಾಲಿಟನ್ ಅಥಾರಿಟಿ ಮಾಡಬೇಕು. ಎಲ್ಲ ಬೋರ್ಡ್‌ಗಳನ್ನು ಮತ್ತು ಅಥಾರಿಟಿಗಳನ್ನು ಕಂಟ್ರೋಲ್ ಮಾಡತಕ್ಕ ಒಂದು ಅಥಾರಿಟಿಯನ್ನು ಎಲ್ಲಿಯವರೆಗೆ ನೀವು ಮಾಡುವುದಿಲ್ಲ ಅಲ್ಲಿಯವರೆಗೆ ಈ ನಗರವನ್ನು ನಿಯಂತ್ರಣ ಮಾಡುವುದಕ್ಕಾಗು ವುದಿಲ್ಲ. ನಾನು ಈಗಾಗಲೇ ಹೇಳಿದ ಹಾಗೆ, ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡ್ ಇದೆ. ಅದು ಎಲ್ಲ ನಗರ ಪ್ರದೇಶಗಳಿಗೆ ನೀರು ಸರಬರಾಜು ಮಾಡತಕ್ಕ ಜವಾಬ್ದಾರಿಯನ್ನು ವಹಿಸಿಕೊಂಡಿದೆ.

ಇವತ್ತು ಈ ಬೋರ್ಡಿನ ಮುಂದೆ ೪೮ ಹಳೆಯ ಸ್ಕೀಮ್‌ಗಳು ಇವೆ. ಇದಕ್ಕೆ ಬೇಕಾಗಿರತಕ್ಕಂಥ ಹಣ ೧೯೯೦ ಲಕ್ಷ ರೂಪಾಯಿಗಳು. ೧೪ ಹೊಸ ಸ್ಕೀಮ್‌ಗಳನ್ನು ತೆಗೆದುಕೊಂಡಿದ್ದಾರೆ. ಒಟ್ಟಾರೆ ೬೨ ಯೋಜನೆಗಳನ್ನು ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡಿನ ಮೂಲಕ ಮಾಡಿ ಮುಗಿಸ ಬೇಕಾಗಿದೆ ಇದಕ್ಕೆ ಒಟ್ಟು ೧೬೭ ಕೋಟಿ ರೂಪಾಯಿಗಳು ಬೇಕಾಗಿದೆ. ಆದರೆ ಇವತ್ತು ಕೇವಲ ೧೬ ಕೋಟಿಯನ್ನು ಇದಕ್ಕಾಗಿ ಬಜೆಟ್‌ನಲ್ಲಿ ಒದಗಿಸಿದ್ದೀರಿ. ಈ ಒಂದು ರೀತಿಯಲ್ಲಿ ಹೋದರೆ ಯಾವ ಸ್ಕೀಮ್‌ನ್ನೂ ಕೂಡ ಮುಗಿಸುವುದಕ್ಕೆ ಆಗುವುದಿಲ್ಲ. ಈಗಾಗಲೇ ನಿಮ್ಮದು ಸ್ಪಿಲ್ ಓವರ್ ಸ್ಕೀಮ್ ಗಳು ಏನಿವೆ, ಹೋದವರ್ಷದ್ದು ಏನಿದೆ ಮತ್ತು ಪಟ್ಟಣ ಪ್ರದೇಶಗಳಲ್ಲಿ ನೀರು ಸರಬರಾಜು ಯೋಜನೆ ಗಳನ್ನು ಹೊಸದಾಗಿ ಏನು ತೆಗೆದುಕೊಂಡಿದ್ದೀರಿ, ಇದೆಲ್ಲ ಸ್ಕೀಮ್‌ಗಳನ್ನು ಮುಗಿಸಬೇಕಾದರೆ ಇವತ್ತು ನಿಮಗೆ ೧೩೩ ಕೋಟಿ ರೂಪಾಯಿಗಳು ಬೇಕಾಗಿದೆ. ಆದರೆ ಇದರಲ್ಲಿ ಒಂದು ಸ್ಕೀಮ್ ಕೂಡ ಮುಗಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ತಾವು ಅರ್ಥ ಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ಯಾವ ಯೋಜನೆಗಳನ್ನು ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡಿನಡಿಯಲ್ಲಿ ತೆಗೆದು ಕೊಂಡಿದ್ದೀರಿ, ಅದಕ್ಕೆ ಹೆಚ್ಚಿನ ರೀತಿಯಲ್ಲಿ ದುಡ್ಡು ಒದಗಿಸುವ ಕಾರ್ಯಕ್ರಮ ಮಾಡಬೇಕು. ಅದರ ಕಡೆಗೆ ತಾವು ಹೆಚ್ಚು ಲಕ್ಷ್ಯ ಕೊಡಬೇಕು. ಅಂದರೆ ಮಾತ್ರ ಪರಿಣಾಮಕಾರಿಯಾಗಿ ಎಲ್ಲ ಕೆಲಸ ಕಾರ್ಯ ಗಳನ್ನು ಎಲ್ಲ ಸ್ಕೀಮ್‌ಗಳನ್ನು ಮುಗಿಸಲಿಕ್ಕೆ ಸಾಧ್ಯವಾಗುತ್ತದೆ. ಇಂಟರ್‌ನ್ಯಾಷನಲ್ ವಾಟರ್ ಡಿಕೇಡ್ ಅಂತ ಇದೆ. ಅದು ಪ್ರಾರಂಭವಾದದ್ದು ೧೯೮೦ ರಿಂದ ೯೦ರವರೆಗೆ. ಅದರಲ್ಲಿ ೨೮೪ ಕೋಟಿ ಯನ್ನು ಸ್ಟೇಟ್ ಗವರ್ನಮೆಂಟ್ ಪ್ರೊವೈಡ್ ಮಾಡಬೇಕು. ಮತ್ತೆ ಬೇರೆ ಇಂಟರ್‌ನ್ಯಾಷನಲ್ ಏಜೆನ್ಸಿಗಳಿಂದ ಇದಕ್ಕೆ ಹಣ ಕೊಡತಕ್ಕಂಥಾದ್ದು ಇದೆ. ಇವತ್ತು ತಾವು ಏನು ಆಕ್ಟ್ರಾಯಿ ತೆಗೆದು ಹಾಕಿದ ಮೇಲೆ ಬೇರೆಬೇರೆ ರೀತಿಯಲ್ಲಿ ತೆರಿಗೆ ವಸೂಲು ಮಾಡುತ್ತೀರಿ. ಅದರಿಂದ ಸಹ ಹಣ ಕೊಡ ಬೇಕು. ಮತ್ತು ನಗರಾಭಿವೃದ್ಧಿಯಲ್ಲಿ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡತಕ್ಕಂಥ ರೀತಿಯಲ್ಲಿ ಕೂಡ ಇವತ್ತು ತಾವು ಹುಡ್ಕೋದಿಂದ ಹಣ ತೆಗೆದುಕೊಳ್ಳತಕ್ಕಂಥ ಪ್ರಯತ್ನ ಮಾಡಬೇಕು. ಎಲ್.ಐ.ಸಿ. ಯಿಂದ ಹಣ ತೆಗೆದುಕೊಳ್ಳುವಂಥ ಪ್ರಯತ್ನ ಮಾಡಬೇಕು. ಜನರಲ್ ಇನ್‌ಶೂರೆನ್ಸ್ ಕಂಪನಿ ಇದೆ. ಹೀಗೆ ಸಾಕಷ್ಟು ಬೇರೆಬೇರೆ ಫೈನಾನ್ಸಿಯಲ್ ಇನ್ಸ್ಟಿಟ್ಯೂಶನ್ಸ್ ಏನಿವೆ, ಅವುಗಳಿಂದ ಕೂಡ ಹಣ ತೆಗೆದುಕೊಂಡು ಈ ಕೆಲಸಕಾರ್ಯಗಳನ್ನು ಮಾಡತಕ್ಕಂಥ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳು ತ್ತೇನೆ. ಇನ್ನು ನಮ್ಮ ರಿಪೋರ್ಟ್‌ನಲ್ಲಿ ಹೇಳಿದಹಾಗೆ ಗ್ರಾಮಾಂತರ ಪ್ರದೇಶಗಳಲ್ಲಿರುವ ಬಡ ಜನರಿಗೆ ಸೈಟುಗಳನ್ನು ಕೊಡಬೇಕೆಂದು ಯೋಜನೆಯನ್ನು ಹಾಕಿಕೊಂಡಾಗಿನಿಂದ ಇಲ್ಲಿಯವರೆಗೆ ನಾವು ೧೪ ಲಕ್ಷದ ೯೯ ಸಾವಿರ ಕುಟುಂಬಗಳಿಗೆ ಸೈಟ್‌ಗಳನ್ನು ಕೊಟ್ಟಿದ್ದೇವೆ. ಈ ಸ್ಕೀಮ್ ಪ್ರಾರಂಭವಾದದ್ದು ೧೯೭೨-೭೩ರಲ್ಲಿ ಆದರೆ ೧೯೮೩ರವರೆಗೆ ನಾವು ಕೊಟ್ಟದ್ದು ೧೧ ಲಕ್ಷ ೬ ಸಾವಿರದ ೨೪೫ ಸೈಟುಗಳು. ಇದು ನಮ್ಮ ಕಾಂಗ್ರೆಸ್ ಸರ್ಕಾರ ಇದ್ದಾಗ. ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ೩ ಲಕ್ಷ ೮೪ ಸಾವಿರದ ೫೫೯ ಸೈಟುಗಳನ್ನು ಕೊಟ್ಟಿದ್ದಾರೆ ಅಂದರೆ ಕೇವಲ ೭ ವರ್ಷಗಳ ಅವಧಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಬಡ ಜನರಿಗೆ ಸೈಟುಗಳನ್ನು ಕೊಡತಕ್ಕ ವಿಷಯದ ಬಗ್ಗೆ ಅವರು ಹೆಚ್ಚು ವಿಚಾರ ಮಾಡಲಿಲ್ಲ. ಇವತ್ತು ನಾನು ಮಾನ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ. ಏನೆಂದರೆ ನಾವು ನಿವೇಶನಗಳನ್ನು ಯಾವಾಗ ಕೊಡಬಲ್ಲೆವೂ ನಿವೇಶನಗಳನ್ನು ಕೊಡಬೇಕಾದರೆ ಮೊದಲು ಜಮೀನು ವಶಪಡಿಸಿಕೊಳ್ಳಬೇಕು. ಈಗಾಗಲೇ ಜಮೀನು ವಶಪಡಿಸಿಕೊಳ್ಳಲಿಕ್ಕೆ ಹೋದಾಗ ಎಲ್ಲಾ ಕಡೆ ಜನರು ಕೋರ್ಟಿಗೆ ಹೋಗಿದ್ದಾರೆ. ೫೯೬ ಕೇಸುಗಳು ಕೋರ್ಟಿನಲ್ಲಿ ಪೆಂಡಿಂಗ್ ಇವೆ. ತಾವು ಮಾನ್ಯ ಕಾನೂನು ಸಚಿವರಿಗೆ ಈ ಬಗ್ಗೆ ಹೇಳಬೇಕಾಗಿದೆ. ಇವತ್ತು ೫೯೬ ಭೂಸ್ವಾಧೀನ ಪ್ರಕರಣಗಳಲ್ಲಿ

ಎಷ್ಟು ಖಾಲಿಯಾಗಿವೆ, ಎಷ್ಟು ಬಾಕಿ ಉಳಿದಿವೆ ಎಂದು ಸ್ವಲ್ಪ ಮೆಥೆಡಿಕಲ್ ಆಗಿ ಅದರ ಬಗ್ಗೆ ತಾವು ಗಮನಹರಿಸಬೇಕು. ಇವತ್ತು ಇರತಕ್ಕಂಥ ಸರ್ಕಾರೀ ಜಮೀನಿನಲ್ಲಿ ೩೬,೫೦೦ ಸೈಟುಗಳನ್ನು ತಾವು ಕೊಡಬಹುದು. ಇದರ ಬಗ್ಗೆ ತಾವು ಅಧಿಕಾರಿಗಳಿಗೆ ಆದೇಶ ಕೊಡಬೇಕಾಗಿದೆ. ಮತ್ತು ಇವತ್ತು ೫೭೦ ಕೇಸುಗಳು ಏನು ಕೋರ್ಟಿನ ಮುಂದೆ ಪೆಂಡಿಂಗ್ ಇವೆ, ಅವು ನಿಖಾಲೆ ಆದರೆ ಒಂದು ಲಕ್ಷ ಐವತ್ತೆರಡು ಸಾವಿರ ಜನರಿಗೆ ಸೈಟುಗಳನ್ನು ಕೊಡತಕ್ಕ ಪರಿಸ್ಥಿತಿಯಲ್ಲಿ ತಾವು ಇರುತ್ತೀರಿ. ಇದರ ಬಗ್ಗೆ ತಾವು ಹೆಚ್ಚಿನ ಗಮನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ,

ಉಪ ಸಭಾಧ್ಯಕ್ಷಿಣಿಯವರು.— ಇನ್ನು ೫ ನಿಮಿಷದಲ್ಲಿ ತಾವು ಮುಗಿಸಬೇಕು, ಈಗಾಗಲೇ ಅರ್ಧಗಂಟೆ ಕಾಲವನ್ನು ತೆಗೆದುಕೊಂಡಿದ್ದೀರಿ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.— ಈಗ ಕೊಳಚೆ ಪ್ರದೇಶವಲ್ಲಿ ಯಾರು ಬಡವರು ಇದ್ದಾರೆ, ಇವರ ಬಗ್ಗೆ ಹೆಚ್ಚಿನ ರೀತಿಯಲ್ಲಿ ಆಸಕ್ತಿ ವಹಿಸಿ ಕೆಲಸ ಮಾಡಬೇಕೆಂಬ ಭಾವನೆ ಮಾನ್ಯ ನರಸಿಂಹಮೂರ್ತಿಯವರ ಮನಸ್ಸಿನಲ್ಲಿದೆ, ಇದರ ಬಗ್ಗೆ ಕಮಿಟ್‌ಮೆಂಟ್ ಕೂಡ ಅವರಲ್ಲಿದೆ. ಈಗಾಗಲೇ ೧೯೮೩ರಲ್ಲಿ ಒಂದು ಸದನದ ಸಮಿತಿ ಮಾಡಿದಾಗ, ಅವರು ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಆಗ ಅವರ ಅಧ್ಯಕ್ಷತೆಯಲ್ಲಿ ಸದನದ ಸಮಿತಿ ಮಾಡಿದ್ದರು ಕೊಳಚೆ ಪ್ರದೇಶದಲ್ಲಿರತಕ್ಕ ಜನರ ಬಗ್ಗೆ ಯಾವ ರೀತಿಯಾದ ಕಾರ್ಯಕ್ರಮ ಹಾಕಿಕೊಳ್ಳಬೇಕು, ಯಾವ ರೀತಿಯಾಗಿ ನಾವು ಕೆಲಸ ಕಾರ್ಯಗಳನ್ನು ಮಾಡಿದರೆ, ಹೆಚ್ಚಿನ ರೀತಿಯಲ್ಲಿ ಪರಿಣಾಮಕಾರಿಯಾಗಿ ಅವರ ಸಮಸ್ಯೆಗಳನ್ನು ನಿವಾರಣೆ ಮಾಡಬಹುದು ಎಂದು ಅವರು ಸರ್ಕಾರಕ್ಕೆ ಒಂದು ರಿಪೋರ್ಟ್ ಸಹ ಕೊಟ್ಟಿದ್ದಾರೆ. ಇದರ ಬಗ್ಗೆ ಹೆಚ್ಚಿನ ಮಾಹಿತಿ ಕೂಡ ಅವರಲ್ಲಿದೆ. ೧೯೮೩ರಲ್ಲಿ ನಾವು ಈ ಜನರ ಸಲುವಾಗಿ ೪ ಕೋಟಿ ೨೦ ಲಕ್ಷ ಖರ್ಚುಮಾಡಿ ಕೆಲಸಕಾರ್ಯಗಳನ್ನು ಮಾಡಿದರೆ, ೧೯೮೩ ರಿಂದ ೧೯೮೮ರ ವರೆಗೆ ಜನತಾ ಸರ್ಕಾರ ಕೇವಲ ೪ ಕೋಟಿ ೭೮ ಲಕ್ಷ ಖರ್ಚು ಮಾಡಿದೆ. ಮೂರು ವರ್ಷಗಳಿಂದ ನಾವು ಏನು ಹಣ ಖರ್ಚು ಮಾಡಿ, ಕೊಳಚೆ ಪ್ರದೇಶದಲ್ಲಿರತಕ್ಕ ಜನರ ಬಗ್ಗೆ ಹೆಚ್ಚಿನ ರೀತಿಯಲ್ಲಿ ಆಲೋಚನೆ ಮಾಡಿದ್ದೆವು, ಇವರು ೫ ವರ್ಷಗಳಲ್ಲಿ ಅಷ್ಟೇ ಖರ್ಚು ಮಾಡಿದ್ದಾರೆ. ಅಂದರೆ ಹೆಚ್ಚಿನ ರೀತಿಯಲ್ಲಿ ಆಸಕ್ತಿ ವಹಿಸಿಲ್ಲ. ೧೯೮೮ರ ವರೆಗೆ ರಾಜ್ಯಪಾಲರ ಆಡಳಿತದಲ್ಲಿ ೬,೬೦೩ ನಿವೇಶನಗಳಿದ್ದು, ಅದರಲ್ಲಿ ಕೇವಲ ೨,೪೯೯ ನಿವೇಶನಗಳನ್ನು ಹಂಚಿದ್ದಾರೆ. ಹೆಚ್ಚು ಖರ್ಚುಮಾಡಿ ೬—೭ ಸಾವಿರ ನಿವೇಶನಗಳ ಪೈಕಿ ಕೊಟ್ಟರೆ, ಕೇವಲ ೨ ಸಾವಿರ ನಿವೇಶನಗಳನ್ನು ಹಂಚಿದ್ದಾರೆ. ಉಳಿದ ನಿವೇಶನಗಳನ್ನು ಹಂಚಿಲ್ಲ. ಇದರ ಬಗ್ಗೆ ಸಹ ಗಮನಹರಿಸಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮ್ಸ್ ಇವೆ ಎಷ್ಟು ದುಡ್ಡನ್ನು ರಾಜ್ಯಸರ್ಕಾರ ಕೊಳಚೆ ಪ್ರದೇಶಗಳಿಗೆ ಖರ್ಚು ಮಾಡುತ್ತದೆ, ಅಷ್ಟೇ ದುಡ್ಡನ್ನು ಇವತ್ತು ಕೇಂದ್ರಸರ್ಕಾರ ಕೊಡುತ್ತದೆ. ಈ ಕೊಳಚೆ ಪ್ರದೇಶದಲ್ಲಿರತಕ್ಕ ಜನರಿಗೆ ಹೆಚ್ಚಿನ ರೀತಿಯಲ್ಲಿ ಪ್ಯಾಕೇಜ್ ಪ್ರೋಗ್ರಾಮ್ ಹಾಕಿಕೊಂಡು, ಅಂದರೆ ದೀಪ ಹಾಕಿಸಿ ಕೊಡುವುದು, ಒಳಚರಂಡಿ ವ್ಯವಸ್ಥೆ ಮಾಡುವುದು ಇತ್ಯಾದಿ ಕೆಲಸಗಳನ್ನು ಮಾಡತಕ್ಕ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಳ್ಳಬೇಕು. ಬಾಂಬೆ ಕಾರ್ಪೊರೇಷನ್‌ನಲ್ಲಿ ಬಾಂಬೆ ಸಿಟಿಯಲ್ಲಿ ೪೮ ಲಕ್ಷ ಜನರು ಅಲ್ಲಿನ ಸ್ಲಮ್ಸ್‌ನಲ್ಲಿ ವಾಸ ಮಾಡುತ್ತಿದ್ದಾರೆ. ಅವರೆಲ್ಲರೂ ವೋಟರ್ಸ್ ಇದ್ದಾರೆ. ಇವರೆಲ್ಲರ ಅಭಿವೃದ್ಧಿ ಬಗ್ಗೆ ಅವರು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಇದು ನೋಡಿದರೆ, ಬೆಂಗಳೂರು ನಗರದಲ್ಲಿ ಇರತಕ್ಕ ೧೦—೧೨ ಲಕ್ಷ ಕೊಳಚೆ ಪ್ರದೇಶದ ಜನರ ಜೀವನದ ಕಲ್ಯಾಣಕ್ಕಾಗಿ ಕೆಲಸ ಮಾಡುವುದು ಅಷ್ಟು ದೊಡ್ಡ ಹಾಗೂ ಮಹತ್ವದ ಕೆಲಸವಲ್ಲ. ಆದರೆ ಹೊರಗಡೆಯಿಂದ ಬರತಕ್ಕ ಜನ ಈ ಸ್ಲಮ್‌ಗಳಲ್ಲಿ ವಾಸ ಮಾಡದಂತೆ ತಡೆಯುವ ಕಾರ್ಯಕ್ರಮ ಹಾಕಿಕೊಳ್ಳಬೇಕು. ತಮಿಳುನಾಡು ಮತ್ತಿತರ ರಾಜ್ಯಗಳಿಂದ ವಲಸೆ ಬರುವುದನ್ನು ತಡೆಗಟ್ಟಿ ಈಗ ನಮ್ಮಲ್ಲಿ ಇರತಕ್ಕ ಸ್ಲಮ್‌ಗಳ ಸುಧಾರಣೆಗೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು, ಇವುಗಳನ್ನು ಸುಧಾರಣೆ ಮಾಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಈಗ ನೆಹರು ರೋಜ್‌ಗಾರ್ ಯೋಜನೆ ಇದೆ. ಇವತ್ತು ಹಳ್ಳಿ ಪ್ರದೇಶಗಳಲ್ಲಿ ಸಾಕಷ್ಟು ಕೆಲಸಕಾರ್ಯಗಳು ಆಗುತ್ತಿವೆ. ಹೋದ ಸರ್ಕಾರ ಮಂಡಲ್ ಪಂಚಾಯತ್ತುಗಳಿಗೆ ಹೆಚ್ಚು ಹಣ ಕೊಡುತ್ತಾ ಇರಲಿಲ್ಲ. ಹೋದಸಲ ಈ ಯೋಜನೆ ಕೆಳಗೆ ೯೭ ಕೋಟಿ ರೂಪಾಯಿಗಳು ಕೇಂದ್ರದಿಂದ ರಾಜ್ಯಸರ್ಕಾರಕ್ಕೆ ಬಂದಿತ್ತು. ಅದೇ ರೀತಿ ಪಟ್ಟಣ ಪ್ರದೇಶಗಳಲ್ಲಿ ಈ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ೭ ಕೋಟಿ ೬೧ ಲಕ್ಷ ಕೇಂದ್ರದಿಂದ ಬಂದಿತ್ತು. ರಾಜ್ಯಸರ್ಕಾರ ತನ್ನ ಬೊಕ್ಕಸದಿಂದ ೪ ಕೋಟಿ ೨೭ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿತ್ತು. ಅದನ್ನು ಇನ್ನೂ ಮಾಡಿಲ್ಲ. ೧೯೯೦–೯೧ರಲ್ಲಿ ತಾವು ಹೆಚ್ಚಿನ ರೀತಿಯಲ್ಲಿ ಇದಕ್ಕಾಗಿ ಹಣವನ್ನು ಒದಗಿಸುತ್ತೀವಿ ಎನ್ನುವ ಬಗ್ಗೆ ಇದರಲ್ಲಿ ಪ್ರಸ್ತಾಪ ಮಾಡಿಲ್ಲ.

ಇದರ ಬಗ್ಗೆ ಕೂಡಾ ತಾವು ಗಮನಹರಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇನ್ನೂ ಆ ಹಣ ಬಿಡುಗಡೆಯಾಗಿಲ್ಲ. ಕೊನೆಯದಾಗಿ, ಇವತ್ತು ಇರತಕ್ಕ ಮಂತ್ರಿಗಳು ಏನಿದ್ದಾರೆ ಅವರು ಬಹಳ ಕಳಕಳಿ ಇರತಕ್ಕಂಥಾವರು. ಯಾರು ಹರಿಜನ ಗಿರಿಜನರು ಏನಿದ್ದಾರೆ ಅವರ ಉದ್ಧಾರಕ್ಕಾಗಿ ಕೆಲಸ ಕಾರ್ಯಗಳನು ಮಾಡಬೇಕೆಂಬ ಭಾವನೆ ಅವರ ಮನಸ್ಸಿನಲ್ಲಿದೆ. ಕಾರ್ಪೊರೇಷನ್ ಏರಿಯಾಗಳಲ್ಲಿರುವ ಒಂದು ವಿಚಾರ ಹೇಳುತ್ತೇನೆ. ಪಟ್ಟಣ ಪ್ರದೇಶ ನಗರ ಪ್ರದೇಶಗಳಿಗೆ ನಾನು ಹೋಗುವುದಿಲ್ಲ ಅದರ ಪಟ್ಟಿ ಬಹಳ ಉದ್ದವಾಗಿದೆ. ದೊಡ್ಡದಾಗಿದೆ. ಕೇವಲ ನಾನು ರಿಪೋರ್ಟ್ ನೋಡಿದಂಥ ರೀತಿಯಲ್ಲಿ ೧೮ ಪರ್ಸೆಂಟ್ ಹಣ ಏನಿದೆ ಅದನ್ನು ನಗರ ಪ್ರದೇಶದಲ್ಲಿ ಟೌನ್ ಮುನಿಸಿಪಾಲಿಟಿಯಲ್ಲಿ. ಕಾರ್ಪೊರೇಷನ್ ನಲ್ಲಿ ಖರ್ಚು ಮಾಡಬೇಕು. ನಾವೇನು ಜನರಲ್ ಬಜೆಟ್ ತಯಾರು ಮಾಡುತ್ತೇವೆ ಅದರಲ್ಲಿ ಈ ಸಾಮಾನ್ಯ ಜನರ ಬಗ್ಗೆ, ಬಡವರ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಬೇಕು. ಟೋಟಲ್ ಬಜೆಟ್‌ನಲ್ಲಿ ೧೮ ಪರ್ಸೆಂಟ್ ಹಣವನ್ನು ಹರಿಜನ ಗಿರಿಜನರಿಗಾಗಿ ಏನು ಖರ್ಚು ಮಾಡಬೇಕಾಗಿತ್ತು, ಅದು ಖರ್ಚಾಗುತ್ತಿರಲಿಲ್ಲ. ನನ್ನ ಕಾಲದಲ್ಲಿ ಇದಕ್ಕಾಗಿ ಒಂದು ವಾಚ್‌ಡಾಗ್ ಕಮಿಟಿ ಮಾಡಿದ್ದೆ. ಅದಕ್ಕೆ ಸೋಷಿಯಲ್ ಜಸ್ಟೀಸ್ ಕಮಿಟಿ ಎಂದು ಹೆಸರು. ಯಾವರೀತಿ ಕಾರ್ಪೊರೇಷನ್‌ನಲ್ಲಿ ಮುನಿಸಿಪಾಲಿಟಿಗಳಲ್ಲಿ ಸ್ಟ್ಯಾಂಡಿಂಗ್ ಕಮಿಟಿಗಳು ಇರುತ್ತವೆ. ಅದೇ ರೀತಿ ಸೋಷಿಯಲ್ ಜಸ್ಟೀಸ್ ಕಮಿಟಿ ಇದ್ದು, ಹರಿಜನ ಗಿರಿಜನರಿಗಾಗಿ ಮೀಸಲಿಟ್ಟ ಹಣ ಖರ್ಚಾಗುತ್ತಿದೆಯೋ ಇಲ್ಲವೇ ಎಂಬುದನ್ನು ನೋಡತಕ್ಕ ಕೆಲಸ ಮಾಡಲು ಒಂದು ಕಮಿಟಿ ಮಾಡಬೇಕೆಂದು ಕಾನೂನು ತಿದ್ದುಪಡಿ ಮಾಡಿ, ಸೋಷಿಯಲ್ ಜಸ್ಟೀಸ್ ಕಮಿಟಿಯನ್ನು ಎಲ್ಲಾ ಕಾರ್ಪೊರೇಷನ್, ನಗರಸಭೆ ಹಾಗೂ ಪುರಸಭೆಗಳಲ್ಲಿ ಮಾಡಲಾಗಿದೆ. ಇವತ್ತು ದುರ್ದೈವದಿಂದ ಏನಾಗಬೇಕಾಗಿತ್ತು ಅದು ಆಗಿಲ್ಲ. ನೀವು ಅಧಿಕಾರ ವಹಿಸಿಕೊಂಡು ಮೂರು ತಿಂಗಳಾಯಿತು. ಮುಂದೆ ಬರತಕ್ಕಂಥ ಸಾಲಿನಲ್ಲಿ ಕೂಡಾ ಇದರ ಬಗ್ಗೆ ಒಂದು ಮಾತು ಬರಬಾರದು ಎಂಬ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಬೆಂಗಳೂರು ನಗರದಲ್ಲಿ ೧೮ ಪರ್ಸೆಂಟ್ ಹಣ ೧ ಕೋಟಿ ೬೬ ಲಕ್ಷ ಇದೆ. ಅದರಲ್ಲಿ ಖರ್ಚು ಮಾಡಿರತಕ್ಕಂಥಾದ್ದು ೬೩ ಲಕ್ಷ. ಇನ್ನೂ ೧೦೩ ಲಕ್ಷ ರೂಪಾಯಿ ಖರ್ಚು ಮಾಡಬೇಕಾಗಿದೆ. ಬೆಂಗಳೂರು ನಗರದ ಮೇಯರ್ ಆಗಿ ವಿಜಯಕುಮಾರ್ ಅವರು ಬಂದಿದ್ದಾರೆ. ಅವರು ಹರಿಜನ ಗಿರಿಜನ ವರ್ಗಕ್ಕೆ ಸಂಬಂಧಪಟ್ಟವರು. ಅವರ ಬಗ್ಗೆ ಕಾಳಜಿ ಇದೆ. ಈ ಸದನದ ಮುಖಾಂತರ ಅವರಿಗೂ ಕೂಡಾ ಕೇಳಿಕೊಳ್ಳುತ್ತಿದ್ದೇನೆ. ಇದರ ಬಗ್ಗೆ ಅವರೂ ಗಮನಹರಿಸಬೇಕು. ಮಾನ್ಯ ಮಂತ್ರಿಗಳು ಕೂಡಾ ಇದನ್ನು ರಿವ್ಯೂ ಮಾಡಬೇಕು. ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಿ ಇದಕ್ಕಾಗಿ ೧ ಕೋಟಿ ೬೬ ಲಕ್ಷ ರೂ ನಿಗದಿ ಮಾಡಿದ್ದು ಅದರಲ್ಲಿ ಕೇವಲ ೬೩ ಲಕ್ಷ ರೂ ಖರ್ಚು ಮಾಡಿದ್ದಾರೆ ಎಂದರೆ ಇದರ ಬಗ್ಗೆ ಅವರು ಎಷ್ಟು ಆಸಕ್ತಿ ವಹಿಸಿದ್ದಾರೆ ಎಂಬುದು ಗೊತ್ತಾಗುತ್ತದೆ. ಬೆಳಗಾಂನಲ್ಲಿ ೧ ಕೋಟಿ ೫೧ ಲಕ್ಷ ಇದೆ, ಅದರಲ್ಲಿ ೭೩ ಲಕ್ಷ ರೂ ಖರ್ಚಾಗಿದೆ, ಗುಲ್ಬರ್ಗಾದಲ್ಲಿ ೫೯ ಲಕ್ಷ ರೂ. ಇದೆ, ಅದರಲ್ಲಿ ೨೨ ಲಕ್ಷ ರೂ. ಖರ್ಚಾಗಿದೆ, ಮೈಸೂರಿನಲ್ಲಿ ೭೩ ಲಕ್ಷ ನಿಗದಿ ಮಾಡಿದ್ದು, ಅದರಲ್ಲಿ ೧೪ ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಇವತ್ತು ಇಲ್ಲೆಲ್ಲಾ ಸೋಷಿಯಲ್ ಜಸ್ಟೀಸ್ ಕಮಿಟಿ ಇದ್ದರೂ, ೧೮ ಪರ್ಸೆಂಟ್ ಹಣವನ್ನು ಖರ್ಚು ಮಾಡುವ ಬಗ್ಗೆ ಕಾರ್ಯಕ್ರಮಗಳು ಆಗುತ್ತಿಲ್ಲ. ಇವತ್ತು ಕಮಿಟಿ ಮಾಡಿದ್ದರೂ ಕೂಡಾ ಏತಕ್ಕೆ ಖರ್ಚು ಆಗುತ್ತಿಲ್ಲ ಎಂಬುದರ ಬಗ್ಗೆ ತನಿಖೆ ಮಾಡಬೇಕು. ಎಲ್ಲಾ ಸಮಸ್ತ ಪುರಸಭೆ, ನಗರಸಭೆ. ಕಾರ್ಪೊರೇಷನ್‌ಗಳಲ್ಲಿ ೧೮ ಪರ್ಸೆಂಟ್ ಹಣ ನಿಗದಿ ಮಾಡಿದ್ದರೂ, ಅದು ಏತಕ್ಕೆ ಖರ್ಚಾಗುತ್ತಿಲ್ಲ ಎಂಬುದನ್ನು ತನಿಖೆ ಮಾಡಿ ಅದರ ವರದಿಯನ್ನು ಸದನದ ಮುಂದೆ ಇಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ಮಹತ್ತರವಾದ ಆಸಕ್ತಿಯಿಂದ ಕೆಲಸ ಮಾಡಬೇಕೆನ್ನತಕ್ಕಂಥ ಅಭಿಪ್ರಾಯವನ್ನು ಹೊಂದಿರುವ ಮಾನ್ಯ ನರಸಿಂಹಮೂರ್ತಿಯವರು ಇದ್ದಾರೆ. ಅವರು ಕೇವಲ ಮೂರು ತಿಂಗಳ ಹಿಂದೆ ಈ ಡಿಪಾರ್ಟ್‌ಮೆಂಟ್‌ನ್ನು ವಹಿಸಿಕೊಂಡಿದ್ದಾರೆ. ಎಲ್ಲೆಲ್ಲಿ ಇದರ ನ್ಯೂನತೆಗಳು ಇವೆ, ಎಲ್ಲೆಲ್ಲಿ ಕೆಲಸಕಾರ್ಯಗಳು ಆಗುತ್ತಿಲ್ಲ, ಅಲ್ಲೆಲ್ಲಾ ಪರಿಣಾಮಕಾರಿಯಾಗಿ ಕೆಲಸ ಕಾರ್ಯಗಳು ಆಗಬೇಕಾದರೆ ಯಾವರೀತಿಯಾಗಿ ವ್ಯವಸ್ಥೆ ಮಾಡಿ, ಗಮನಹರಿಸಿ, ಅಧಿಕಾರಿಗಳೊಂದಿಗೆ ಸಮಾಲೋಚನೆ ಮಾಡಿ, ಯಶಸ್ವಿಯಾಗಿ ಪಟ್ಟಣ ಪ್ರದೇಶದಲ್ಲಿರುವ ಬಡ ಜನರ ಬಗ್ಗೆ ಕಳಕಳಿಯಿಂದ ಕೆಲಸ ಮಾಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಸರಕಾರ ಬಡ ಜನರ ಸರಕಾರ ಇದೆ. ಪಟ್ಟಣ ಪ್ರದೇಶದಲ್ಲಿರತಕ್ಕಂಥ ಬಡ ಜನರು ಏನಿದ್ದಾರೆ ಯಾರು ಈ ಸರಕಾರದ ಬಗ್ಗೆ ಹೆಚ್ಚಿನ ಆಸೆ ಆಕಾಂಕ್ಷೆಗಳನ್ನು ಇಟ್ಟುಕೊಂಡಿದ್ದಾರೆ. ಯಾರು ಶೋಷಣೆಗೆ ಸಿಕ್ಕಿದ್ದಾರೆ ಅವರ ಬಗ್ಗೆ ಮಾನ್ಯ ಮಂತ್ರಿಗಳು ಕೆಲಸ ಮಾಡುತ್ತಾರೆ ಎಂದು ಹೆಚ್ಚಿನ ರೀತಿಯಲ್ಲಿ ವಿಶ್ವಾಸ ಇಟ್ಟು, ನನಗೆ ಮಾತನಾಡಲು ಸಮಯ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಹೆಚ್. ಕೌಜಲಗಿ (ಬೈಲಹೊಂಗಲ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ ಇವತ್ತಿನ ದಿವಸ ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಒಂದು ಬೇಡಿಕೆಗಳನ್ನು

ನಮ್ಮ ಮುಂದೆ ಮಂಡಿಸಿದ್ದಾರೆ. ಈ ಒಂದು ಬೇಡಿಕೆಗಳ ಮೇಲೆ ಈಗಾಗಲೇ ಹಿರಿಯ ಸದಸ್ಯರಾದ ಶ್ರೀ ಆರ್. ವಿ. ದೇಶಪಾಂಡೆಯವರು ಮತ್ತು ಶ್ರೀ ವಾಟಾಳ್‌ನಾಗರಾಜ್‌ರವರು ಹಾಗೂ ಶ್ರೀ ಧರ್ಮಸಿಂಗ್‌ರವರು ಮಾತನಾಡಿದ್ದಾರೆ, ನಾನು ಅವರು ಮಾತನಾಡಿದಂತಹ ವಿಷಯಗಳನ್ನು ಬಿಟ್ಟು ಕೇವಲ ಎರಡು ಮೂರು ವಿಷಯಗಳ ಬಗ್ಗೆ ಮಾತ್ರ ಮಾತನಾಡುವುದಕ್ಕೆ ನಾನು ಬಯಸುತ್ತೇನೆ. ನಿಜವಾಗಿಯೂ ಇವತ್ತಿನ ದಿವಸ ಈ ಮುನಿಸಿಪಾಲಿಟಿಗಳು ಮತ್ತು ಕಾರ್ಪೊರೇಷನ್‌ಗಳ ಒಂದು ಮುಖ್ಯವಾದ ಕರ್ತವ್ಯ ಎಂದರೆ ಕುಡಿಯುವ ನೀರಿನ ಯೋಜನೆ, ಒಳಚರಂಡಿ ವ್ಯವಸ್ಥೆ ರಸ್ತೆಗಳು ಶಿಕ್ಷಣ ಹಾಗೂ ಇನ್ನಿತರ ಡೆವಲಪ್‌ಮೆಂಟ್ ಕೆಲಸಗಳನ್ನು ಸರಿಯಾಗಿ ನಿರ್ವಹಣೆ ಮಾಡುವುದು. ಇವತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿ ಕುಡಿಯುವ ನೀರಿನ ಸಲುವಾಗಿ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡ್ ಎಂದು ಇದೆ. ಅದು ಈ ಕುಡಿಯುವ ನೀರಿನ ಸಮಸ್ಯೆಯನ್ನು ಹೋಗಲಾಡಿಸುವ ಕೆಲಸವನ್ನು ನೋಡಬೇಕಾಗುತ್ತದೆ. ಇವತ್ತಿನದಿವಸ ನಾನು ಒಂದು ವಿಷಯವನ್ನು ಬಹಳ ವಿಷಾದದಿಂದ ಹೇಳುವುದಾದರೆ, ಅಲ್ಲಿ ಇದುವರೆವಿಗೂ ಎಂ.ಡಿ. ಮತ್ತು ಛೇರ್ಮನ್ ಒಬ್ಬರೇ ಇದ್ದಾರೆ. ಈ ವಿಷಯ ಮಾನ್ಯ ಮಂತ್ರಿಗಳಿಗೂ ಗೊತ್ತಿರಬಹುದು. ಕಳೆದ ೪-೫ ತಿಂಗಳುಗಳಿಂದ ಅಲ್ಲಿಗೆ ಒಬ್ಬ ಎಂ.ಡಿ.ಯನ್ನು ಹಾಕಲಿಕ್ಕೆ ಸರ್ಕಾರದ ಕೈಯಲ್ಲಿ ಆಗಲಿಲ್ಲ. ಮತ್ತೊಂದು ವಿಷಾದದ ಸಂಗತಿ ಎಂದರೆ ಅಲ್ಲಿ ಖಾಯಂ ಆದ ಚೀಫ್ ಇಂಜಿನಿಯರ್ ಮೊದಲಿನಿಂದಲೂ ಇಲ್ಲ. ಮತ್ತು ಕಳೆದ ೬ ತಿಂಗಳುಗಳಿಂದ ಧಾರವಾಡ, ಗುಲ್ಬರ್ಗ ಡಿವಿಜನ್‌ಗಳಲ್ಲಿ ಸೂಪರಿನ್‌ಟೆಂಡಿಂಗ್ ಇಂಜಿನಿಯರ್ಸ್ ಇಲ್ಲ, ಇದರಿಂದಾಗಿ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡ್‌ನ ಎಲ್ಲಾ ಕೆಲಸ ಕಾರ್ಯಗಳು ಹೆಚ್ಚಿನ ರೀತಿಯಲ್ಲಿ ಸ್ಥಗಿತಗೊಂಡಿದೆ. ಇವತ್ತಿನ ದಿವಸ ಅಲ್ಲಿ ಎಸ್.ಇ. ಏನಿದ್ದಾರೆ ಅವರೇ ಚೀಫ್ ಇಂಜಿನೀಯರ್ ಇನ್ ಚಾರ್ಜ್. ಯಾವುದೇ ಒಂದು ನಿಲುವು ತೆಗೆದುಕೊಳ್ಳುವುದಕ್ಕೆ ಅವರಿಗೆ ಆಗುವುದಿಲ್ಲ. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳಲ್ಲಿ ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ ನಿಮ್ಮ ಇಲಾಖೆಯಲ್ಲಿ ಖಾಲಿ ಇರತಕ್ಕಂಥ ಎಲ್ಲಾ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಿದರೆ ಈಗಾಗಲೇ ಸರ್ಕಾರದವರು ಆಯವ್ಯಯ ಪಟ್ಟಿಯಲ್ಲಿ ಸೇರಿಸಿದ ಕೆಲಸಗಳನ್ನು ಮುಗಿಸಬಹುದು. ಇನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಧರ್ಮಸಿಂಗ್‌ರವರು ಹೇಳಿದ ಹಾಗೆ ೬೨ ಕೆಲಸಗಳು ಚಾಲ್ತಿಯಲ್ಲಿವೆ. ಜೊತೆಗೆ ೨೪ ಹೊಸ ಕೆಲಸಗಳನ್ನು ಈ ವರ್ಷ ತೆಗೆದುಕೊಳ್ಳಲಾಗಿದೆ. ಈ ಹೊಸ ೨೪ ಕೆಲಸಗಳನ್ನು ತೆಗೆದುಕೊಂಡರೆ ೫೦ ಪರ್ಸೆಂಟ್ ಹಣ ಎಲ್.ಐ.ಸಿ.ಯವರು

ಕೊಡುತ್ತಾರೆ. ಇದರಲ್ಲಿ ಇನ್ನುಳಿದ ಒಂದನೇ ನಾಲ್ಕು ಭಾಗದ ಹಣ ಮುನಿಸಿಪಾಲಿಟಿಯವರು ಇನ್ನು ಉಳಿದ ಒಂದನೇ ನಾಲ್ಕು ಭಾಗದ ಹಣ ಸರ್ಕಾರದವರು ಗ್ರ್ಯಾಂಟ್ ರೂಪದಲ್ಲಿ ಕೊಡುತ್ತಾರೆ. ಈ ಬಗ್ಗೆ ನಾನು ಒಂದು ಮಾತು ಹೇಳುವುದೇನೆಂದರೆ ಮುನಿಸಿಪಾಲಿಟಿಗಳು ಒಂದನೇ ನಾಲ್ಕು ಭಾಗದ ಹಣ ತುಂಬತಕ್ಕಂಥ ಪರಿಸ್ಥಿತಿಯಲ್ಲಿ ಇಲ್ಲ ಎಂದು ನಾನು ಹೇಳುತ್ತೇನೆ. ಬೆಳಗಾಂ ಹುಬ್ಬಳ್ಳಿ ಮತ್ತು ಧಾರವಾಡ ಹಾಗೂ ಬೆಂಗಳೂರಿನಂತಹ ೩-೪ ಕಾರ್ಪೊರೇಷನ್‌ಗಳನ್ನು ಬಿಟ್ಟರೆ ಉಳಿದ ಮುನಿಸಿಪಾಲಿಟಿಗಳು ಅವರ ಶೇರು ಹಣ ಕೊಡಲಿಕ್ಕೆ ಆಗುವುದಿಲ್ಲ. ಆದ್ದರಿಂದ ಸರ್ಕಾರದವರು ಈ ಹಣವನ್ನು ಸಹ ಕೊಟ್ಟು ಆದಷ್ಟು ಬೇಗ ಕೆಲಸ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇನ್ನು ೨೦ ಸಾವಿರ ಜನಸಂಖ್ಯೆಗಿಂತ ಕಡಿಮೆ ಇರುವ ಕಡೆ ಮಂಡಲ ಪಂಚಾಯತಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಸೇರಿಕೊಂಡು ಈ ಕುಡಿಯುವ ನೀರಿನ ಯೋಜನೆಯನ್ನು ಕಾರ್ಯಗತ ಮಾಡುತ್ತಾರೆ. ಆದರೆ ಅದೇ ರೀತಿ ಕೇಂದ್ರ ಸರ್ಕಾರದಿಂದ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡಿಗೆ ಹಣ ಬರುವುದಿಲ್ಲ. ಆ ಹಣ ಬರದಿದ್ದರೂ ಸಹ ತಾವು ಒಂದು ಸ್ಕೀಮ್ ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೇಂದ್ರ ಸರ್ಕಾರದ ವತಿಯಿಂದ ಹೆಚ್ಚಿನ ಹಣ ಪಡೆಯುವ ಪ್ರಯತ್ನ ಮಾಡಿ ಕುಡಿಯುವ ನೀರಿನ ಯೋಜನೆಗಳನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ತಮಗೆ ಗೊತ್ತಿರಬಹುದು, ಬೆಳಗಾಂನಲ್ಲಿ ಬೈಲಹೊಂಗಲದಲ್ಲಿ ಹುಬ್ಬಳ್ಳಿಯಲ್ಲಿ ನೀರಿಗೆ ತುಂಬಾ ಕಷ್ಟ ಇದೆ. ಅವರು ಹೇಳಿದ್ದಾರೆ ೨೬ನೇ ತಾರೀಖಿನಿಂದ ಬೆಳಗಾಂನಲ್ಲಿ ಕುಡಿಯುವ ನೀರನ್ನು ಬಂದ್ ಮಾಡುವುದಾಗಿ ತಿಳಿಸಿದ್ದಾರೆ. ವಾರದಲ್ಲಿ ಕೇವಲ ಎರಡು ದಿವಸ ಕುಡಿಯುವ ನೀರನ್ನು ಬಿಡಲಿಕ್ಕೆ ಆಗುತ್ತದೆಂದು ಕಾರ್ಪೊರೇಷನ್‌ನವರು ಹೇಳಿದ್ದಾರೆ. ಕಾರಣ ಇವತ್ತಿನ ದಿವಸ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡ್‌ನಲ್ಲಿ ಕೆಲಸ ಹೆಚ್ಚು ಚುರುಕಾಗಿ ಆಗುತ್ತಿಲ್ಲ. ಏಕೆಂದರೆ ಅಲ್ಲಿ ಮುಖ್ಯವಾದ ಪೋಸ್ಟ್‌ಗಳಿಗೆ ಅಧಿಕಾರಿಗಳನ್ನು ಪೋಸ್ಟ್ ಮಾಡಿಲ್ಲ. ಖಾಲಿ ಇರುವ ಎಲ್ಲಾ ಪೋಸ್ಟ್‌ಗಳನ್ನು ಸರ್ಕಾರ ಆದಷ್ಟು ಬೇಗ ತುಂಬಬೇಕು. ಹಾಗೂ ಈ ಬೋರ್ಡ್ [illegible] ಬೇಗ ಆಗುವುದಕ್ಕೆ ಪ್ರಯತ್ನ ಮಾಡಬೇಕು. ಇವತ್ತಿನ ದಿವಸ ತಾವು ಹಣಕಾಸಿನ ಮಂತ್ರಿಗಳ ಮೇಲೆ ಮತ್ತು ಮಾನ್ಯ ಮುಖ್ಯಮಂತ್ರಿಗಳ ಮೇಲೆ ಹೆಚ್ಚಿನ ಪ್ರಭಾವ ಬೀರಿ ಈ ಕೆಲಸಗಳಿಗೆ ಹೆಚ್ಚಿನ ಹಣ ಬಿಡುಗಡೆ ಮಾಡಲಿಕ್ಕೆ ಪ್ರಯತ್ನ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ, ಈ ಸದನದಲ್ಲಿ ಪದೇ ಪದೇ ನಾನು ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರೂ ಬೆಳಗಾವಿ ನಗರ ಸಭೆ ಕಛೇರಿ ಮೇಲಿರುವ ಫ್ಲಾಗ್ ಅನ್ನು ತೆಗೆಸುವ ಬಗ್ಗೆ ಹೇಳುತ್ತಿದ್ದೇವೆ. ಈ ಹಿಂದೆ ಮಾನ್ಯ ಮಂತ್ರಿಗಳಾದ ಮಾನ್ಯ ವೀರಪ್ಪ ಮೊಯಿಲಿಯವರು ಬೆಳಗಾವಿ ನಗರಸಭೆಯಲ್ಲಿ ಏರಿಸಿರುವ ಭಗವದ್ ಧ್ವಜವನ್ನು ತೆಗಸಲಿಕ್ಕೆ ಪ್ರಯತ್ನ ಮಾಡುತ್ತೇನೆಂದು ಹಿಂದಿನ ಸಭೆಯಲ್ಲಿ ಹೇಳಿದ್ದರು. ಹಾಗೂ ಈ ಬಗ್ಗೆ ಒಂದು ಕಾನೂನು ತರುವುದಾಗಿ ಸಹ ಹೇಳಿದ್ದರು. ಈಗ ಮತ್ತೆ ನಿಪ್ಪಾಣಿ ತಾಲ್ಲೂಕಿನ ಮುನಿಸಿಪಾಲಿಟಿಯವರು ಈಗ್ಗೆ ೧೫ ದಿವಸಗಳ ಹಿಂದೆ ಅವರೂ ತಾವೂ ಒಂದು ಭಗವದ್ ಧ್ವಜವನ್ನು ಏರಿಸುತ್ತೇವೆಂದು ಹೇಳಿ ಠರಾವ್ ಪಾಸ್ ಮಾಡಿದ್ದಾರೆ. ಅವರು ಏರಿಸುವುದಕ್ಕಿಂತ ಮುಂಚೆ ಇದರ ಬಗ್ಗೆ ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳಬೇಕು. ಯಾಪತ್ತು ಬೆಳಗಾವಿಯಲ್ಲಿ ಕನ್ನಡಿಗರು ಕನ್ನಡ ಧ್ವಜವನ್ನು ಏರಿಸುವುದಕ್ಕೆ ನಗರ ಸಭೆ ಕಛೇರಿ ಹತ್ತಿರ ಹೋದಾಗ ಅವರನ್ನು ಪೋಲೀಸರು ಹಿಡಿದು ಕೇಸ್ ಹಾಕಿದರು. ಆದರೆ, ಬೆಳಗಾಂ ಜಿಲ್ಲೆಯಲ್ಲಿ ಬೇರೆ ಯವರು ಫ್ಲಾಗ್ ಏರಿಸುವುದಕ್ಕೆ ಪೋಲೀಸಿನವರು ಸಹಾಯ ಮಾಡುತ್ತಿದ್ದಾರೆ. ಅಂದರೆ ಯಾರು ಬಲಾಢ್ಯರಾಗಿರುತ್ತಾರೋ ಅವರದ್ದು ನಡೆಯುತ್ತದೆ. ಯಾರಲ್ಲಿ ಬಲಾಢ್ಯತನ ಇಲ್ಲವೋ ಅವರದ್ದು ನಡೆಯುವುದಿಲ್ಲ ಎಂದ ಹಾಗಾಯಿತು. ಅಂದರೆ ಕನ್ನಡಿಗರು ಹೇಡಿಗಳಿದ್ದ ಕಾರಣ ಅವರನ್ನು ನೀವು ಜೈಲಿಗೆ ಹಾಕಿದ್ದೀರಿ. ಆದರೆ ಬೆಳಗಾಂನಲ್ಲಿರುವ ಮರಾಠಿಗರು ಶೂರರು ಎನ್ನುವ ಸಲುವಾಗಿ ಅವರ ಮೇಲೆ ಯಾವುದೇ ಕ್ರಮವನ್ನು ಸರ್ಕಾರ ತೆಗೆದುಕೊಂಡಿಲ್ಲವೆಂದು ಖೇದದಿಂದ ನಾನು ಹೇಳ ಬೇಕಾಗುತ್ತದೆ. ಇವತ್ತು ನಿಪ್ಪಾಣಿ ಮುನಿಸಿಪಾಲಿಟಿಯವರು ಕಳೆದ ೧೫ ದಿವಸಗಳ ಹಿಂದೆ ಮುನಿಸಿ ಪಾಲಿಟಿ ಆಫೀಸ್ ಮೇಲೆ ಒಂದು ಫ್ಲಾಗ್‌ನ್ನು ಏರಿಸಬೇಕೆಂದು ಏನು ಠರಾವು ಮಾಡಿದ್ದಾರೋ ಆ ಠರಾವಿನ ಪ್ರಕಾರ ಫ್ಲಾಗ್‌ನ್ನು ಏರಿಸದಂತೆ ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಒಳಚರಂಡಿ ವ್ಯವಸ್ಥೆ ಬಗ್ಗೆ ಹೇಳುವುದಾದರೆ, ಒಳಚರಂಡಿ ವ್ಯವಸ್ಥೆಯು ಪ್ರತಿಯೊಂದು ಟೌನ್ ಮುನಿಸಿಪಾಲಿಟಿ ಹಂತದಲ್ಲೂ ಅತಿ ಅವಶ್ಯಕ. ಈ ಒಳಚರಂಡಿ ವ್ಯವಸ್ಥೆ ಇಲ್ಲದಿದ್ದರೆ ಸ್ಯಾನಿಟೇಷನ್ ಉತ್ತಮ ರೀತಿಯಲ್ಲಿ ನಡೆಯುವುದಿಲ್ಲ. ಮಾನ್ಯ ಹಿರಿಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಬೆಂಗಳೂರಿನ ನಗರದಲ್ಲಿ ಒಳಚರಂಡಿ ವ್ಯವಸ್ಥೆ ಬಗ್ಗೆ ಬಹಳ ವಿವರವಾಗಿ ವಿವರಿಸಿದ್ದಾರೆ. ಆದ್ದರಿಂದ ಪ್ರತಿಯೊಂದು ಮುನಿಸಿಪಾಲಿಟಿಗಳಿಗೂ ಸರ್ಕಾರದವರು ಧನ ಸಹಾಯ ಕೊಟ್ಟು ಒಳಚರಂಡಿ ವ್ಯವಸ್ಥೆಯನ್ನು ಉತ್ತಮ ರೀತಿಯಲ್ಲಿ ಆಗುವಂತೆ ಮಾಡಬೇಕು. ತಮಗೆ ಒಂದು ವಿಷಯವನ್ನು ಹೇಳಬೇಕಾದರೆ ಸವದತ್ತಿ ತಾಲ್ಲೂಕಿನಲ್ಲಿ ಮೊದಲು ಒಳಚರಂಡಿ ವ್ಯವಸ್ಥೆಯನ್ನು ಮಾಡಲಾಗಿತ್ತು. ಆದರೆ ಅದು ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾಯಿತು. ಮಲಪ್ರಭಾ ಯೋಜನೆಗೆ ರೊಕ್ಕವನ್ನು ಕೊಡುವುದಕ್ಕೆ ಸರ್ಕಾರದವರು ತಯಾರಿಲ್ಲ ಆದರೆ ಒಳಚರಂಡಿ ಯೋಜನೆಗೆ ಖರ್ಚಾದ ಹಣವನ್ನು ಕೊಡಬೇಕೆಂದು ಅಲ್ಲಿನ ಮುನಿಸಿ ಪಾಲಿಟಿಯವರು ಜನರಲ್ಲಿ ಕೇಳುತ್ತಿದ್ದಾರೆ. ಈ ರೀತಿ ನೋಟೀಸ್ ಕೊಟ್ಟು ಹಣದ ಕೇಳುವುದು ಸರಿಯಲ್ಲ. ಆಮೇಲೆ ಯಾವುದೇ ಮುನಿಸಿಪಾಲಿಟಿಗೆ ಹೋಗಿ ನೋಡಿದರೂ ಹಣ ವ್ಯವಸ್ಥೆ ಚೆನ್ನಾಗಿರುವುದಿಲ್ಲ. ಹಣ ಇಲ್ಲದೆ ಇವತ್ತಿನ ದಿವಸ ಯಾವುದೇ ರಸ್ತೆ ಕೆಲಸ ಮಾಡಲಿಕ್ಕೆ ಆಗುತ್ತಿಲ್ಲ ವೆಂದು ನಾವು ಕೇಳುತ್ತಿದ್ದೇವೆ. ಮುನಿಸಿಪಾಲಿಟಿಗಳ ಆರ್ಥಿಕ ಸ್ಥಿತಿ ಉತ್ತಮ ರೀತಿಯಾಗಬೇಕಾದರೆ ಪುನಃ ಆಕ್ಟ್ರಾಯ್ ಪದ್ಧತಿಯನ್ನು ಪ್ರಾರಂಭಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಆಕ್ಟ್ರಾಯ್ ವ್ಯವಸ್ಥೆ ಇದ್ದಾಗ ಪ್ರತಿ ವರ್ಷವೂ ನಮ್ಮ ಬೈಲಹೊಂಗಲ ಮುನಿಸಿಪಾಲಿಟಿಗೆ ಆಗಿನ ಕಾಲಕ್ಕೆ ೪೦ ರಿಂದ ೫೦ ಲಕ್ಷ ರೂಪಾಯಿ ಆದಾಯ ಬರುತ್ತಿತ್ತು. ಆದ್ದರಿಂದ ಇನ್ನು ಮುಂದೆ ಆಕ್ಟ್ರಾಯ್ ಪದ್ಧತಿಯನ್ನು ಚಾಲು ಮಾಡಬೇಕೆಂದು ನಾನು ಈ ಮೂಲಕ ಕೇಳಿಕೊಳ್ಳುತ್ತೇನೆ. ಆಕ್ಟ್ರಾಯ್ ಚಾಲು ಮಾಡುವುದಕ್ಕೆ ಸರ್ಕಾರ ತಯಾರಿಲ್ಲದಿದ್ದರೆ ಮುನಿಸಿಪಾಲಿಟಿಗಳಿಗೆ ಇನ್ನೂ ಹೆಚ್ಚಿನ ಧನ ಸಹಾಯವನ್ನು ಮಾಡಬೇಕು. ಮುನಿಸಿಪಾಲಿಟಿಗಳಿಗೆ ಡೆವಲಪ್‌ಮೆಂಟ್ ಗ್ರ್ಯಾಂಟ್‌ನ್ನು ೩೧ ಮಾರ್ಚ್‌ಗೆ ರಿಲೀಸ್ ಮಾಡಿದರೆ ಅವರು ಯಾವಾಗ ಖರ್ಚು ಮಾಡಬೇಕೆಂದು ಗೊತ್ತಾಗುವುದಿಲ್ಲ. ಸರ್ಕಾರದವರು ಗ್ರ್ಯಾಂಟ್ ಕೊಡುವುದಿದ್ದರೆ ಅದನ್ನು ಜೂನ್ ಅಥವಾ ಜುಲೈ ತಿಂಗಳನಲ್ಲಿ ಕೊಡಬೇಕು. ಆ ರೀತಿ ಹಂತ ಹಂತವಾಗಿ ಹಣವನ್ನು ಬಿಡುಗಡೆ ಮಾಡುತ್ತಾ ಹೋದರೆ ಮುನಿಸಿಪಾಲಿಟಿಯವರು ಕೆಲಸಗಳನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಮೇಲೆ, ಕೊಳಚೆ ಪ್ರದೇಶಗಳ ಬಗ್ಗೆ ಹೇಳಬೇಕಾದರೆ ಕೊಳಚೆ ಪ್ರದೇಶಗಳು ಎಲ್ಲ ಕಡೆ ಇವೆ. ಆದರೆ ಎಲ್ಲರೂ ಬೆಂಗಳೂರು, ಹುಬ್ಬಳ್ಳಿ, ಬೆಳಗಾಂನಲ್ಲಿ ಮಾತ್ರ ಇವೆ ಎಂದು ತಿಳಿದುಕೊಂಡಿದ್ದಾರೆ, ಆದರೆ ಎಲ್ಲಾ ಮುನಿಸಿಪಾಲಿಟಿ ವ್ಯಾಪ್ತಿಯೊಳಗೂ ಕೊಳಚೆ ಪ್ರದೇಶಗಳು ಇದ್ದೇ ಇರುತ್ತವೆ, ಆದ್ದರಿಂದ ಎಲ್ಲ ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ ಸರ್ಕಾರದವರು ಹೆಚ್ಚಿನ ಧನ ಸಹಾಯವನ್ನು

ಮಾಡಬೇಕು, ಏಕೆಂದರೆ, ಮುನಿಸಿಪಾಲಿಟಿಗಳು ಇವತ್ತಿನ ಪರಿಸ್ಥಿತಿಯಲ್ಲಿ ಆರ್ಥಿಕವಾಗಿ ಉತ್ತಮ ರೀತಿಯಲ್ಲಿ ಇಲ್ಲ, ಕೊಳಚೆ ಪ್ರದೇಶಗಳಲ್ಲಿ ಲೆಟ್ರಿನ್ ಮತ್ತು ಒಳ ಚರಂಡಿ ವ್ಯವಸ್ಥೆ ಮಾಡುವುದಕ್ಕೆ ಮುನಿಸಿಪಾಲಿಗಳಲ್ಲಿ ಹಣ ಇಲ್ಲ. ನಾನು ಹೆಮ್ಮೆಯಿಂದ ಹೇಳುವುದೇನೆಂದರೆ, ಮಾನ್ಯ ಬಸವಲಿಂಗಪ್ಪನವರು ಹಿಂದೆ ಈ ಖಾತೆಯ ಮಂತ್ರಿಗಳಾಗಿದ್ದಾಗ ಮಲ ಹೊರುವಂಥ ಪದ್ಧತಿಯನ್ನು ಬಂದ್ ಮಾಡಿದರು. ಅದೇ ಪ್ರಕಾರವಾಗಿ ತಾವು ಈಗ ಪ್ರತಿಯೊಂದು ಕೊಳಚೆ ಪ್ರದೇಶಗಳಲ್ಲೂ ಬಡವರ ಸಲುವಾಗಿ ಲೆಟ್ರಿನ್‌ಗಳನ್ನು ಕಟ್ಟಿಸಿಕೊಡುವ ಯೋಜನೆಯನ್ನು ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಮಾಡಿಸುವುದಕ್ಕೆ ಯೋಜನೆಗಳನ್ನು ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

೩-೪೫ ಪಿ.ಎಂ.

ಇನ್ನು ಕರ್ನಾಟಕ ಹೌಸಿಂಗ್ ಬೋರ್ಡ್‌ನ ಕೆಲಸಗಳು ಕೇವಲ ಕೆಲವು ಪಟ್ಟಣಗಳಿಗೆ ಮಾತ್ರ ಸೀಮಿತವಾಗಿದೆ ಎಂದು ನನಗನಿಸುತ್ತದೆ. ಬರೀ ಕಾರ್ಪೊರೇಷನ್ ಏರಿಯಾಗಳಲ್ಲಿ ಮತ್ತು ಅಧಿಕಾರಿಗಳ ವಾಹನ ಯಾವ ಊರುಗಳಿಗೆ ಹೋಗುತ್ತದೆ ಅಲ್ಲಿ ಮಾತ್ರ ಈ ಕೆಲಸ ತೆಗೆದುಕೊಳ್ಳುತ್ತಾರೆ. ಇವತ್ತು ಬೈಲ ಹೊಂಗಲದಲ್ಲಿ ಹೌಸಿಂಗ್ ಬೋರ್ಡ್‌ನವರಿಗೆ ಮನೆಗಳನ್ನು ಕಟ್ಟಲು ಯೋಗ್ಯ ಜಾಗದಲ್ಲಿ ಸ್ಥಳ ಕೊಡುತ್ತೇವೆಂದು ಏಳೆಂಟು ವರ್ಷಗಳಿಂದ ಹೇಳಿದರೂ ಕೂಡ ಎಕರೆಗೆ ಐದಾರು ಸಾವಿರ ಕೊಡುತ್ತೇವೆ ಎನ್ನುತ್ತಾರೆ. ಎಲ್ಲಿದೇ ಹತ್ತು ಸಾವಿರ ಅದೇ ಬೆಂಗಳೂರಿನಲ್ಲಿ ಇವರು ಎಕರೆಗೆ ನಾಲ್ಕೈದು ಲಕ್ಷ ಕೊಡಲು ತಯಾರಾಗಿದ್ದಾರೆ. ಆದರೆ ನಮ್ಮಲ್ಲಿ ಏನು ರೇಟಿದೆಯೋ ಅದನ್ನು ಕೊಡಲಿಕ್ಕೆ ತಯಾರಾಗಿಲ್ಲ. ಆದ್ದರಿಂದ ಯೋಗ್ಯ ಬೆಲೆ ಕೊಟ್ಟು ಭೂಮಿ ಖರೀದಿಸಿ ಬೈಲಹೊಂಗಲದಲ್ಲಿ ಮನೆಗಳನ್ನು ಕಟ್ಟಬೇಕೆಂದು ಕೇಳಿಕೊಳ್ಳುತ್ತೇನೆ.

ಆಮೇಲೆ ಮುನಿಸಿಪಾಲಿಟಿಯವರು ಸೈಟ್ಸ್ ಕೊಡುವ ಸಲುವಾಗಿ ಹೊಲಗಳನ್ನು ಅಕ್ವಿಜಿಷನ್ ಮಾಡುತ್ತಾರೆ. ಆಗಿನ ಕಾಲಕ್ಕೆ ಅಸಿಸ್ಟೆಂಟ್ ಕಮೀಷನರ್ ಎಕರೆಗೆ ನಾಲ್ಕೈದು ಸಾವಿರವರೆಗೂ ಫಿಕ್ಸ್ ಮಾಡಿರುತ್ತಾರೆ. ಆದರೆ ಮುಂದೆ ಭೂಮಾಲೀಕರು ಅದು ಸಾಲದೆಂದು ಕೋರ್ಟಿಗೆ ಹೋದರೆ ಅಲ್ಲಿ ೫೦ ಇಲ್ಲವೇ ೬೦ ಸಾವಿರ ಒಂದು ಎಕರೆಗೆ ಎಂದು ತೀರ್ಪು ಬರುತ್ತದೆ. ಈ ಹಣ ಕೊಡುವುದಕ್ಕೆ ತಾವು ಕೊಡುವ ಡೆವಲಪ್‌ಮೆಂಟ್ ಗ್ರ್ಯಾಂಟ್ ಖರ್ಚಾಗಿ ಹೋಗುತ್ತದೆ. ಹೀಗಾಗಿ ಲ್ಯಾಂಡ್ ಅಕ್ವಿಜಿಷನನ್ನು ಸರ್ಕಾರವೇ ಮಾಡಿಕೊಡಬೇಕು: ಮುನಿಸಿಪಾಲಿಟಿಯವರು ಆ ಕೆಲಸ ಮಾಡುವುದು ಬೇಡವೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಹೇಳುತ್ತಿದ್ದೇನೆ.

ಆಮೇಲೆ ಮುನಿಸಿಪಾಲಿಟಿಯವರು ಹಣ ಕಟ್ಟದಿರುವ ಕಾರಣ ಕೆ. ಇ. ಬಿ. ನವರು ಸ್ಟ್ರೀಟ್ ಲೈಟ್‌ಗಳನ್ನು ಡಿಸ್‌ಕನೆಕ್ಟ್ ಮಾಡುತ್ತಾರೆ. ಏಕೆಂದರೆ ಸರ್ಕಾರದಿಂದ ಕೆಲವು ಸಲ ಮುನಿಸಿಪಾಲಿಟಿಯವರಿಗೆ ಗ್ರ್ಯಾಂಟ್ ಬರುವುದಕ್ಕೆ ತಡವಾಗುತ್ತದೆ. ಅದನ್ನು ಹೇಳಿದರೂ ಸಹ ಕೆ. ಇ. ಬಿ. ಯವರು ಕೇಳದೆ ಕಟ್ ಮಾಡುತ್ತಿದ್ದಾರೆ. ಆದ್ದರಿಂದ ಮುನಿಸಿಪಾಲಿಟಿಯವರು ಹಣ ಕಟ್ಟುವುದಕ್ಕೆ ತಡವಾದರೂ ಕೂಡ ಲೈಟನ್ನು ಕಟ್ ಮಾಡಬಾರದೆಂದು ಕೆ. ಇ. ಬಿ. ಯವರಿಗೆ ಸರ್ಕಾರ ಸೂಕ್ತ ಆದೇಶ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಎಲ್ಲ ಪವರ್ಸ್‌ನ್ನು ಇಲಾಖಾ ನಿರ್ದೇಶಕರಿಗೇ ನೀಡಲಾಗಿದೆ. ಇದರಿಂದ ಆಯಾ ಡಿವಿಜನಲ್ ಕಮೀಷನರ್ ಹಾಗೂ ಡಿ. ಸಿ. ಗಳಿಗೆ ಕೆಲಸದ ಒತ್ತಡ ಕಡಿಮೆಯಾಗಿದೆ. ಆದ್ದರಿಂದ ಕೆಲವು ಕೆಲಸಗಳನ್ನು ಅವರಿಗೂ ಹಚ್ಚಬೇಕು. ಉದಾಹರಣೆಗೆ ಲೀಸ್‌ಗೆ ಕೊಡುವ ಅವಧಿ ೫ ವರ್ಷದವರೆಗಿದ್ದರೆ ಮುನಿಸಿಪಾಲಿಟಿಯವರಿಗೆ ಹಾಗೂ ೧೦ ವರ್ಷವಾದರೆ ಡಿವಿಜನಲ್ ಕಮಿಷನರ್ ಅವರಿಗೆ ಅಧಿಕಾರವಿತ್ತು. ಆದರೆ ಈ ಅಧಿಕಾರವನ್ನು ನಿರ್ದೇಶಕರೇ ತೆಗೆದುಕೊಂಡಿದ್ದಾರೆ. ಮತ್ತೆ ಕೆಲವು ಕೇಸ್‌ಗಳು ಸರ್ಕಾರದ ಬಳಿ ಬಂದಿವೆ. ನಾವು ಒಂದು ವಾಹನ ಕೊಳ್ಳಲು ಮತ್ತು ಮಾರಾಟ ಮಾಡಲು ಈಗಿನ ನಿಯಮಾವಳಿಗಳ ಪ್ರಕಾರ ಬೆಂಗಳೂರಿಗೆ ಬರಬೇಕು ಹೀಗಾಗಿ ಅನಾನುಕೂಲವಾಗುತ್ತಿದೆ. ಆದ್ದರಿಂದ ಡಿಸಿ ಅವರಿಗೆ ಮತ್ತು ಡಿವಿಜನಲ್ ಕಮಿಷನರ್‌ರವರಿಗೂ ಡೆಲಿಗೇಷನ್ ಪವರ್ಸ್ ಅನ್ನು ಕೊಡಬೇಕೆಂದು ಹೇಳುತ್ತೇನೆ. ಜೊತೆಗೆ ಅವರುಗಳು ಮೇಲಿಂದ ಮೇಲೆ ಮುನಿಸಿಪಾಲಿಟಿಗಳನ್ನು ಇನ್‌ಸ್ಪೆಕ್ಷನ್ ಮಾಡಲು ತಿಳಿಸಬೇಕು. ನನಗೆ ತಿಳಿದ ಪ್ರಕಾರ ವಿಭಾಗಾಧಿಕಾರಿಯವರಿಗೆ ಇನ್‌ಸ್ಪೆಕ್ಷನ್ ಮಾಡುವ ಅಧಿಕಾರ ಇಲ್ಲ. ಇವರಿಗೂ ಸಹ ಈ ಅಧಿಕಾರ ನೀಡಬೇಕೆಂದು ಹೇಳುತ್ತೇನೆ. ಮತ್ತು ಚುನಾಯಿತ ಪ್ರತಿನಿಧಿಗಳಿಗೆ ಯಾವುದೇ ಅಧಿಕಾರ ಇರುವುದಿಲ್ಲ. ಅಲ್ಲಿನ ಪ್ರೆಸಿಡೆಂಟ್ ಅವರಿಗೆ ಮತ್ತು ಕಮಿಟಿಯವರಿಗೆ ಒಂದು ಸಾವಿರಕ್ಕಿಂತ ಹೆಚ್ಚು ಹಣ ಖರ್ಚು ಮಾಡಬೇಕಾದರೆ ತಮ್ಮ ಅನುಮತಿ ಕೇಳಬೇಕು. ಆದರೆ ಬೊಂಬಾಯಿ ಮುನಿಸಿಪಾಲಿಟಿ ಆಕ್ಟನಲ್ಲಿ President and Other Board Members are very powerful. ಅದೇ ಪ್ರಕಾರ ನಮ್ಮ ಮುನಿಸಿಪಾಲಿಟಿ ಆಕ್ಟನ್ನು ಸಹ ತಿದ್ದುಪಡಿ ಮಾಡಬೇಕೆಂದು ಸೂಚಿಸುತ್ತಾ ಇಷ್ಟು

ಮಾತನಾಡಲು ಅನುಮತಿ ಕೊಟ್ಟ ಮಾನ್ಯ ಅಧ್ಯಕ್ಷಿಣಿಯವರಿಗೆ ಅಭಿನಂದನೆ ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಕೆ. ಅನಂತಕೃಷ್ಣ (ಶಿವಾಜಿನಗರ).—ಮಾನ್ಯ ಅಧ್ಯಕ್ಷರೇ, ಇವತ್ತಿನ ವಿಷಯ ಬಹಳ ದೀರ್ಘವಾದ ಚರ್ಚೆಗೆ ಒಳಪಟ್ಟಿದೆ. ಇದಕ್ಕೆ ಕಾರಣವಾದರೂ ಇಷ್ಟೆ, ಕರ್ನಾಟಕ ರಾಜ್ಯದಲ್ಲಿ ಶೇಕಡ ೩೦ ಭಾಗ ಜನಸಂಖ್ಯೆ ಪಟ್ಟಣವಾಸಿಗಳಾಗಿ ನೇರವಾಗಿ ವಾಸ ಮಾಡುತ್ತಿದ್ದಾರೆ. ಮತ್ತೆ floating population ಎಂದು ಏನು ಹೇಳುತ್ತೇವೆ. ಅವರುಗಳು ರಾಜ್ಯದ ಜನಸಂಖ್ಯೆ ಶೇಕಡಾ ಹತ್ತರಷ್ಟು ದಿನವೂ ಪಟ್ಟಣಗಳಿಗೆ ಬಂದು ಹೋಗುತ್ತಿರುತ್ತಾರೆ. ಇಂಥ ಶೇಕಡ ೪೦ ಭಾಗ ಕರ್ನಾಟಕದ ಜನಸಂಖ್ಯೆಯ ವಿಷಯವಾಗಿ ನಾವು ತೀವ್ರವಾಗಿ ಯೋಚನೆಯನ್ನು ಮಾಡುತ್ತಿರಬೇಕಾದರೆ ನನಗಾದರೂ ಅನಿಸುತ್ತದೆ. ಈ ಒಂದು ವಿಷಯದ ಚರ್ಚೆಗೆ ನಾವು ಈ ಸದನದಲ್ಲಿ ಎಷ್ಟು ಸಮಯವನ್ನು ಬೇರೆ ಎಲ್ಲಾ ವಿಷಯಗಳಿಗೂ ಉಪಯೋಗಿಸುತ್ತೇವೆಯೋ ಅಷ್ಟೇ ಪ್ರೊರ್‍ಯಾಟಾ ಸಮಯವನ್ನು ಉಪಯೋಗಿಸಬೇಕಾದ್ದು ನಮ್ಮ ಆದ್ಯಕರ್ತವ್ಯ ಎಂದು ಹೇಳುತ್ತೇನೆ. ಅದರಲ್ಲೂ ಹೆಚ್ಚಾಗಿ ನಮ್ಮ ಒಂದು ಸರ್ಕಾರ ಯಾವುದೇ ಒಂದು ಸರ್ಕಾರಿ ವಿಭಾಗದ ಒಂದು ಸೇವೆ ಜನತೆಯ ಮೇಲೆ ಇರುತ್ತದೆ. ಅದು ಪರೋಕ್ಷವಾಗಿ ಬಹಳ ಮಟ್ಟಿಗೆ ಇರುತ್ತದೆ. ಆದರೆ ನೇರವಾದಂಥ ಸೇವೆ ನಗರ ಸಭೆಗಳಿಂದ ಮಾತ್ರ ಜನಸ್ತೋಮಕ್ಕೆ ದೊರೆಕುತ್ತದೆ, ಜನತೆಗೆ ಅರ್ಥವತ್ತಾದ ಸೇವೆ ಈ ನಗರಸಭೆಗಳಿಂದ ಆಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಗರಸಭೆ, ನಗರಾಡಳಿತ ಮಂಡಲಿ ಇಂಥವುಗಳಿಂದ ಆಗುತ್ತದೆ ಎಂದು ನಾವು ಹೇಳಬೇಕಾಗುತ್ತದೆ. ಈ ಒಂದು ಡಿಪಾರ್ಟ್‌ಮೆಂಟ್ ಬಗ್ಗೆ ಯೋಚನೆ ಮಾಡಬೇಕಾಗಿದ್ದರೆ ನಾವು ಈ ಒಂದು ಜನತಗೆ ನಾವು ನೇರವಾಗಿ ಸೇವೆಯನ್ನು ಮಾಡಬೇಕಾಗಿತ್ತು. ಅವರಿಗೆ ಒಂದು ಮಟ್ಟದಲ್ಲಿ ತೃಪ್ತಿಯನ್ನು ಒದಗಿಸಿಕೊಡಬೇಕಾಗಿದ್ದರೆ ನಾವು ಈಗ ೩-೪ರ ಡಿಪಾರ್ಟ್‌ಮೆಂಟ್‌ಗಳು ಈ ಒಂದು ಹೆಚ್.ಯು.ಡಿ.ಗೆ ಸಂಬಂಧಪಟ್ಟ ಹಾಗೆ ಇವೆ ಎಂದು ಹೇಳುತ್ತೇವೆ ಈ ಒಂದೊಂದು ಡಿಪಾರ್ಟ್‌ಮೆಂಟಿನ ಮಧ್ಯೆ ಒಂದರ ಜೊತೆಯಲ್ಲಿ ಮತ್ತೊಂದಕ್ಕೆ ಎಷ್ಟರಮಟ್ಟಿಗೆ ಒಂದು ಹೊಂದಾಣಿಕೆ ಇದೆ, ಎಷ್ಟರಮಟ್ಟಿಗೆ ಒಂದು ಡಿಪಾರ್ಟ್‌ಮೆಂಟ್ ಮತ್ತೊಂದು ಡಿಪಾರ್ಟ್‌ಮೆಂಟ್‌ನ ಜೊತೆಯಲ್ಲಿ ಸೇರಿಸಿಕೊಂಡು ತಮ್ಮ ಜವಾಬ್ದಾರಿಯನ್ನು ಅರಿತು ಜನಸ್ತೋಮಕ್ಕೆ ನೇರವಾಗಿ ಸೇವೆಯನ್ನು ಅತಿ ಶೀಘ್ರವಾಗಿ ಎಲ್ಲರ ಮನಸ್ಸಿಗೆ ಒಪ್ಪುವಂಥ ರೀತಿಯಲ್ಲಿ ಮಾಡುತ್ತಿವೆ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ ನನ್ನ ಅನುಭವದಲ್ಲಿ ಯಾವುದೇ ಒಂದು ನಗರಪಾಲಿಕೆಯಾಗಿರಲಿ ಇಲ್ಲವೇ ವಾಟರ್ ಸಪ್ಲೈ ಸಿವರೇಜ್ ಬೋರ್ಡ್ ಆಗಿರಲಿ, ಸ್ಲಮ್ ಬೋರ್ಡ್ ಆಗಿರಲಿ ಬಿ.ಡಿ.ಎ. ಆಗಿರಲಿ, ಎಲೆಕ್ಟ್ರಿಸಿಟಿ ಬೋರ್ಡ್ ಆಗಿರಲಿ, ಹೀಗೆ ಯಾವುದೇ ಒಂದು ಡಿಪಾರ್ಟ್‌ಮೆಂಟ್ ಈ ಒಂದು ನಗರದ ನಾಗರೀಕರಿಗೆ ಪೌರಸೌಲಭ್ಯಗಳನ್ನು ಒದಗಿಸಿಕೊಡಬೇಕಾಗಿದ್ದರೆ ಅವರನ್ನು ಹೋಗಿ ಕೇಳಿದರೆ. ಒಂದು ನೇರವಾದ ಒಂದು ಉಪಯುಕ್ತವಾದ ಒಂದು ತೀವ್ರತರವಾದ ಒಂದು ಹೊಂದಾಣಿಕೆ ಒಬ್ಬರ ಜೊತೆಯಲ್ಲಿ ಒಬ್ಬರಿಗೆ ಇಲ್ಲ ಎಂಬುವನ್ನು ನಾವು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಎಲ್ಲಿಯವರೆಗೆ ಈ ಒಂದು ತೀವ್ರವಾದ ನೇರವಾದ ಒಂದು ಹೊಂದಾಣಿಕೆ ಒಂದು ಡಿಪಾರ್ಟ್‌ಮೆಂಟ್‌ಗೂ ಮತ್ತೊಂದು ಡಿಪಾರ್ಟ್‌ಮೆಂಟ್‌ಗೂ ಇರುವುದಿಲ್ಲ ಮತ್ತು ಒಂದರ ಕಾನೂನು ಮತ್ತೊಂದರ ಕಾನೂನಿನ ಜೊತೆಗೆ controversy ಇರುವುದಿಲ್ಲ, ಅಲ್ಲಿಯವರೆಗೆ ನಾವು ಯಾವ ಒಂದು ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಉದಾಹರಣೆಗೆ ಬೆಂಗಳೂರು ನಗರಸಭೆ ಒಂದು ಮಹತ್ತರವಾದ ಮಹಾ ನಗರಪಾಲಿಕೆಯಾಗಿದೆ. ಯಾರೇ ಭಾಷಣ ಮಾಡಿದರೂ ಕೂಡಾ ಇಡೀ ರಾಜ್ಯದ ಮಟ್ಟದ ಒಂದು ವಿಷಯಗಳನ್ನು ಮಾತನಾಡುವಾಗ ಬೆಂಗಳೂರು ನಗರಸಭೆ ವಿಷಯವಾಗಿ ಮಹಾ ನಗರಪಾಲಿಕೆ ವಿಷಯವನ್ನು ಸಹ ಮಾತನಾಡುತ್ತಾರೆ. ಅಂದರೆ ಬೆಂಗಳೂರು ನಗರ ಎಷ್ಟು ಮಹತ್ತರವಾದ ಸ್ಥಾನವನ್ನು ಈ ರಾಜ್ಯ ಮಟ್ಟದಲ್ಲಿ ಪಡೆದಿದೆ ಮತ್ತು ರಾಷ್ಟ್ರಮಟ್ಟದಲ್ಲಿ ಇದಕ್ಕೆ ಎಷ್ಟು ಆಕರ್ಷಣೀಯವಾದ ಒಂದು ಸ್ಥಾನಮಾನ ಇದೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಈ ಒಂದು ಬೆಂಗಳೂರು ನಗರದಲ್ಲಿ ಸರಿಯಾದ ರೀತಿಯಲ್ಲಿ ಪೌರಸೌಲಭ್ಯಗಳನ್ನು ಜನತೆಗೆ ಅವರ ಮನಸ್ಸನ್ನು ಒಲಿಸಿಕೊಳ್ಳುವಂಥ ರೀತಿಯಲ್ಲಿ ಸೇವೆಯನ್ನು ಮಾಡಬೇಕಾಗಿದ್ದರೆ ಅದು ಯಾರ್‍ಯಾರು ಯಾವ ರೀತಿ ಒಂದೊಂದು ವಿಭಾಗದಲ್ಲಿ ಅಧಿಕಾರ ಸ್ಥಾನವನ್ನು ವಹಿಸಿಕೊಂಡಿರುತ್ತಾರೋ ಅವರು ಶೀಘ್ರತೆಯಿಂದ ಮನಸಾರೆ ಕೆಲಸವನ್ನು ಮಾಡಿದರೆ ಮಾತ್ರ ಆಗುತ್ತದೆ. ಇಲ್ಲದಿದ್ದರೆ ಕೇವಲ ಯಾವುದೋ ಒಂದು ಜಾಗದಲ್ಲಿ ಒಂದು ಸೇವೆಯನ್ನು ಮಾಡಬೇಕಾಗುತ್ತದೆ. ಸರ್ಕಾರಿ ನೌಕರರಾಗಿದ್ದೇವೆ, ಒಂದು ಸಂಬಳವನ್ನು ತೆಗೆದುಕೊಳ್ಳುತ್ತೇವೆ, ಯಾರನ್ನಾದರೂ ಒಲಿಸಿಕೊಳ್ಳೋಣ, ಯಾರನ್ನಾದರೂ ಒಪ್ಪಿಸೋಣ ಎನ್ನುವ ರೀತಿಯಲ್ಲಿ ಕೆಲಸವನ್ನು ಮಾಡಿದರೆ ನಾವು ನಾಗರೀಕರಿಗೆ ಪೌರ ಸೌಲಭ್ಯವನ್ನು ಒದಗಿಸುವುದಕ್ಕೆ ಆಗುವುದಿಲ್ಲ. ಬೆಂಗಳೂರು ನಗರ ಏನು ರಾಷ್ಟ್ರಮಟ್ಟ ಮತ್ತು ಅಂತರರಾಷ್ಟ್ರೀಯ ಮಟ್ಟದ ಒಂದು

ಖ್ಯಾತಿಯನ್ನು ಪಡೆದಿದೆ. ಅದು ಬಹಳ ಮಟ್ಟಿಗೆ ಕುಗ್ಗಿ ಹೋಗುತ್ತಿದೆ ಎನ್ನುವ ಮಾತನ್ನು ಹೇಳ ಬೇಕಾಗುತ್ತದೆ. ಶ್ರೀಮಾನ್ ಧರ್ಮಸಿಂಗ್‌ರವರು ಮಾತನಾಡುತ್ತಾ ಕರ್ನಾಟಕ ರಾಜ್ಯದ ನಾಲ್ಕು ಕೋಟಿ ಜನಸಂಖ್ಯೆಯಲ್ಲಿ ಬೆಂಗಳೂರು ನಗರದ ಒಂದು ಜನಸಂಖ್ಯೆ ೪೦ ಲಕ್ಷಕ್ಕೂ ಮೀರಿದೆಯೆಂದು ಹೇಳಿದರು. ಇದು ಮತ್ತಷ್ಟು ಏರುತ್ತಿದೆ ಎಂದು ಇವರ ಹಿಂದೆ ಮಾತನಾಡಿದವರೂ ಸಹ ಹೇಳಿದ್ದಾರೆ. ಆದ್ದರಿಂದ ಶೇಕಡ ೧೦ ರಷ್ಟು ಭಾಗದ ಈ ಜನತೆಯ ಒಂದು ಒಲವು ನಮ್ಮ ಕಡೆ ಇರಬೇಕಾದರೆ ನಾವು ಏನು ಒಂದು ರಾಜ್ಯಮಟ್ಟದಲ್ಲಿ ಕೆಲಸವನ್ನು ಮಾಡಿದರೂ ಅವರ ಒಂದು ಮನಸ್ಸನ್ನು ಒಪ್ಪಿಸದೇ ಹೋದರೆ ರಾಜ್ಯಮಟ್ಟದಲ್ಲಿ ಪ್ರತಿಯೊಬ್ಬ ನಾಗರೀಕರ ಮನಸ್ಸನ್ನೂ ನಾವು ಒಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ,

because Bangalore is a great institutional factor in the State development–what is the nature of administration, what is the effiency of the administration; what is the commitment for administrotion... .. ಅನ್ನುವುದು ಬೆಂಗಳೂರು ನಗರದಿಂದ ಬಹಳ ಖ್ಯಾತಿಯನ್ನು ಪಡೆದಿದೆ. ಈ ಇಂದು ಸ್ಥಾನವನ್ನು ಪಡೆದಂತಹ ಜಾಗದಲ್ಲಿ ನಾವು ಪ್ರತಿಯೊಂದು ಡಿಪಾರ್ಟ್‌ಮೆಂಟ್ ಅನ್ನು ಸರಿಯಾದ ರೀತಿಯಲ್ಲಿ ಅರ್ಥ ಮಾಡಿಕೊಂಡು ಜವಾಬ್ದಾರಿಯುತವಾಗಿ ಅವರಿಂದ ಕೆಲಸ ಮಾಡಿಸಿ ಕೊಳ್ಳದೇ ಹೋದರೆ ನಾವು ಬೆಂಗಳೂರು ನಗರದಲ್ಲಿ. ರಾಜ್ಯ ಮಟ್ಟದಲ್ಲಿ ಸೇವೆ ಮಾಡುವುದರಲ್ಲಿ ವಿಫಲರಾಗುತ್ತೇವೆ ಎಂಬ ಮಾತನ್ನು ಹೇಳುತ್ತಿದ್ದೇನೆ. ಉದಾಹರಣೆಗೆ ಬೆಂಗಳೂರು ನಗರದಲ್ಲಿ ಬಿ.ಡಿ.ಎ ಇದೆ. ಬಿ.ಡಿ.ಎ. ವಿಷಯದಲ್ಲಿ ಈಗಾಗಲೇ ಇಬ್ಬರು ಮಾಜಿ ಮಂತ್ರಿಗಳು ಮಾತನಾಡಿದ್ದಾರೆ. ಹಾಗೆಯೇ ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ವಿಷಯದಲ್ಲಿ ಮಾತನಾಡಿದ್ದಾರೆ. ಅವರು ಮಾತನಾಡುವಾಗ ತಮ್ಮ ಕಾಲದಲ್ಲಿ ಎಷ್ಟರಮಟ್ಟಿಗೆ ಪ್ರಗತಿಯನ್ನು ಸಾಧಿಸಿದ್ದಾರೆ ಎಷ್ಟು ಮೂಲಭೂತವಾಗಿ ಬದಲಾವಣೆಗಳನ್ನು, ಆಡಳಿತ ಮಟ್ಟದಲ್ಲಿ ಜನತೆಗೆ ಸೌಲಭ್ಯಗಳನ್ನು ಕೊಡುವಂತಹ ಮಟ್ಟದಲ್ಲಿ, ಮಾಡಿದ್ದಾರೆ. ಇನ್ನು ಯಾವ ರೀತಿ ಮಾಡುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ಹೇಳಿದ್ದರೆ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೆ. ನನ್ನ ಅನುಭವದಲ್ಲಿ, ನಾನು ತಿಳಿದುಕೊಂಡಿದ್ದು ಏನೆಂದರೆ ಅಧಿಕಾರಿಗಳು ಯಾವುದೋ ಒಂದು ಪ್ಲಾನ್ ಅನ್ನು ಆಗಲಿ ಅಥವಾ ಸ್ಕೀಮ್ ಅನ್ನು ಆಗಲಿ ತೆಗೆದು ಕೊಂಡು ಬಂದು, ಅದಕ್ಕೆ ಯಾವುದೇ ಒಂದು ರೀತಿ ನೀತಿಗಳನ್ನು ಹಾಕಿದ್ದರೆ, ಅದರ ಮಟ್ಟಿಗೆ ಅವರು ಹೇಳಿದ ಹಾಗೆ ಮಾಡಿದ್ದಾರೆಂದು ನನಗನ್ನಿಸುತ್ತದೆ. ಆದರೆ ನಾವು ಜನತೆಯನ್ನು ಪ್ರತಿನಿಧಿಸ ತಕ್ಕವರಾಗಿ ಈ ಸದನದ ಸದಸ್ಯರಾಗಿರಬಹುದು, ಅಥವಾ ಬೇರೆ ಸಮಿತಿಯ ಸದಸ್ಯರು ಆಗಿರಬಹುದು ಇಲ್ಲವೇ ಯಾವುದೇ ಸಮಿತಿಯ, ಬೋರ್ಡ್‌ನ ಸದಸ್ಯರು ಇಲ್ಲವೇ ಮಂತ್ರಿಯಾಗಿರಲೂ ಬಹುದು. ನಾವು ಕ್ರಿಯೇಟೀವ್ ಆಗಿ ಈ ಜನತೆಗೆ ಮಾಡುವಂತಹ ಕೆಲಸ ಏನು, ಹಿಂದೆ ಯಾರು ಏನು ಮಾಡಿದ್ದಾರೆ ? ಆದ್ದರಿಂದ ಎಂತಹ ಉಪಯುಕ್ತವಾದ ಸವಲತ್ತುಗಳು ಜನತೆಗೆ ಸಿಕ್ಕಿದೆ, ಮುಂದೆ ಏನು ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ನಾವು ತೀವ್ರವಾಗಿ ಯೋಚನೆ ಮಾಡಬೇಕಾಗುತ್ತದೆ. ಈಗ ಶೇಕಡ ೯೦ ರಷ್ಟು ಕೂಡ ನಾವು ಯಾವುದೇ ಪ್ರಗತಿಯನ್ನು ಸಾಧಿಸಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ ಮಾನ್ಯ ದೇಶಪಾಂಡೆ ಅವರು ಮಾತನಾಡುವಾಗ ಒಂದು ಮಾತು ಹೇಳಿದರು. ಅಧಿಕಾರಿಗಳು ಕೊಡು ವಂತಹ ರಿಪೋರ್ಟ್‌ಅನ್ನು ಇಲ್ಲವೇ ಅಂಕಿ ಅಂಶಗಳನ್ನು ತೆಗೆದುಕೊಂಡು ತೀರ್ಮಾನ ಮಾಡಿದರೆ ನಮ್ಮ ಪ್ರಯತ್ನದಲ್ಲಿ ವಿಫಲರಾಗುತ್ತೇವೆ ಎನ್ನುವ ಅರ್ಥ ಬರುವ ರೀತಿಯಲ್ಲಿ ಹೇಳಿದರು. ಆ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಅಧಿಕಾರಿಗಳು ಮಾಡುವ ಕೆಲಸ ಎಷ್ಟು ? ಅವರ ಒಂದು ಸ್ಥಾನ ಮಾನ ಅವರ ಒಂದು ಕ್ಷೇತ್ರದಲ್ಲಿ ಕುಳಿತುಕೊಂಡು ಅವರ ಒತ್ತಡದಲ್ಲಿ ಏನು ಮಾಡಬೇಕೋ ಅಷ್ಟು ಮಾಡುತ್ತಾರೆ. ಅವರೇ ಕ್ರಿಯೇಟೀವ್ ಆಗಿ ಏನನ್ನೂ ಮಾಡುವುದಿಲ್ಲ. ನನ್ನ ಅನುಭವದಲ್ಲಿ ಬಹಳ ಕಡಿಮೆ ಅಧಿಕಾರಿಗಳನ್ನು ನಾನು ನೋಡಿದ್ದೇನೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಆದ್ದರಿಂದ ಈ ಆಡಳಿತಾಧಿಕಾರಿಗಳೇ ಆಗಿರಲಿ, ಅವರ ಸಹಪಾಠಿಗಳೇ ಆಗಿರಲಿ, ಅವರ ಜವಾಬ್ದಾರಿಗಿಂತ ಹೆಚ್ಚಿನ ಜವಾಬ್ದಾರಿ ನಮ್ಮ ಮಂತ್ರಿವರ್ಯರ ಮೇಲೆ ಹಾಗೂ ಸಂಬಂಧಪಟ್ಟ ಖಾತೆಯ ಮಂತ್ರಿ ವರ್ಯರ ಮೇಲೆ ಇರುತ್ತದೆ. ಅವರಿಗೆ ಬೇಕಾದ ಸಹಾಯ ಈ ಸದನದಿಂದ ಬರುತ್ತದೆ. ಈ ಸದನ ದಿಂದ ಬರುತ್ತದೆ ಎಂದರೆ ಅವರು ಒಂದೊಂದು ವಿಷಯದ ಬಗ್ಗೆಯೂ ತೀವ್ರವಾಗಿ ಚರ್ಚೆ ಮಾಡು ವಂತಹ ಒಂದು ಪರಿಸ್ಥಿತಿ ಅವರಿಗೆ ಬರುತ್ತದೆ. ಜೊತೆಗೆ ಇಂಥಾದ್ದರ ಮೇಲೆ ಈ ಸದನದಲ್ಲಿ ಸದಸ್ಯರುಗಳು ಕೊಡುವಂತಹ ಅಭಿಪ್ರಾಯಗಳ ಮೇಲೆ ಹೆಚ್ಚು ಗಮನ ಕೊಡಬೇಕು. ಆ ಅಭಿಪ್ರಾಯಗಳ ಬಗ್ಗೆ ತೀವ್ರವಾಗಿ ಯೋಚನೆ ಮಾಡಿ ಅದಕ್ಕೆ ಸರಿಯಾಗಿ ಮಂತ್ರಿಗಳು ಮತ್ತು ಅವರ ಕೈಕೆಳಗೆ ಕೆಲಸ ಮಾಡುವಂತಹ ಆಡಳಿತಾಧಿಕಾರಿಗಳು ತೀವ್ರವಾಗಿ ಯೋಚನೆ ಮಾಡಿದ್ದೇ ಆದರೆ ನಾವು

ನಾಗರೀಕರಿಗೆ ಹೆಚ್ಚಿನ ಸಹಾಯವನ್ನು ಸೇವೆಯನ್ನು ಶೀಘ್ರವಾಗಿ ಕೊಡುವುದಕ್ಕೆ ಸಾಧ್ಯ ಆಗುತ್ತದೆ. ಹಾಗೂ ತೀವ್ರವಾದ ಒಂದು ಪ್ರಗತಿಯನ್ನು ಶೀಘ್ರವಾಗಿ ಸಾಧಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಈಗ ಉದಾಹರಣೆಗೆ ಈಗಾಗಲೇ ಹೇಳಿದ ಹಾಗೆ ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ವಿಷಯ ಹೇಳಿದ್ದಾರೆ. ಈ ಸ್ಲಮ್ ಕ್ಲಿಯರೆನ್ಸ್ ಬೋರ್ಡ್‌ನವರು ಸ್ಲಮ್‌ಗಳನ್ನು ಕಿತ್ತು ಹಾಕುವಂತಹ ಅಂದರೆ ಬುಡದಿಂದ ತೆಗೆದು ಹಾಕುವಂತಹ ಪ್ರಯತ್ನವನ್ನು ಇದುವರೆಗೆ ಯಾರು ಮಾಡಿಲ್ಲ. ಸ್ಲಮ್ ಎರಾಡಿಕೇಷನ್ ಮಾಡಿಲ್ಲ. ಸ್ಲಮ್ ಕ್ಲಿಯರೆನ್ಸ್ ಮಾಡಿಲ್ಲ. ಆದರೆ ಸ್ಲಮ್ ಇಂಪ್ರೂವ್‌ಮೆಂಟ್ ಬಗ್ಗೆ ಹೇಳುತ್ತಿದ್ದಾರೆ. ಅಲ್ಲಿ ಸಾಧಾರಣವಾದ ಸೌಲಭ್ಯಗಳನ್ನು ಒದಗಿಸಿದ್ದಾರೆ. ಆ ಸೌಲಭ್ಯಗಳನ್ನು ಏತಕ್ಕೆ ಕೊಡುತ್ತಿದ್ದಾರೆಂದರೆ ಅವರಿಂದ ಒತ್ತಡ ಬರುತ್ತಿದೆ. ರಾಜಕಾರಣಿಗಳಿಂದ ಒತ್ತಡ ಬರುತ್ತಿದೆ. ಇಲ್ಲದೇ ಹೋದರೆ ಆ ಸ್ಲಮ್‌ನಲ್ಲಿರುವ ಜನರ ಕಡೆ ಯಾರ ಗಮನವು ಹೋಗುತ್ತಿರಲಿಲ್ಲ. ಸ್ಲಮ್ ಅನ್ನು ತೆಗೆಯುವುದು ಕಷ್ಟ ಇಲ್ಲ. You should have will to do it. The party in power or the Minister in power should have a plan to see that the slum is cleared. ಅವರು ಕುಳಿತುಕೊಂಡು ಸಂಬಂಧಪಟ್ಟ ಅಧಿಕಾರಿಗಳನ್ನು ಜವಾಬ್ದಾರಿ ಇರುವ ಅಧಿಕಾರಿಗಳನ್ನು ಹಾಕಿ. ಯಾರಿಗೆ ಕಮಿಟ್‌ಮೆಂಟ್ ಇದೆ ಅಂಥವರನ್ನು ಹಾಕಿ ನಾಲ್ಕು ಜನರನ್ನು ಅವರ ಕೈಕೆಳಗೆ ಕೊಟ್ಟು ಅಕೌಂಟಬಲ್ ಆಗಿ ಮಾಡಿ. ಅವರಿಂದ ಈ ಕೆಲಸವನ್ನು ಮಾಡಿಸಿದ್ದರೆ ಸ್ಲಮ್ ಕ್ಲಿಯರ್ ಆಗುವುದರಲ್ಲಿ ಯಾವುದೇ ಕಷ್ಟ ಆಗುವುದಿಲ್ಲವೆಂದು ನಾನಂತೂ ಭಾವಿಸಿದ್ದೇನೆ ಹಾಗೆಯೇ ಎನ್‌ವಿರೈನ್‌ಮೆಂಟ್ ಇಂಪ್ರೂವ್‌ಮೆಂಟ್ ಬಗ್ಗೆ ಯೋಚನೆ ಮಾಡುವುದಾದರೆ ಒಂದು ಸಲ ರಿಕರಿಂಗ್ ಎಕ್ಸ್‌ಪೆಂಡಿಚರ್ ಮಾಡುತ್ತೇವೆ. ನಂತರ ಅದನ್ನು ಮೇಂಟೇನ್ ಮಾಡುವ ವಿಷಯದಲ್ಲಿ ಅಂದರೆ ವಾಟರ್ ಸಪ್ಲೈ ಡಿಪಾರ್ಟ್‌ಮೆಂಟ್ ಇರಬಹುದು, ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್ ಇರಬಹುದು ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್ ಇರಬಹುದು, ಹೆಲ್ತ್ ಡಿಪಾರ್ಟ್‌ಮೆಂಟ್ ಇರಬಹುದು, ಅವರೆಲ್ಲರೂ ಅಷ್ಟಾಗಿ ಕೆಲಸ ಮಾಡುತ್ತಿಲ್ಲ ಎಂದು ತಮಗೆ ಗೊತ್ತಾಗಬೇಕಾದರೆ ಪ್ರತಿಯೊಂದು ಸ್ಲಮ್‌ನಲ್ಲಿ ಹೋಗಿ ಇನ್ಸ್‌ಪೆಕ್ಷನ್ ಮಾಡಿಕೊಂಡು ಬಂದರೆ ತಮಗೆ ಅರ್ಥ ಆಗುತ್ತದೆ. ಎಷ್ಟರಮಟ್ಟಿಗೆ ರೆಗ್ಯುಲರ್ ಮೇಂಟೇನೆನ್ಸ್ ಒಂದೊಂದು ಕಡೆ ಇದೆ ಎಂದು. ನಮ್ಮಲ್ಲಿ ಹಣ ಎಷ್ಟು ಇದ್ದರೂ ಕೂಡ ಖರ್ಚು ಯಾವ ರೀತಿ ಮಾಡಿದರೂ ಕೂಡ ರೆಗ್ಯುಲರ್ ಮೇಂಟೆನೆನ್ಸ್ ಆಗಿರಲೀ ಇಲ್ಲವೇ ಮೂಲಭೂತವಾಗಿ ಬುಡದಿಂದ ಬದಲಾವಣೆ ಮಾಡುವ ಪ್ರಯತ್ನ ಮಾಡದೇ ಹೋದರೆ ನಮ್ಮ ಕ್ಯಾಪಿಟಲ್ ಎಕ್ಸ್‌ಪೆಂಡಿಚರ್ ವೇಸ್ಟ್ ಆಗುತ್ತದೆ ಹಾಗೂ ರೆಕರಿಂಗ್ ಎಕ್ಸ್‌ಪೆಂಡಿಚರ್ ವೇಸ್ಟ್ ಆಗುತ್ತದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ.

ಆದ್ದರಿಂದ ಈ ಬಗ್ಗೆ ನನ್ನ ಭಾವನೆಯಲ್ಲಿ ಹೇಳುವುದಾದರೆ ನಮ್ಮದು ಹೆಚ್ಚು ಜವಾಬ್ದಾರಿ ಇದೆ. ಅದು ಸದನದ ಜವಾಬ್ದಾರಿಯಾಗಿರಬಹುದು. ಮಂತ್ರಿವರ್ಯರ ಜವಾಬ್ದಾರಿಯಾಗಿರಬಹುದು, ರಾಜ್ಯದ ಮಂತ್ರಿಮಂಡಲದ ಜವಾಬ್ದಾರಿಯಾಗಿರಬಹುದು. ಈ ಒಂದು ಹೆಚ್ಚು ಜವಾಬ್ದಾರಿ ಇದ್ದುದನ್ನು ಡೀಸೆಂಟ್ರಲೈಸ್ ಮಾಡುವ ರೀತಿಯಲ್ಲಿ ನಂಬರ್ ಆಫ್ ಸ್ಟ್ಯಾಟುಟರಿ ಬಾಡೀಸನ್ನು ಕ್ರಿಯೇಟ್ ಮಾಡಿ, ಎಸ್ಟಾಬ್ಲಿಷ್ ಮಾಡಿ ಅವರ ಕೈಗೆ ಜವಾಬ್ದಾರಿಯನ್ನು ಕೊಟ್ಟ ಮೇಲೆ ಅವರು ಯಾವ ರೀತಿ ಕೆಲಸ ಮಾಡುತ್ತಾ ಇದ್ದಾರೆ ಅಥವಾ ಮಾಡುತ್ತಾ ಇಲ್ಲ ಎಂದು ನಾವು ಹೆಚ್ಚಾಗಿ ಗಮನಿಸುತ್ತಿಲ್ಲ ಎಂದು ನಾನು ಭಾವಿಸಿದ್ದೇನೆ. ಏಕೆಂದರೆ ನೂರಾರು ಕೋಟಿ ರೂಪಾಯಿಗಳನ್ನು ಅವರ ಕೈಗೆ ಕೊಟ್ಟ ಮೇಲೆ ಅವರಲ್ಲಿ ಕೋಆರ್ಡಿನೇಷನ್ ಇದೆಯೇ, ಹಣ ಸರಿಯಾಗಿ ಖರ್ಚು ಆಗುತ್ತಾ ಇದೆಯೇ ಅಥವಾ ಇಲ್ಲವೇ, ಪ್ರಗತಿಪರವಾಗಿ ಸಾಧನೆಯಾಗಿದೆಯೇ ಅಥವಾ ಇಲ್ಲವೇ ಎನ್ನುವುದನ್ನು ನಾವು ಅಂದರೆ ಮೇಲಿನ ಸ್ಥಾನದಲ್ಲಿರುವವರು ಸೂಪರ್‌ವೈಸ್ ಮಾಡತಕ್ಕವರು ಹಾಗೂ ಜವಾಬ್ದಾರಿ ವಹಿಸಿಕೊಂಡಿರತಕ್ಕವರು ನೋಡಬೇಕಾಗಿದೆ. ಆದರೆ ಅದು ಆಗುತ್ತಾ ಇಲ್ಲ ಎಂದು ನನ್ನ ಭಾವನೆಯಲ್ಲಿದೆ. ಈ ಬಗ್ಗೆ ಒಂದೇ ಒಂದು ಸಣ್ಣ ಉದಾಹರಣೆ ಹೇಳುತ್ತೇನೆ. ಬಿ.ಡಿ.ಎ ನಲ್ಲಿ ಲೇಔಟ್‌ಗಳನ್ನು ಸ್ಯಾಂಕ್ಷನ್ ಮಾಡುತ್ತಾ ಇದ್ದಾರೆ, ಪ್ರೈವೇಟ್ ಲೇಔಟ್‌ಗಳನ್ನು ಮಂಜೂರು ಮಾಡುತ್ತಾ ಇದ್ದಾರೆ. ಪ್ರೈವೇಟ್ ಲೇಔಟ್‌ಗಳನ್ನು ಸ್ಯಾಂಕ್ಷನ್ ಮಾಡುವ ಉದ್ದೇಶವೇನೆಂದರೆ ಅದಕ್ಕೊಂದು ಕಾರಣ ಕೊಡುತ್ತಾರೆ. ವೈಯಕ್ತಿಕವಾಗಿ ನಾನು ಪ್ರೈವೇಟ್ ಲೇಔಟ್‌ಗಳನ್ನು ಮಾಡುವುದಕ್ಕೆ ಮೂಲಭೂತವಾಗಿ ವಿರೋಧವಾಗಿದ್ದೇನೆ. ಆದ್ದರಿಂದ ಪ್ರೈವೇಟ್ ಲೇಔಟ್‌ಗಳನ್ನು ಸ್ಯಾಂಕ್ಷನ್ ಮಾಡಬಾರದು ಪ್ರೈವೇಟ್ ಏಜೆನ್ಸಿಗೆ ಅವಕಾಶ ಕೊಡಬಾರದು, ಏಕೆಂದರೆ ಬಡ ಜನತೆಗೆ ಏನಾದರೂ ನಿವೇಶನ ದೊರಕಬೇಕಾಗಿದ್ದರೆ, ಬಡ ಜನತೆಗೆ ಪೌರಸೌಲಭ್ಯ ದೊರಕಬೇಕಾದರೆ, ಸಂಬಂಧಪಟ್ಟ ಆಡಳಿತ ವರ್ಗ ಏನು ಒಂದು ನಿಯಂತ್ರಣ ಇಟ್ಟುಕೊಂಡು ಕೆಲಸ ಮಾಡುತ್ತದೆ, ಅದರಿಂದ ಮಾತ್ರ ಸಾಧ್ಯ ಆದರೆ ಪ್ರೈವೇಟ್ ಏಜೆನ್ಸಿಯಿಂದ ಈ ಕೆಲಸ ಮಾಡಲಿಕ್ಕೆ

ಸಾಧ್ಯವಿಲ್ಲ ಎನ್ನುವುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ನಾನು ಈ ಮಾತನ್ನು ಇದಕ್ಕೆ ಮುಂಚಿತವಾಗಿ ಹೇಳಿದ್ದೇನೆ. ಗಿರಿನಗರ ಲೇಔಟ್ ಬೆಂಗಳೂರು ನಗರದಲ್ಲಿ ಬಹಳ ದೊಡ್ಡ ಲೇಔಟ್ ಅಲ್ಲಿ ೭೦೦ ಸಂಸಾರಗಳಿವೆ ಈ ೭೦೦ ಸಂಸಾರಗಳಿರುವಂಥ ಗಿರಿನಗರ ಲೇಔಟ್‌ನಲ್ಲಿ ಕೃಷ್ಣ ಭಟ್ ಎಂಬುವರು ೭ ೮ ಹೆಸರುಗಳಲ್ಲಿ ಈ ಲೇಔಟ್‌ಗಳನ್ನು ಸ್ಯಾಂಕ್ಷನ್ ಮಾಡಿಸಿದ್ದಾರೆ ೭-೮ ಕೋ ಆಪರೇಟೀವ್ ಸೊಸೈಟೀಸ್ ಹೆಸರಿನಲ್ಲಿ, ಅಸೋಸಿಯೇಷನ್‌ಗಳ ಹೆಸರಿನಲ್ಲಿ ಒಬ್ಬನೇ ಒಬ್ಬ ಡಿಕ್ಟೇಟರ್ ಇದ್ದಾನೆ. A kingdom in the hands of a King under a democratic Constitution and the democratic status ಎಂದು ಹೇಳಬೇಕಾಗಿದೆ. ಆತನ ದೌರ್ಜನ್ಯ ಎಷ್ಟರಮಟ್ಟಿಗೆ ನಡೆಯುತ್ತಿದೆ ಎಂದರೆ ಬಿಡಿಎನವರನ್ನು ಕೇಳಿದರೆ ಅವರ ಮೇಲೆ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ನಾವೇನಾದರು ಕೇಳಿದರೆ ಅವರು ಕೋರ್ಟ್‌ಗೆ ಹೋಗುತ್ತಾರೆ, ಕಛೇರಿಗೆ ಹೋಗುತ್ತಾರೆ, ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ಆದರೆ ಆ ಲೇಔಟ್ ಅನ್ನು ಸ್ಯಾಂಕ್ಷನ್ ಮಾಡಿದವರು ಬಿಡಿಎನವರು ಆದರೆ ಬಿಡಿಎ ನಿಯಂತ್ರಣ ಅವರ ಮೇಲೆ ಇಲ್ಲ ಆ ಲೇಔಟ್‌ನಲ್ಲಿ ನೀರು ಸರಬರಾಜು ಮಾಡಲು ವಾಟರ್ ಸಪ್ಲೈ ಬೋರ್ಡಿನವರು ಅವರಿಗೆ ಅಧಿಕಾರ ಕೊಟ್ಟಿದ್ದಾರೆ. ಇದು ಸರಿಯೇ ಎಂದು ವಾಟರ್ ಸಪ್ಲೈ ಬೋರ್ಡನ್ನು ಕೇಳಿದರೆ, ಅವರೇ ನಮ್ಮ ಮೇಲೆ ಕೇಸ್ ಹಾಕುತ್ತಾರೆ, ಮಾನನಷ್ಟ ಮೊಕದ್ದಮೆ ಹಾಕುತ್ತಾರೆ ನಮ್ಮ ನಿಯಂತ್ರಣ ಅವರ ಮೇಲೆ ಇಲ್ಲ ಎಂದು ಹೇಳುತ್ತಾರೆ. ನಗರಸಭೆಯವರನ್ನು ಕೇಳಿದರೆ ಅದು ನಮ್ಮ ಎಲ್ಲೆಯಲ್ಲಿ ಬರುವುದಿಲ್ಲವಾದ್ದರಿಂದ ನಾವು ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ.

ಉಪಾಧ್ಯಕ್ಷರು.—ಇನ್ನು ಐದು ನಿಮಿಷಯದಲ್ಲಿ ತಾವು ಮುಗಿಸಿ.

ಶ್ರೀ ಎ. ಕೆ. ಅನಂತಕೃಷ್ಣ.—ನಾನು ಇಲ್ಲಿಗೆ ನಿಲ್ಲಿಸಿಬಿಡುತ್ತೇನೆ.

ಉಪಾಧ್ಯಕ್ಷರು.—ಇಲ್ಲ. ತಾವು ಐದು ನಿಮಿಷದಲ್ಲಿ ಮುಗಿಸಿ.

ಶ್ರೀ ಎ. ಕೆ. ಅನಂತಕೃಷ್ಣ.—ನನಗೆ ನೀವು ಇಷ್ಟು ಕಟ್ ಮಾಡಿದರೆ ನಾನು ಮಾತನಾಡುವುದಕ್ಕಾಗುವುದಿಲ್ಲ, ಕ್ಷಮಿಸಬೇಕು.

ಉಪಾಧ್ಯಕ್ಷರು.—ಇನ್ನೂ ಬಹಳ ಜನ ಇದ್ದಾರೆ ಮಾತನಾಡುವುದಕ್ಕೆ. ಅದಕ್ಕೆ ಐದು ನಿಮಿಷದಲ್ಲಿ ಮುಗಿಸಿ.

ಶ್ರೀ ಎ. ಕೆ. ಅನಂತಕೃಷ್ಣ.—ಇದು ನನ್ನ ತಪ್ಪಲ್ಲ. ನಾನು ಬಹಳ ಮುಖ್ಯವಾದ ವಿಷಯಗಳ ಮೇಲೆ ಮಾತನಾಡುವುದು ಇದೆ. ಅನುಭವದ ವಿಷಯ ಇದೆ. ಇದು ಹಚ್‌ಯುಡಿ ಡಿಪಾರ್ಟ್‌ಮೆಂಟ್ ಇದೆ. ಜನರಿಗೆ ಒಳ್ಳೆಯದಾಗಬೇಕು ಅಂದರೆ ನನಗೆ ಮಾತಾಡುವುದಕ್ಕೆ ಹೆಚ್ಚು ಅವಕಾಶ ಕೊಡಬೇಕು. ಇಲ್ಲ ಸಮಯ ಮುಖ್ಯ ಅಂದರೆ ನಾನು ಕುಳಿತುಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಐದು ನಿಮಿಷ ತಾವು ಮಾತನಾಡಿ.

ಶ್ರೀ ಎ. ಕೆ. ಅನಂತಕೃಷ್ಣ.—ಕ್ಷಮಿಸಬೇಕು. ಅಷ್ಟರಲ್ಲಿ ಮುಗಿಸಲು ನನ್ನ ಕೈಯಲ್ಲಿ ಆಗುವುದಿಲ್ಲ.

ಉಪಾಧ್ಯಕ್ಷರು.—ಈಗ ಶ್ರೀಯುತ ರುಕ್ಮಯ್ಯ ಪೂಜಾರಿಯವರು

† ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ).—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಕರಾವಳಿ ಪ್ರದೇಶದಲ್ಲಿ ಮೀನುಗಾರಿಕೆ ಬಗ್ಗೆ ಅತ್ಯಂತ ಬಹಳ ಮಹತ್ವಪೂರ್ಣವಾದ ಮತ್ತು ಕರಾವಳಿ ಪ್ರದೇಶದ ಅಭಿವೃದ್ಧಿಯಲ್ಲಿ...

ಶ್ರೀ ಜಿ. ರಾಜೂಗೌಡ.—ಮಾನ್ಯ ಅನಂತಕೃಷ್ಣರವರು ಬಹಳ ಚೆನ್ನಾಗಿ ಮಾತನಾಡುತ್ತಾ ಇದ್ದಾರೆ, ಅವರಿಗೆ ಐದು ನಿಮಿಷ ಜಾಸ್ತಿ ಕೊಡಿ.

ಉಪಾಧ್ಯಕ್ಷರು.—ನಾನು ಈಗಾಗಲೇ ರುಕ್ಮಯ್ಯ ಪೂಜಾರಿಯವರನ್ನು ಕರೆದಿದ್ದೇನೆ, ಅವರು ಮಾತನಾಡುತ್ತಾ ಇದ್ದಾರೆ. ರುಕ್ಮಯ್ಯ ಪೂಜಾರಿಯವರೆ, ತಾವು ದಯವಿಟ್ಟು ಮುಂದುವರೆಸಿ ನಾನು ಎಲ್ಲ ಹತ್ತು ಜನ ಸದಸ್ಯರಿಗೂ ಮಾತನಾಡಲು ಅವಕಾಶ ಕೊಡಬೇಕಾಗಿದೆ. ಆದ್ದರಿಂದ ಎಲ್ಲರೂ ೧೫ ನಿಮಿಷಗಳಲ್ಲಿ ಮುಗಿಸಬೇಕು.

ಶ್ರೀ ಎ. ರುಕ್ಮಯ್ಯ ಪೂಜಾರಿ.—ಕರಾವಳಿ ಪ್ರದೇಶದಲ್ಲಿ ಮೀನುಗಾರಿಕೆಯು ಬಹಳ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಆದರೆ ಸರ್ಕಾರ ಈ ಮೀನುಗಾರಿಕೆ ವೃತ್ತಿ ಮಾಡುವವರಿಗೆ ಹಾಗೂ ಅವರ ಕುಟುಂಬದವರಿಗೆ ಎಲ್ಲಾ ರೀತಿಯ ಸವಲತ್ತುಗಳನ್ನು ಒದಗಿಸುವಂತಹ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಮಂಗಳೂರಿನಲ್ಲಿ ಅರಿವೆ ಬಲೆಯಲ್ಲಿ ಮೀನು ತುಂಬಿ ಹಲವಾರು ಮೀನುಗಾರರು

ಪ್ರಾಣಹಾನಿಯಾಗಿದೆ, ಹಾಗೂ ಸ್ವತ್ತು ನಷ್ಟವಾಗಿದೆ. ಈ ಮರಳನ್ನು ತೆಗೆಯುವಂತಹ ಕೆಲಸವನ್ನು ಇನ್ನೂ ಮಾಡಿಲ್ಲ. ಎರಡು ವರ್ಷಗಳ ಹಿಂದೆ ಸುಮಾರು ೧೦ ಲಕ್ಷ ರೂಪಾಯಿಯನ್ನು ಖರ್ಚು ಮಾಡಿ ಡ್ರೇಜರ್ ಅನ್ನು ತಂದು ಈ ಮರಳನ್ನು ಎತ್ತುವಂತಹ ಕೆಲಸವನ್ನು ಹಾಕಿಕೊಂಡರೂ ಸಹ ಸಂಪೂರ್ಣವಾದ ಪರಿಹಾರ ಇನ್ನೂ ಸಿಕ್ಕಿಲ್ಲ. ಆದ್ದರಿಂದ ರಾಜ್ಯ ಸರ್ಕಾರವೇ ಈ ಡ್ರೇಜರ್‌ನ್ನು ಸ್ವತ. ಖರೀದಿ ಮಾಡಿ ಕೂಡಲೇ ಈ ಹೂಳೆತ್ತುವ ಕೆಲಸವನ್ನು ಸರಿಯಾಗಿ ಮಾಡಬೇಕೆಂದು ಸರ್ಕಾರವನ್ನು ವಿನಂತಿಸಿಕೊಳ್ಳುತ್ತೇನೆ. ಇನ್ನು ಮಂಗಳೂರಿನಲ್ಲಿ ಒಂದು ಮೀನುಗಾರಿಕಾ ಕಾಲೇಜು ಇದೆ. ಆದರೆ ವ್ಯವಸಾಯ ಕಾಲೇಜಿನಲ್ಲಿ ಯಾವರೀತಿ ವ್ಯವಸಾಯ ಮಾಡತಕ್ಕ ಕುಟುಂಬದವರ ಮಕ್ಕಳಿಗೆ ರಿಜರ್‌ವೇಷನ್ ಕೊಡುತ್ತಾರೆ, ಆ ಪ್ರಕಾರವಾಗಿ ಈ ಫಿಷರೀಸ್ ಕಾಲೇಜಿನಲ್ಲಿ ಮೀನುಗಾರರ ಮಕ್ಕಳಿಗೆ ರಿಜರ್‌ವೇಷನ್ ಕೊಡುವ ಪದ್ಧತಿ ಇಲ್ಲ. ಆದ್ದರಿಂದ ಸರ್ಕಾರದವರು ಯಾರು ಮೀನುಗಾರಿಕೆ ವೃತ್ತಿ ಮಾಡುತ್ತಾರೆ ಅಂತಹ ಕುಟುಂಬಗಳವರ ಮಕ್ಕಳಿಗೆ ಈ ಕಾಲೇಜಿನಲ್ಲಿ ರಿಜರ್‌ವೇಷನ್ ನೀಡಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ವಿನಂತಿಸಿಕೊಳ್ಳುತ್ತೇನೆ. ಇತ್ತೀಚೆಗೆ ಪರ್ಸಿನ್ ಮತ್ತು ಯಾಂತ್ರಿಕ ದೋಣಿಗಳ ಸಂಖ್ಯೆ ಈಗ ಜಾಸ್ತಿಯಾಗಿದೆ, ಅದನ್ನು ಕಡಿಮೆ ಮಾಡಬೇಕೆಂದು ಮಾನ್ಯ ಮೀನುಗಾರಿಕಾ ಸಚಿವರು ಹಿಂದೆ ಪ್ರಸ್ತಾಪ ಮಾಡಿದ್ದರು. ಇಷ್ಟು ವಿಶಾಲವಾದ ಸಾಗರದಲ್ಲಿ ಮೀನು ಹಿಡಿಯಲು ಯಾವ ತೊಂದರೆಯೂ ಇಲ್ಲ. ಆದ್ದರಿಂದ ಈ ದೋಣಿಗಳ ಸಂಖ್ಯೆಯನ್ನು ಕಡಿಮೆ ಮಾಡಬಾರದು? ಹಾಗೂ ಈ ದೋಣಿಗಳನ್ನು ಇನ್ನೂ ಹೆಚ್ಚು ಮಾಡಲು ಸೂಕ್ತ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಇವತ್ತು ಏನಾಗಿದೆಯೆಂದರೆ ಕಷ್ಟಪಟ್ಟು ಪರ್ಸಿನ್ ಮತ್ತು ಯಾಂತ್ರಿಕ ದೋಣಿಗಳಲ್ಲಿ ಮೀನುಗಳನ್ನು ಹಿಡಿದರೆ ಅದಕ್ಕೆ ಸರಿಯಾದ ಮಾರ್ಕೆಟ್ ಇಲ್ಲ. ಅದನ್ನು ವಿತರಣೆ ಮಾಡಲು ಸರಿಯಾದ ವ್ಯವಸ್ಥೆ ಇಲ್ಲ. ಆದ್ದರಿಂದ ಮೀನುಗಳ ಮಾರಾಟಕ್ಕೆ ಸರಿಯಾದ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಈಗ ರಂಪಣಿ ದೋಣಿಗಳ ಸಂಖ್ಯೆ ಕಡಿಮೆಯಾಗಿದೆ, ನಿಜವಾಗಿ ಒಂದು ರಂಪಣಿಯಲ್ಲಿ ೧೦೦ ರಿಂದ ೧೫೦ ಜನ ಕೆಲಸ ಮಾಡುತ್ತಾರೆ. ಆದರೆ ಈ ಒಂದು ರಂಪಣಿ ದೋಣಿಗಳ ಸಂಖ್ಯೆ ಕಡಿಮೆಯಾಗಿರುವುದರಿಂದ ಬಹಳ ಜನ ನಿರುದ್ಯೋಗಿಗಳಾಗಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಈ ರಂಪಣಿ ದೋಣಿಗಳಿಗೆ ಪ್ರೋತ್ಸಾಹ ಕೊಟ್ಟರೆ ಬಹುಶಃ ಹೆಚ್ಚಿನ ಜನರು ಮೀನು ಹಿಡಿಯಲು ಅನುಕೂಲವಾಗುತ್ತದೆ ಮತ್ತು ಹೆಚ್ಚಿನ ಜನರಿಗೆ ಉದ್ಯೋಗ ಅವಕಾಶಗಳನ್ನು ಒದಗಿಸಲು ಸಹಾಯಕವಾಗುತ್ತದೆಂದು ಹೇಳುತ್ತೇನೆ. ಇನ್ನು ನಗರಗಳ ಬಗ್ಗೆ ಹೇಳುವುದಾದರೆ, ನಮ್ಮ ಮಂಗಳೂರು ನಗರ ಸಭೆಯ ಬಗ್ಗೆ ನಾನು ಒಂದೆರಡು ಮಾತನ್ನು ಹೇಳಲೇಬೇಕಾಗುತ್ತದೆ. ಈ ನಗರಗಳು ಅಭಿವೃದ್ಧಿಯಾಗಬೇಕಾದರೆ ಹಲವಾರು ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಜನರಿಗೆ ಹೆಚ್ಚಿನ ರೀತಿಯ ನಗರ ಸೌಲಭ್ಯಗಳು ಸಿಗಬೇಕಾದರೆ ನಗರಸಭೆಗೆ ಸರ್ಕಾರದವರು ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕಾಗುತ್ತದೆ. ಜನರಿಗೆ ಸಮರ್ಪಕವಾಗಿ ನೀರಿನ ವಿತರಣೆ ಮತ್ತು ಕೊಳಚೆ ಪ್ರದೇಶಗಳ ನಿರ್ಮೂಲನ ಕಾರ್ಯ ಬಹಳ ಮುಖ್ಯವಾಗಿ ಆಗಬೇಕಾಗಿದೆ. ಆದರೆ ಮಂಗಳೂರು ನಗರಸಭೆಯಲ್ಲಿ ೪೦ ವರ್ಷಗಳ ಹಿಂದೆ ಯಾವ ವಾಟರ್ ಸಪ್ಲೈ ಯೋಜನೆ ಇತ್ತು ಅದೇ ಯೋಜನೆ ಇವತ್ತಿನವರೆಗೂ ಮುಂದುವರಿಯುತ್ತಿದೆ. ಇವತ್ತು ಜನಸಂಖ್ಯೆಯ ಆಧಾರದ ಮೇಲೆ ನೀರಿನ ವ್ಯವಸ್ಥೆಯನ್ನು ಹೆಚ್ಚು ಮಾಡಬೇಕು. ಈ ವರ್ಷ ಕುಡಿಯುವ ನೀರಿನ ಅಭಾವ ಬಹಳ ಇದೆ. ಈ ಬಗ್ಗೆ ಸರ್ಕಾರ ಗಮನ ಹರಿಸಿ ತ್ವರಿತವಾಗಿ ನೀರಿನ ಅಭಾವವನ್ನು ತಪ್ಪಿಸಲು ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನೇತ್ರಾವತಿ ನದಿಯ ಪಕ್ಕದಲ್ಲಿ ವ್ಯವಸಾಯ ಮಾಡತಕ್ಕಂಥ ರೈತರಿಗೆ ಕೊಡತಕ್ಕ ವಿದ್ಯುತ್‌ನ್ನು ಕಟ್ ಮಾಡಿದ್ದಾರೆ. ಇದರಿಂದ ಅವರು ಸಾಗುವಳಿ ಮಾಡುವುದು ಕಷ್ಟವಾಗಿದೆ. ೧೯೮೩ರಲ್ಲಿ ಇಂತಹ ಸಮಸ್ಯೆ ಬಂದಾಗ ಆಗಿನ ಸರ್ಕಾರ ಇದರ ಬಗ್ಗೆ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಿ ಸುಮಾರು ೯೦ ಲಕ್ಷ ರೂಪಾಯಿಯ ವೆಚ್ಚದಲ್ಲಿ ವೆಂಟೆಡ್ ಡ್ಯಾಮ್ ಮಾಡಬೇಕೆಂದು ಅವರು ಸಲಹೆ ಕೊಟ್ಟಿದ್ದರು. ಆದರೆ ಆ ದಿಕ್ಕಿನಲ್ಲಿ ಕೆಲಸ ಮಾಡಿಲ್ಲ. ಈಗ ಕೆಲಸ ಪ್ರಾರಂಭ ಆಗಿದೆ. ಮಂಗಳೂರಿಗೆ ನೀರು ಕೊಡುವ ದೃಷ್ಟಿಯಿಂದ ಗ್ರಾಮಾಂತರ ಪ್ರದೇಶದ ರೈತರಿಗೆ ಹೆಚ್ಚು ತೊಂದರೆ ಯಾಗದ ರೀತಿಯಲ್ಲಿ ನೋಡಿಕೊಳ್ಳಬೇಕು. ಹಾಗೂ ಈಗ ಏನು ಕೆಲಸ ಪ್ರಾರಂಭ ಆಗಿದೆ, ಅದು ಜಾಗ್ರತೆ ಮುಗಿಯಲು ಸೂಕ್ತ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಡಾ. ಎಲ್. ಮಲಕರೆಡ್ಡಿ (ಯಾದ್ಗೀರ್).—ಸನ್ಮಾನ್ಯ ಅಧ್ಯಕ್ಷಿಣಿಯವರೆ. ವಸತಿ ನಗರಾಭಿವೃದ್ಧಿ ಬಂದರು ಹಾಗೂ ಮೀನುಗಾರಿಕೆಗೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ಸೂಚನೆಗಳನ್ನು ಸರ್ಕಾರಕ್ಕೆ ಕೊಡುವುದಕ್ಕೆ ಇಚ್ಛಿಸುತ್ತೇನೆ.

(ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಮೂರು ತಿಂಗಳ ಅಲ್ಪಾವಧಿಯಲ್ಲಿ ಹೆಚ್ಚೇನೂ ಸಾಧಿಸಲಿಕ್ಕೆ ಸಾಧ್ಯವಿಲ್ಲ. ಹಿಂದೆ ನಗರಾಭಿವೃದ್ಧಿ ಸಚಿವರಾಗಿದ್ದ ದೇಶಪಾಂಡೆಯವರು ತಮ್ಮ ಭಾಷಣದಲ್ಲಿ ಸಾಕಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಕಳೆದ ಮೂರು ತಿಂಗಳಲ್ಲಿ ಸನ್ಮಾನ್ಯ ಸಚಿವರು ಈ ಖಾತೆಗೆ ಬಂದು ಉದ್ದೇಶಿತ ನಿರ್ದೇಶನ ಪರ್ಪಜ್ ಫುಲ್ ಡೈರೆಕ್ಷನ್ ಕೊಟ್ಟಿದ್ದಾರೆ ಅದನ್ನು ಪ್ರತಿಯೊಬ್ಬರೂ ಮೆಚ್ಚುವಂಥಾದ್ದು. ನಾವುಗಳು ಶಾಸಕರಾಗಿ, ಜನರ ಪ್ರತಿನಿಧಿಗಳಾಗಿ ಯಾವುದೇ ಒಂದು ಕೆಲಸದ ಬಗ್ಗೆ ಹೋದಾಗ, ಮಾನ್ಯ ಸಚಿವರು ಕಳಕಳಿಯಿಂದ ಶೀಘ್ರಗತಿಯಲ್ಲಿ ನಮ್ಮ ಸಮಸ್ಯೆಗಳನ್ನು ಪರಿಹರಿಸಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಮತ್ತು ತಮ್ಮ ಖಾತೆಯಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳಿಗೆ ಈ ವಿಚಾರದಲ್ಲಿ ಕಟ್ಟುನಿಟ್ಟಿನ ನಿರ್ದೇಶನ ಕೊಟ್ಟಿದ್ದಾರೆ. ಇಂಥ ದಕ್ಷ ಹಾಗೂ ಸಮರ್ಥ ಮಂತ್ರಿಗಳ ಮೇಲ್ವಿಚಾರಣೆಯಲ್ಲಿ ಈ ಒಂದು ನಗರಾಭಿವೃದ್ಧಿ ಖಾತೆ ಕೆಲಸ ನಿರ್ವಹಿಸುತ್ತಿವೆ. ನಾನು ಪ್ರಮುಖವಾಗಿ ವಸತಿ ಮತ್ತು ನಗರಾಭಿವೃದ್ಧಿ ಬಗ್ಗೆ ಮಾತನಾಡುತ್ತೇನೆ. ಇವತ್ತು ರಾಜ್ಯದಲ್ಲಿ, ದೇಶದಲ್ಲಿ ವಸತಿ ಸಮಸ್ಯೆ ದಿನೇ ದಿನೇ ಬಹಳ ಜ್ವಲಂತವಾಗಿ ಬೆಳೆದು, ಅದರ ಪರಿಹಾರಕ್ಕೆ ಸರ್ಕಾರ ಏನು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿದೆ ಅದು ನಿಷ್ಫಲವಾಗುತ್ತಿದೆ. ಕಾರಣ, ಇವತ್ತು ಸರ್ಕಾರ ಯಾವ ವಸತಿಗಳ ನಿರ್ಮಾಣ ಕಾರ್ಯಗಳನ್ನು ಕೈನಲ್ಲಿ ತೆಗೆದುಕೊಂಡಿದ್ದಾರೆಯೋ ಅವುಗಳ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ಪೂರ್ತಿಯಾಗಿರತಕ್ಕ ಕೆಲಸಗಳ ಗುಣಮಟ್ಟ ಸರಿಯಾಗಿಲ್ಲ. ಕೆಲಸಗಳ ಗುಣಮಟ್ಟ ತುಂಬಾ ಕೆಳಮಟ್ಟದಲ್ಲಿದೆ. ಒಂದು ವರ್ಷ ಮುಗಿಯುವುದರೊಳಗೆ ಅಂದರೆ, ಒಂದು ಸಾರಿ ಮಳೆ ಬಂದರೆ ಕಟ್ಟಿರತಕ್ಕ ಮನೆಗಳು ನೆಲಸಮ ವಾಗುತ್ತವೆ. ಮನೆ ಕೊಂಡವನು ಮತ್ತೆ ೨-೩ ಸಾವಿರ ರೂಪಾಯಿ ಖರ್ಚು ಮಾಡಿ, ರಿಪೇರಿ ಮಾಡಿಸಿಕೊಳ್ಳತಕ್ಕ ಸಂದರ್ಭಗಳೇ ಜಾಸ್ತಿ ಇವೆ. ಮಾನ್ಯ ಮಂತ್ರಿಗಳು ಗುಣಮಟ್ಟ ನಿಯಂತ್ರಣದ ಕಡೆಗೆ ಹೆಚ್ಚು ಲಕ್ಷ್ಯ ಕೊಡಬೇಕಾಗಿದೆ ಎಂದು ಕೇಳಿ ಕೊಳ್ಳುತ್ತೇನೆ. ಯಾವುದೇ ಪಕ್ಷ ಇರಲಿ ಯಾವುದೇ ಸರ್ಕಾರ ಇರಲಿ ಚುನಾವಣೆಗೆ ಹೋಗುವುದಕ್ಕೆ ಮೊದಲು ೨-೩ ಶ್ಲೋಗನ್ನುಗಳನ್ನು ಜನರ ಮುಂದೆ ಇಡುತ್ತದೆ. ಅನ್ನ, ಬಟ್ಟೆ ಹಾಗೂ ವಸತಿ. ಇವತ್ತು ಜನರಿಗೆ ವಸತಿ ಒದಗಿಸಿಕೊಡುವುದು ಸರ್ಕಾರದ ಆದ್ಯ ಕರ್ತವ್ಯ. ಇವತ್ತು ಹಳ್ಳಿಗಳಲ್ಲಿ, ನಗರಗಳ ಕೆಲವು ಭಾಗಗಳಲ್ಲಿ ಸ್ವಲ್ಪ ದೃಷ್ಟಿ ಹರಿಸಿದರೆ, ನಾವು ನಾಗರೀಕ ಸಮಾಜದಲ್ಲಿ ಇದ್ದೇವೋ ಇಲ್ಲವೋ ಎಂದು ಭಾಸವಾಗುತ್ತದೆ. ಬಡವರ ಮನೆಗಳನ್ನು ನೋಡಿದಾಗ ಒಂದೊಂದು ಕೋಣೆ ಇರತಕ್ಕ ಮನೆಗಳಲ್ಲಿ ೫-೬ ಜನ ಜೊತೆಗೆ ಹಸುಕರುಗಳನ್ನು ಸಾಕಿಕೊಂಡು ಇರುತ್ತಾರೆ. ಹೀಗಾಗಿ ವಸತಿ ಸಮಸ್ಯೆ ಇಷ್ಟೊಂದು ಗಂಭೀರವಾಗಿ ಬೆಳೆಯುತ್ತಿದೆ. ಸರ್ಕಾರ ಈ ಒಂದು ಯೋಜನೆಗೆ ಹಣ ಕೊಟ್ಟಿರುವುದು ನನ್ನ ದೃಷ್ಟಿಯಲ್ಲಿ ಸಾಕಾಗುವುದಿಲ್ಲ. ಇವತ್ತು ನಾವು ಏನು ಮಾಡುತ್ತಿದ್ದೇವೆಂದರೆ ಪ್ರಗತಿ ಹೊಂದಿದ ರಾಷ್ಟ್ರಗಳನ್ನು ನಾವು ನೋಡಿದಾಗ ಆ ರಾಷ್ಟ್ರದಲ್ಲಿ ಏನೇನು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ ಅವುಗಳನ್ನು ಜಾರಿ ಮಾಡುವುದಕ್ಕೆ ಹೊರಟಿದ್ದೇವೆ. ಪ್ರಗತಿಪರ ಕಾರ್ಯಕ್ರಮಗಳಿರಬಹುದು. ಜನರ ಮೂಲಭೂತ ಸಮಸ್ಯೆಗಳಿಗೆ ಸಂಬಂಧಪಟ್ಟ ಕಾರ್ಯಕ್ರಮಗಳಿರಬಹುದು. ಅನಗತ್ಯದ ಹೆಚ್ಚುವರಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಾಗ ಇದರಿಂದ ನಮ್ಮಲ್ಲಿರತಕ್ಕ ಆದಾಯ ವಿನಾಕಾರಣ ಪೋಲಾಗುತ್ತವೆ. ಈ ರೀತಿಯಾಗಿರುವುದಕ್ಕೆ ರಾಷ್ಟ್ರಮಟ್ಟದಲ್ಲಿ ಸಾಕಷ್ಟು ಉದಾಹರಣೆಗಳು ನಮಗೆ ಸಿಗುತ್ತವೆ, ಇವತ್ತು ನಾವು ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನಲ್ಲಿ ಸಾಕಷ್ಟು ಹಣ ತೊಡಗಿಸಿದ್ದೇವೆ ಅವು ಸರಿಯಾಗಿ ಫಲ ಕೊಡುತ್ತಿಲ್ಲ. ಈ ನಮ್ಮ ಅನುಭವದ ಹಿನ್ನೆಲೆಯಲ್ಲಿ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ೬೪ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನಲ್ಲಿ ಹಣ ತೊಡಗಿಸಿದ್ದೇವೆ, ಯಾವುದೇ ಸರ್ಕಾರ ರಾಜ್ಯದ ಸಂಪತ್ತನ್ನು ಜನರ ಅಭಿವೃದ್ಧಿಗೆ ಜನರ ಸುಖಸಮೃದ್ಧಿಗಾಗಿ ವೆಚ್ಚ ಮಾಡಬೇಕು. ಆದರೆ, ಇವತ್ತು ಆ ರೀತಿ ಹಂಚಿಕೆಯಾಗುತ್ತಿಲ್ಲ, ಸರ್ಕಾರಕ್ಕೆ ನನ್ನ ಕಳಕಳಿಯ ಮನವಿ ಏನೆಂದರೆ ವಸತಿಗಳ ನಿರ್ಮಾಣದ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು. ಇದರಿಂದ ಜನರ ವಸತಿ ಸಮಸ್ಯೆಯನ್ನು ಪರಿಹರಿಸಲಿಕ್ಕೆ ಸಾಧ್ಯವಾಗುತ್ತದೆ.

೪–೧೫ ಪಿ. ಎಂ

ಈಗ ಗುಲ್ಬರ್ಗ ಗೃಹ ನಿರ್ಮಾಣ ಮಂಡಲಿ ಕಡೆಯಿಂದ ಒಂದು ಬೇಡಿಕೆ ಬಂದಿದೆ. ಹಡ್ಕೋ ದಿಂದ ಸುಮಾರು ೪೪೧ ಕೋಟಿ ರೂಪಾಯಿ ಬರಬೇಕಾಗಿತ್ತು. ಆದರೆ ನಾಲ್ಕೈದು ಕೋಟಿ ರೂಪಾಯಿ ಬರದೇ ಇದ್ದುದರಿಂದ ಆ ಜಿಲ್ಲೆಯ ವಸತಿ ನಿರ್ಮಾಣ ಕಾರ್ಯ ಸಂಪೂರ್ಣವಾಗಿ ನಿಂತಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಗುಲ್ಬರ್ಗಕ್ಕೆ ಸಂದರ್ಶನ ಕೊಟ್ಟಾಗ ಅಲ್ಲಿಯ ಸಂಬಂಧಪಟ್ಟ ಅಧಿಕಾರಿಗಳು ಹೇಳುತ್ತಿದ್ದರು. ಅದಕ್ಕಾಗಿ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಗುಲ್ಬರ್ಗ ಬೆಂಗಳೂರಿನಿಂದ ಬಹಳ ದೂರ ಇದೆ. ಆದರೂ ಕೂಡ ಬಡ ಜನರ ಬಗ್ಗೆ ಕಳಕಳಿ ಉಳ್ಳಂಥ ತಾವು ಗಮನಹರಿಸಿ ಗುಲ್ಬರ್ಗ ವಸತಿ ಸಮಸ್ಯೆ ಬಗ್ಗೆ ಹೆಚ್ಚು ಕಾಳಜಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ನಗರಾಭಿವೃದ್ಧಿ ಬಗ್ಗೆ ಹೇಳಬೇಕಾದರೆ ಈ ಖಾತೆಯಲ್ಲಿ ಕೂಡ ಗುಲ್ಬರ್ಗಾ

ನಗರ ಬಹಳ ಹಿಂದುಳಿದಿದೆ. ಅನೇಕ ಜನರು ಬೆಂಗಳೂರು ಸಮಸ್ಯೆ ಬಗ್ಗೆ ಹೇಳಿದರು. ಗುಲ್ಬರ್ಗ ಬಗ್ಗೆ ಹೇಳಬೇಕಾದರೆ, ಅಲ್ಲಿ ಕಾರ್ಪೊರೇಷನ್ ಪ್ರಾರಂಭವಾಗಿ ಅಸ್ತಿತ್ವದಲ್ಲಿ ಬಂದು ೨೦ ವರ್ಷ ಆಯಿತು. ೨೦ ವರ್ಷಗಳಾದರೂ ಕೂಡ ಆ ನಗರಸಂಪತ್ತನ್ನು ಅಭಿವೃದ್ಧಿ ಮಾಡುವ ಕೆಲಸ ಏನೂ ಕೈಗೊಂಡಿಲ್ಲ. ಆ ನಗರಕ್ಕೆ ಬರತಕ್ಕ ಆದಾಯ ಕೂಡ ಹೆಚ್ಚಾಗಿ ಇಲ್ಲ. ನಗರಾಭಿವೃದ್ಧಿಗಾಗಿ ಸರ್ಕಾರದ ವತಿಯಿಂದ ಬರತಕ್ಕ ಹಣ ಸಂದಾಯವಾಗದೆ ಇರುವ ಕಾರಣ ಯಾವ ಕಟ್ಟಡ ಕಾರ್ಯ ಕೈಗೊಳ್ಳಲಿಕ್ಕೆ ಆಗಿಲ್ಲ. ಯಾವ ಸವಲತ್ತುಗಳನ್ನು ಇಂದು ಸುಮಾರು ನಾಲ್ಕು ಲಕ್ಷ ಜನಸಂಖ್ಯೆಗೆ ಕೊಡಬೇಕೋ ಅದು ಆಗಿಲ್ಲ. ತಮಗೆ ಉದಾಹರಣೆ ಹೇಳಬೇಕೆಂದರೆ, ನೀರನ್ನು ಒದಗಿಸುವ ಕಾರ್ಯಕ್ರಮ ನೋಡಿದರೆ ೧೯೭೭ನೇ ಇಸವಿಯಿಂದ ಜನರು ಈ ನೀರಿನ ಅಭಾವದಿಂದ ಅನೇಕ ಕಷ್ಟಕ್ಕೆ ಗುರಿಯಾಗಿದ್ದಾರೆ ಈ ಬಗ್ಗೆ ಅನೇಕ ರೀತಿಯಿಂದ ಚಳುವಳಿ ಮಾಡಿ, ಮುಷ್ಕರ ಮಾಡಿ ಅವರೂ ಸಹ ಸೋತು ಹೋಗಿದ್ದಾರೆ ಕಡೆಗೆ ಭೀಮಾ ರಿವರ್ ಪ್ರಾಜೆಕ್ಟ್ ಯೋಜನೆ ಕೈಗೆತ್ತಿಕೊಂಡಿದ್ದಾರೆ. ಹಾಗೆಯೇ ತಾತ್ಕಾಲಿಕವಾಗಿ ನೀರನ್ನು ಜನರಿಗೆ ಕೊಡಲಿಕ್ಕೆ ಏನು ಹಣ ಖರ್ಚು ಮಾಡಿದ್ದಾರೆಯೋ. ಅಷ್ಟೇ ಹಣವನ್ನು ಶಾಶ್ವತವಾಗಿ ನೀರು ಸಪ್ಲೈ ಮಾಡಲಿಕ್ಕೆ ಒಂದು ಸ್ಕೀಮು ಹಾಕಿಕೊಂಡಿದ್ದರೆ ಎಂದೋ ಈ ಕಾರ್ಯಕ್ರಮ ಮುಗಿದು ಹೋಗುತ್ತಿತ್ತು. ನೀರನ್ನು ಟ್ಯಾಂಕರ್ ಮೂಲಕ, ಮತ್ತು ಬೋರ್‌ವೆಲ್ ಹಾಕಿಸಿ, ಸಪ್ಲೈ ಮಾಡುವುದಕ್ಕೆ ಕೋಟ್ಯಾಂತರ ರೂಪಾಯಿ ಖರ್ಚಾಗಿದೆ. ಈಗ ಭೀಮಾ ನದಿಯಿಂದ ನೀರನ್ನು ಒದಗಿಸಲು ಒಂದು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಆದರೆ ಈ ಕಾರ್ಯಕ್ರಮಕ್ಕೂ ಸರ್ಕಾರ ೨೦ ಕೋಟಿ ರೂಪಾಯಿ ಮಂಜೂರಾತಿ ಮಾಡಿದೆ. ಸಧ್ಯಕ್ಕೆ ಈಗಾಗಲೇ ೭-೮ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ ಎಂದು ಮಾಹಿತಿ ಇದೆ. ಉಳಿದ ಹಣವನ್ನು ತ್ವರಿತಗತಿಯಲ್ಲಿ ಖರ್ಚು ಮಾಡಿ ಕೆಲಸವನ್ನು ಮಾಡಿದ್ದೇ ಆದರೆ ಇನ್ನೂ ಎರಡು ಮೂರು ವರ್ಷದ ವರೆಗೆ ಕಾರ್ಯಕ್ರಮ ಪೂರ್ತಿಯಾಗುವ ಸಂಭವ ಉಂಟು. ಈ ಕಾರ್ಯಕ್ರಮ ಪೂರ್ತಿಯಾಗಲು ಸುಮಾರು ೨೦ ಕೋಟಿ ರೂಪಾಯಿ ಆಗಬಹುದು. ಈ ೨೦ ಕೋಟಿ ರೂಪಾಯಿ ಖರ್ಚು ಮಾಡಿ ಈ ಕಾರ್ಯಕ್ರಮವನ್ನು ಪೂರ್ತಿ ಮಾಡಿದರೂ ಕೂಡ ಈ ಯೋಜನೆಗೆ ನೀರು ಸಿಕ್ಕುತ್ತದೆಯೋ ಅಥವಾ ಇಲ್ಲವೋ ಎನ್ನುವ ಬಗ್ಗೆ ಸಂಶಯ ಇದೆ. ಏಕೆಂದರೆ, ಈ ಬಗ್ಗೆ ಹಿಂದಿನ ಮಂತ್ರಿಗಳು ಸಹ ಹೇಳುತ್ತಿದ್ದರು ಈ ಭೀಮಾ ನದಿ ಏನಿದ ಅದು ನವೆಂಬರ್ ತಿಂಗಳಲ್ಲೇ ಪ್ರವಾಹಕ್ಕೆ ಕಟ್ ಆಗುತ್ತದೆ ಜನರಿಗೆ ನೀರಿನ ಕೊರತೆ ಇರುವುದು, ಲೀನ್ ಸೀಸನ್ ತಿಂಗಳುಗಳಾದ ಫೆಬ್ರುವರಿ, ಮಾರ್ಚಿ, ಏಪ್ರಿಲ್ ಮೇ ಹೀಗೆ ಒಟ್ಟು ನಾಲ್ಕು ತಿಂಗಳು ನೀರಿನ ಕೊರತೆ ಇರುತ್ತದೆ. ನವೆಂಬರ್ ತಿಂಗಳಿನಲ್ಲಿ ನದಿಯ ಪ್ರವಾಹವು ಕಟ್ಟಾಗುವುದು. ಆದ್ದರಿಂದ, ೨೦ ಕೋಟಿ ರೂಪಾಯಿ ಖರ್ಚು ಮಾಡಿ ಯೋಜನೆ ಸಿದ್ಧ ಮಾಡಿ ಏನು ಪ್ರಯೋಜನ ? ಅದಕ್ಕೆ ಸರ್ಕಾರದವರು ಮುಂಜಾಗರೂಕತೆ ವಹಿಸಬೇಕು. ಅಪ್‌ಸ್ಟ್ರೀಮ್ ಮೇಲೆ ಭೀಮಾ ರಿವರ್ ಮಹಾರಾಷ್ಟ್ರದಿಂದ ಬರುತ್ತದೆ. ಮಹಾರಾಷ್ಟ್ರ ಸರ್ಕಾರದ ಜೊತೆ ನೀರಿನ ಸಲುವಾಗಿ ಸಂಧಾನ ಮಾಡಿಕೊಳ್ಳಬೇಕು. ಅದರಮೇಲೆ ಅವರು ಸಾಕಷ್ಟು ಬ್ಯಾರೇಜಸ್ ಕಟ್ಟುತ್ತಿದ್ದಾರೆ, ಡ್ಯಾಮ್ಸ್ ಕಟ್ಟುತ್ತಿದ್ದಾರೆ. ಈಗಾಗಲೇ ಸುಮಾರು ೧೨ ಬ್ಯಾರೇಜಸ್ ಕಟ್ಟಿರುವ ಮಾಹಿತಿ ಬಂದಿದೆ. ಭೀಮಾ ರಿವರ್ ಪ್ರಾಜೆಕ್ಟ್ ಕಂಪ್ಲೀಟ್ ಮಾಡಿದರೂ ಕೂಡ ನೀರು ಸಿಕ್ಕುವುದಿಲ್ಲ ಎಂದು ಜನರಲ್ಲಿ ಒಂದು ಸಂಶಯ ಮೂಡಿದೆ. ಆದ್ದರಿಂದ, ಸರ್ಕಾರ ತ್ವರಿತಗತಿಯಲ್ಲಿ ಮಹಾರಾಷ್ಟ್ರ ಸರ್ಕಾರದ ಜೊತೆ ಸಂಧಾನ ಮಾಡಿ ೪೦-೫೦ ವರ್ಷಗಳಿಗೆ ಸಂಬಂಧಪಟ್ಟ ಅವಧಿಯವರೆಗೆ ಒಂದು ಸಂಧಾನ ಮಾಡಿಕೊಂಡರೆ ಗುಲ್ಬರ್ಗ ಜನರಿಗೆ ದೊಡ್ಡ ಉಪಕಾರ ಮಾಡಿದಂತಾಗುತ್ತದೆ. ಇನ್ನು ಹೌಸಿಂಗ್ ಅರ್ಬನ್ ಡೆವಲಪ್‌ಮೆಂಟ್ ಆನ್ಯುಯಲ್ ರಿಪೋರ್ಟ್ ೧೯೮೯-೯೦ಕ್ಕೆ ಸಂಬಂಧಪಟ್ಟಂತೆ ನೋಡುವುದಾದರೆ, ನಮ್ಮ ಗುಲ್ಬರ್ಗ ಬಗ್ಗೆ ಏನೇನು ಕಾರ್ಯಕ್ರಮ ಇದೆ ಎಂದು ನೋಡಿದರೆ ನನಗೆ ನಾಚಿಕೆಯಾಗುತ್ತದೆ. ವಾರ್ಷಿಕ ವರದಿಯ ಪುಟ ೨೨ರಲ್ಲಿ ನೋಡಿದರೆ ಗುಲ್ಬರ್ಗ ಕಾರ್ಪೊರೇಷನ್ ಬಗ್ಗೆ ಅಲ್ಲಿನ ಅಧಿಕಾರಿಗಳು. ಯಾವ ರೀತಿ ಕೊಟ್ಟಿದ್ದಾರೆ ಎಂದು ಗೊತ್ತಾಗುತ್ತದೆ. ಬೆಂಗಳೂರು ನಗರ, ಮೈಸೂರು ನಗರ, ಹುಬ್ಬಳ್ಳಿ ಧಾರವಾಡ ಕಾರ್ಪೊರೇಷನ್ ಬಗ್ಗೆ ಅವರು ಏನೇನು ಮಾಡಿದ್ದಾರೆ ಅದರ ಮಾಹಿತಿಯನ್ನೆಲ್ಲಾ ಕೊಟ್ಟಿದ್ದಾರೆ. ಅವರ ಎಸ್ಟಿಮೇಟ್ ಏನಿತ್ತು ಅವರ ಪರಫಾರ್‌ಮೆನ್ಸ್ ಏನಿದೆ ಎಲ್ಲವನ್ನೂ ಕೊಟ್ಟಿದ್ದಾರೆ. ಆದರೆ ಗುಲ್ಬರ್ಗ ಬಗ್ಗೆ ಕೇವಲ ಅರ್ಧ ಪುಟದಲ್ಲಿ ಮುಗಿಸಿದ್ದಾರೆ. ಅವರು ತಮ್ಮದೇ ಏನೇನು ಕಾರ್ಯಕ್ರಮ ಇದೆ, ಏನೇನು ಕಾರ್ಯಕ್ರಮ ಮಾಡಿದ್ದೇವೆ ಎಂಬ ಬಗ್ಗೆ ವಿಶದವಾಗಿ ಯಾವುದನ್ನೂ ಕೊಟ್ಟಿಲ್ಲ,

ಹೀಗಿದ್ದಾಗ ಗುಲ್ಬರ್ಗದ ಬಗ್ಗೆ ನಾವು ಏನು ಚರ್ಚೆ ಮಾಡಬೇಕು. ಹೋದ ವರ್ಷದ ಸಾಲಿನಲ್ಲಿ ೪೩ ಲಕ್ಷದ ಯೋಜನೆಗೆ ಮಂಜೂರಾತಿ ಕೊಟ್ಟು ಮೇಲೆ ಕಾರ್ಪೊರೇಷನ್ನಿಗೆ ೧೪ ಲಕ್ಷ ರೂಪಾಯಿಗಳನ್ನು ಕೊಟ್ಟರೆ ಅವರು ಏನು ಕೆಲಸ ಮಾಡಬೇಕು ಇದಕ್ಕೆ ಸಂಬಂಧಪಟ್ಟ ಅಧಿಕಾರಿಯವರು ಏನು ಇದ್ದಾರೆ ಇವರನ್ನು ಅದಕ್ಷತೆಗಾಗಿ ಶಿಕ್ಷೆಗೆ ಒಳಪಡಿಸಬೇಕು. ಗುಲ್ಬರ್ಗ ಜಿಲ್ಲೆಯಲ್ಲಿ ಯಾದಗಿರಿ ನಗರ

ಎರಡನೇ ಪ್ರಮುಖ ನಗರವಾಗಿದೆ. ಹಿಂದೆ ಮಾನ್ಯ ಧರ್ಮಸಿಂಗ್‌ರವರು ನಗರಾಭಿವೃದ್ಧಿ ಮಂತ್ರಿಯಾಗಿದ್ದಾಗ ೧೯೮೦ನೇ ಇಸವಿಯಲ್ಲಿ ಒಂದು ಯೋಜನೆಯನ್ನು ಮಂಜೂರು ಮಾಡಿ ಆ ಮೂಲಕ ಅಲ್ಲಿನ ಜನರಿಗೆ ನೀರನ್ನು ಒದಗಿಸಬೇಕೆಂದು ಪ್ರಾರಂಭ ಮಾಡಿದರು. ಈಗ ನಾವು ೯೦ ನೇ ಇಸವಿಗೆ ಕಾಲಿಡುತ್ತಿದ್ದೇವೆ. ಇನ್ನೂ ೫೦ ಪರ್ಸೆಂಟ್ ಕೆಲಸ ಆಗಿಲ್ಲ. ಶಹಾಪುರ, ಯಾದಗಿರಿ ನಗರದ ನೀರನ್ನು ಶೇಕಡ ೨೦ ರಷ್ಟು ಜನಸಂಖ್ಯೆ ಗುಡ್ಡದ ಮೇಲೆ ಇದೆ. ಅವರು ಬೇಸಿಗೆಯಲ್ಲಿ ಕೆಳಗಿನಿಂದ ಮೇಲಕ್ಕೆ ಎತ್ತಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ದಯಮಾಡಿ ಇದರ ಬಗ್ಗೆ ಹೆಚ್ಚು ಗಮನಹರಿಸಿ ಎಷ್ಟು ಸಾಧ್ಯವೋ ಅಷ್ಟು ಹಣವನ್ನು ಈ ನಗರಕ್ಕೆ ತಕ್ಷಣ ಕೊಡಬೇಕು ಆ ಮೂಲಕ ಇನ್ನು ಆರು ತಿಂಗಳಲ್ಲಿ ಯಾದರೂ ಆ ಕೆಲಸ ಪೂರ್ತಿ ಮಾಡಬೇಕೆಂದು ವಿನಂತಿಸುತ್ತೇನೆ. ಇನ್ನು ಒಳಚರಂಡಿ ವ್ಯವಸ್ಥೆ ಬಗ್ಗೆ ಕೆಲವು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಾನು ಯಾದಗಿರಿ ನಗರದಲ್ಲಿ ಚುನಾವಣಾ ಪ್ರಚಾರದ ಸಲುವಾಗಿ ಓಡಾಡುತ್ತಿದ್ದಾಗ ಮತ್ತು ಅಲ್ಲಿ ಅನೇಕ ಕಾರ್ಯಕ್ರಮಗಳಲ್ಲಿ ಭಾಗ ವಹಿಸಲಿಕ್ಕೆ ಹೋದಾಗ ಅಲ್ಲಿನ ಕೊಳಚೆ ಪ್ರದೇಶದಲ್ಲಿರತಕ್ಕಂತಹ ಜನರನ್ನು ನೋಡಿದರೆ ಅವರು ಏನು ಪಾಪ ಮಾಡಿ ಈ ನಗರದಲ್ಲಿ ಅವರು ಇದ್ದಾರೆ ಎಂದು ನನಗೆ ಅನ್ನಿಸುತ್ತದೆ. ಆ ಪ್ರದೇಶಗಳಲ್ಲಿ ಪ್ರವಾಸ ಮಾಡಲಿಕ್ಕೆ ತಿರುಗಾಡುವುದಕ್ಕೆ ಸಾಧ್ಯವೇ ಇಲ್ಲದಂತಹ ಮಲಿನ ಪರಿಸ್ಥಿತಿ ಇದೆ. ಅಲ್ಲನ ಹೆಣ್ಣುಮಕ್ಕಳ ಮಾನ ಮರ್ಯಾದೆಯನ್ನು ಬಜಾರಿಗೆ ಇಟ್ಟಿದ್ದೇನೆ, ಅವರು ತಮ್ಮ ನಿತ್ಯಕರ್ಮಗಳನ್ನು ತೀರಿಸಿಕೊಳ್ಳ ಬೇಕಾದರೆ ಬೆಳಿಗ್ಗೆ ೪ ಗಂಟೆಗೆ ಎದ್ದು ಎರಡು ಕಿಲೋಮೀಟರ್ ಊರಹೊರಗೆ ಹೋಗಬೇಕು ಇಂತಹ ಪರಿಸ್ಥಿತಿ ಇದೆ. ದಯಮಾಡಿ ಅಲ್ಲಿಗೆ ೩೦-೪೦ ಪಬ್ಲಿಕ್ ಲೆಟ್ರಿನ್‌ಗಳನ್ನು ಕಕ್ಕಸುಗಳನ್ನು ತಕ್ಷಣ ಕಟ್ಟಿಸಿಕೊಡಲಿಕ್ಕೆ ವ್ಯವಸ್ಥೆ ಮಾಡಬೇಕು. ಮಾನ್ಯ ಧರ್ಮಸಿಂಗ್ ಅವರು ಹೇಳಿದಂತೆ ಗುಂಡೂರಾವ್ ಕಮಿಷನ್, ಫಾದರ್ ಜೇಕಬ್ ಕಮಿಷನ್, ಲಕ್ಷ್ಮಣರಾವ್ ಕಮಿಟಿಯು ವರದಿ ಎಲ್ಲವೂ ಏನಾದವು. ಸ್ವಾಯತ್ತ ಸಂಸ್ಥೆಗಳಿಗೆ ಯಾವ ರೀತಿ ಹಣವನ್ನು ಒದಗಿಸಿಕೊಡಬೇಕು ಎಂಬ ಬಗ್ಗೆ ಸಮಗ್ರವಾಗಿ ಅಭ್ಯಾಸ ಮಾಡಿ ವರದಿಯನ್ನು ಕೊಟ್ಟಿದ್ದಾರೆ. ಜವಾಹರ್ ರೋಜಗಾರ್ ಯೋಜನೆಯನ್ನು ಮಾದರಿಯಲ್ಲಿ ಕರ್ನಾಟಕದಲ್ಲಿ ಇಂಥ ಒಂದು ಯೋಜನೆಯನ್ನು ಜಾರಿಗೆ ತಂದು ಆ ಮೂಲಕ ಡೆವಲಪ್‌ಮೆಂಟ್ ಫಂಡ್ ಎಂದು ಮಾಡಿ ಎಲ್ಲಿ ೫೦,೦೦೦ ಕ್ಕಿಂತ ಜನಸಂಖ್ಯೆ ಹೆಚ್ಚು ಇರುತ್ತದೆ ಅಲ್ಲಿಗೆ ಸುಮಾರು ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟರೆ ಕೊಳಚೆ ಪ್ರದೇಶಗಳ ನಿವಾರಣೆಯಾಗುತ್ತದೆ. ಯಾದಗಿರಿಯಲ್ಲಿ ಒಳಚರಂಡಿ ವ್ಯವಸ್ಥೆಗೆ ಕೂಡ ಸುಮಾರು ೭ ಕೋಟಿ ರೂಪಾಯಿ ಖರ್ಚಾಗಬಹುದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಬಗ್ಗೆ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಳ್ಳ ಬೇಕೆಂದು ವಿನಂತಿಸುತ್ತಾ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಗೋಪಿನಾಥ ಆರ್ ಸಾಂಡ್ರ (ಹುಬ್ಬಳ್ಳಿ ಗ್ರಾಮಾಂತರ).—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಈ ಸದನದ ಮುಂದೆ ಮಾನ್ಯ ನರಸಿಂಹಮೂರ್ತಿಯವರು ತಮ್ಮ ಇಲಾಖೆಯ ಬೇಡಿಕೆಗಳನ್ನು ಇಟ್ಟಿದ್ದಾರೆ. ಇವುಗಳನ್ನು ನಾನು ಸ್ವಾಗತಿಸುತ್ತೇನೆ ಮತ್ತು ಕೆಲವೊಂದು ಸಲಹೆಗಳನ್ನು ಕೊಡ ಬೇಕೆಂದು ಇಚ್ಛಿಸುತ್ತೇನೆ.

ಮೊಟ್ಟಮೊದಲನೆಯದಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಾದಂಥ ಶ್ರೀಮಾನ್ ವೀರೇಂದ್ರ ಪಾಟೀಲರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ ಒಳ್ಳೆಯ ಹುರುಪಿನಿಂದ ಕಮಿಟೆಡ್ ಆಗಿ ಬಡವರ ದೀನದಲಿತರ ಸೇವೆಯನ್ನು ಮಾಡಬೇಕೆಂದು ಕಂಕಣಬದ್ಧರಾದಂಥ ಮಾನ್ಯ ನರಸಿಂಹಮೂರ್ತಿಯವರಿಗೆ ಈ ದೊಡ್ಡ ಖಾತೆಯನ್ನು ಕೊಟ್ಟು ನಮಗೆ ಉಪಕಾರ ಮಾಡಿದ್ದಾರೆ. ವಿಶೇಷವಾಗಿ ಕರ್ನಾಟಕ ರಾಜ್ಯದ ಮೂರನೇ ಒಂದು ಭಾಗದಷ್ಟು ಜನರು ನಗರ ಪಟ್ಟಣಗಳಲ್ಲಿರುತ್ತಾರೆ. ಅವರ ಯೋಗಕ್ಷೇಮವನ್ನು ನೋಡಿಕೊಳ್ಳತಕ್ಕ ಶಕ್ತಿ ಇರತಕ್ಕವರನ್ನು ನಮಗೆ ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಿದ್ದಾರೆ. ಇದಕ್ಕಾಗಿ ನಾನು ಅವರಿಗೆ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ.

ಈ ಖಾತೆ ಬಹಳ ದೊಡ್ಡದಾದ ಖಾತೆ. ಈ ಜನರ ಸೇವೆಯನ್ನು ಮಾಡಲು ಕಮಿಟೆಡ್ ಆಗಿರತಕ್ಕ ಅಧಿಕಾರಿಗಳು ಬೇಕು. ಇದಕ್ಕೆ ತಕ್ಕಂಥ ರೀತಿಯಲ್ಲಿ ನಮ್ಮ ಕಮಿಷನರ್‌ರವರಾದ ಶ್ರೀಮಾನ್ ಎಂ ಪಿ ಸಿಂಗ್‌ರವರನ್ನು ಈ ಖಾತೆಗೆ ವಿಶೇಷವಾಗಿಟ್ಟು ಅವರಿಂದ ಒಳ್ಳೆಯ ಸಲಹೆ ಮತ್ತು ಸೇವೆಯನ್ನು ತೆಗೆದುಕೊಳ್ಳುವುದಕ್ಕೆ ನಮಗೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಇದಕ್ಕೂ ಕೂಡ ನಾನು ಮಾನ್ಯ ವೀರೇಂದ್ರ ಪಾಟೀಲರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಪ್ರಪ್ರಥಮವಾಗಿ ನಾನು ಮಾನ್ಯ ನರಸಿಂಹಮೂರ್ತಿಯವರಿಗೆ ಅತ್ಯಂತ ಕಳಕಳಿಯಿಂದ ಪ್ರಾರ್ಥಿಸಿ ಕೊಳ್ಳುತ್ತೇನೆ. ನೀವು ಈ ದೊಡ್ಡ ಖಾತೆಯನ್ನು ವಹಿಸಿಕೊಂಡಿದ್ದೀರಿ. ಈ ಖಾತೆಗೆ ಬೇರೆ

ಬರಬೇಕು, ಗೌರವ ಬರಬೇಕು, ಜನರ ಸೇವೆಯಿಂದ ನೀವು ತೃಪ್ತರಾಗಬೇಕು, ನನ್ನ ಅನೇಕ ಹಿರಿಯ ಸಂಗಾತಿಗಳು ಈಗಾಗಲೇ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಅವರು ಹೇಳದೇ ಉಳಿದಿರತಕ್ಕ ಒಂದೆರಡು ಅಂಶಗಳನ್ನು ನಾನು ಇಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ, ಈ ಒಂದು ಖಾತೆಗೆ ೧೯೭೬ರಲ್ಲಿ ಕೆ. ಎಂ. ಸಿ. ಆ್ಯಕ್ಟನ್ನು ಜಾರಿಗೆ ತಂದರು. ಪ್ರಜಾಪ್ರಭುತ್ವದಲ್ಲಿ ಆಸ್ತೆ ಇದ್ದವರು, ನಿಷ್ಠೆ ಇದ್ದವರು ಈ ಆ್ಯಕ್ಟನ್ನು ನೋಡಿದರೆ ಎಲ್ಲ ಅಧಿಕಾರಗಳನ್ನೂ ಸರ್ಕಾರದವರೇ ಇಟ್ಟುಕೊಂಡಿದ್ದಾರೆ. ಬಹುಶ; ಅವತ್ತು ಈ ಆಕ್ಟನ್ನು ಮಾಡಿದಂಥ ಮಂತ್ರಿಗಳು ತಾವೇ ಖಾಯಂ ಆಗಿ ಮಂತ್ರಿಗಳಾಗಿರುತ್ತೇವೆಂಬ ಭ್ರಮೆಯಿಂದಲೋ , ಭರವಸೆಯಿಂದಲೋ ಏನೋ ಎಲ್ಲ ಅಧಿಕಾರಗಳನ್ನೂ ಕ್ರೋಢೀಕರಿಸಿ ತಮ್ಮ ಕಡೆಯೇ ಇಟ್ಟುಕೊಂಡಿದ್ದರು. ಆದರೆ ದುರ್ದೈವದಿಂದ ಅವರ ಆಸೆ ಈಡೇರಲಿಲ್ಲ. ಈ ಪ್ರಜಾಪ್ರಭುತ್ವವನ್ನು ಖಂಡಖಂಡವಾಗಿ ಮಾಡುವಂಥ ಈ ಆ್ಯಕ್ಟನ್ನು ತಾವು ಸ್ಕ್ರ್ಯಾಪ್ ಮಾಡಿ ಇನ್ನೊಂದು ಆ್ಯಕ್ಟನ್ನು ಮಾಡಿ, ಪ್ರಜೆಗಳಿಗೆ ಅಧಿಕಾರವನ್ನು ಕೊಡತಕ್ಕಂಥ ಆ್ಯಕ್ಟನ್ನು ಮಾಡಿ. ೧೯೭೬ರಲ್ಲಿ ನಾನು ಶಾಸಕ ಆಗಿದ್ದಾಗ ಹೇಳಿದ್ದೆ. ಎಪಿಎಂಸಿ ಆ್ಯಕ್ಟ್, ಬಾಂಬೆ ಮುನಿಸಿಪಲ್ ಕಾರ್ಪೊರೇಷನ್ ಆ್ಯಕ್ಟ್ ಇದೆ. ಅದು ಐಡಿಯಲ್ ಆ್ಯಕ್ಟ್ ಆಗಿದೆ. ಅವರಲ್ಲಿ ಪ್ರಜಾಪ್ರಭುತ್ವದ ಎಲ್ಲ ಇನ್ಗ್ರಿಡೆಂಟ್‌ಗಳೂ ಇವೆ, ಅದರಂತೆ ಇಲ್ಲಿ ನೀವೂ ಸಹ ಮಾಡಿಕೊಂಡು ಹೋಗಿ ಎಂದು ಹೇಳಿದ್ದೆ. ಆದ್ದರಿಂದ ನಾನು ಮತ್ತೊಮ್ಮೆ ಮಾನ್ಯ ಸಚಿವರಾದ ನರಸಿಂಹಮೂರ್ತಿಯವರಲ್ಲಿ ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಈ ಆ್ಯಕ್ಟನ್ನು ಸ್ಕ್ರ್ಯಾಪ್ ಮಾಡಿ. ಒಂದು ವೇಳೆ ಸ್ಕ್ರಾಪ್ ಮಾಡಲು ನಿಮಗೆ ಮನಸ್ಸಿಲ್ಲದಿದ್ದರೆ, ಇದಕ್ಕೆ ಸೂಕ್ತ ತಿದ್ದುಪಡಿಗಳನ್ನಾದರೂ ತಂದು ಈ ನಮ್ಮ ಪ್ರಜಾಪ್ರಭುತ್ವಕ್ಕೆ ಧಕ್ಕೆ ತರತಕ್ಕ ಕೆಲವು ಕಾಲಂಗಳೇನಿವೆ ಅವುಗಳನ್ನು ಕಿತ್ತುಹಾಕಿ ಪ್ರಜಾಪ್ರಭುತ್ವ ಯಶಸ್ವಿಯಾಗುವುದಕ್ಕೆ ಅವಕಾಶ ಮಾಡಿಕೊಡಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಮೂರನೇ ಒಂದು ಅಂಶದಷ್ಟು ಜನಸಂಖ್ಯೆ ನಮ್ಮ ಪಟ್ಟಣಗಳಲ್ಲಿರುತ್ತದೆ. ಅವರ ಯೋಗಕ್ಷೇಮವನ್ನು ನೋಡಿಕೊಳ್ಳತಕ್ಕದ್ದು ಈ ಸರ್ಕಾರದ ಕರ್ತವ್ಯ. ಯೋಗಕ್ಷೇಮ ಎಂದರೆ ನಾನೇನು ಬಹಳವಾಗಿ ಕೇಳುತ್ತಿಲ್ಲ. ಅಗತ್ಯವಾಗಿ ಬೇಕಾದ ಕುಡಿಯುವ ನೀರಿನ ವ್ಯವಸ್ಥೆಯನ್ನು ನೀವು ಮಾಡಬೇಕು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸಾಕಷ್ಟು ಹಣವನ್ನು ಕುಡಿಯುವ ನೀರಿಗೋಸ್ಕರ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟು ಕಳೆದ ೩-೪ ತಿಂಗಳಲ್ಲಿ ಬಹಳಷ್ಟು ಕೆಲಸವನ್ನು ಮಾಡಿದೆ. ನಾನಾದರೂ ಹುಬ್ಬಳ್ಳಿ-ಧಾರವಾಡ ಮಹಾ ನಗರಸಭೆಯ ಪರಿಯಿಂದ ಹೇಳುತ್ತಿದ್ದೇನೆ. ನಮ್ಮ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ೭.೫ ಕೋಟಿ ರೂಪಾಯಿಗಳನ್ನು ಮಲಪ್ರಭಾ ಎರಡನೇ ಯೋಜನೆಗೋಸ್ಕರ ಮೀಸಲಿಟ್ಟಿದೆ. ಅಲ್ಲದೆ ಈಗಾಗಲೇ ಆ ಹಣವನ್ನೂ ಕೂಡ ಬಿಡುಗಡೆ ಮಾಡಿದ್ದಾರೆ. ಆದರೆ ಹಿಂದಿನ ಸರ್ಕಾರ ಈ ಯೋಜನೆಗೆ ಸೂಕ್ತ ಪ್ರಾಶಸ್ತ್ಯವನ್ನು ಕೊಟ್ಟಿರಲಿಲ್ಲ. ಈಗ ೨೭ ಕುಡಿಯುವ ನೀರಿನ ಯೋಜನೆಗಳು ಇವೆ, ಆ ಪಟ್ಟಿಯಲ್ಲಿ ನಮ್ಮ ಹುಬ್ಬಳ್ಳಿ-ಧಾರವಾಡ ಮಹಾ ನಗರಸಭೆಯ ಹೆಸರೇ ಇರಲಿಲ್ಲ.

ಈ ಸರ್ಕಾರ ಬಂದ ಮೇಲೆ ನಾವು ಮೂವರು ಶಾಸಕರು ಒತ್ತಾಯಪಡಿಸಿದ ಮೇಲೆ ಕೇವಲ ಒಂದೂವರೆ ತಿಂಗಳಲ್ಲಿಯೇ ಈ ಮಲಪ್ರಭಾ ಎರಡನೆಯ ಯೋಜನೆಯನ್ನು ತಯಾರುಮಾಡಿ ಅದರ ಉದ್ಘಾಟನೆಯನ್ನೂ ಕೂಡ ಮಾಡಿದ್ದಾರೆ. ಅದಕ್ಕಾಗಿ ಮಾನ್ಯ ನರಸಿಂಹಮೂರ್ತಿಯವರನ್ನು ಮತ್ತು ಮಾನ್ಯ ಮುಖ್ಯಮಂತ್ರಿಗಳಾದ ವೀರೇಂದ್ರಪಾಟೀಲ್‌ರವರನ್ನು ನಾವು ನೆನಪಿಸಿಕೊಳ್ಳುತ್ತೇವೆ. ಮತ್ತು ಹುಬ್ಬಳ್ಳಿಯ ಜನತೆ ಬಹಳವಾಗಿ ಋಣಿಗಳಾಗಿದ್ದಾರೆ. ಮಲಪ್ರಭಾ ಎರಡನೆಯೋಜನೆ ಇನ್ನು ೧೫-೧೬ ತಿಂಗಳಲ್ಲಿಯೇ ತಾವು ಹಣವನ್ನು ಕೊಟ್ಟರೆ ಪೂರ್ತಿಯಾಗುವ ಸಂಭವವಿದೆ ಎಂದು ನಾವು ಭಾವಿಸುತ್ತೇವೆ. ಆದ್ದರಿಂದ ಇದಕ್ಕೆ ತಾವು ಹಣವನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕು. ಹಣವನ್ನು ಕೊಟ್ಟರೆ ಸಾಲದು ಅದಕ್ಕೆ ಬೆನ್ನು ಹತ್ತಿ ಕಮಿಟೆಡ್ ವರ್ಕರ್ಸ್‌ಅನ್ನು ನೇಮಿಸಿ ಯೋಜನೆ ಪೂರ್ತಿಯಾಗುವತ್ತ ಗಮನ ಹರಿಸಬೇಕೆಂದು ಹೇಳುತ್ತೇನೆ. ಅದನ್ನು ಮಾಡುತ್ತೀರೆಂಬ ವಿಶ್ವಾಸವನ್ನು ಇಟ್ಟುಕೊಂಡಿರುತ್ತೇವೆ

ಇದೇ ವಿಚಾರದಲ್ಲಿ ತಮಗೆ ಮತ್ತೊಂದು ಸಲಹೆ ಮಾಡುವುದೇನೆಂದರೆ, ಹುಬ್ಬಳಿಯ ಮಹಾ ನಗರದ ಜನತೆಗೆ ಕುಡಿಯುವ ನೀರಿನ ಅಭಾವ ಇನ್ನು ೫೦-೬೦ ವರ್ಷಗಳವರೆಗೆ ಆಗಕೂಡದು. ಅದಕ್ಕೆ ಮತ್ತೊಂದು ಯೋಜನೆಯನ್ನು ತಾವು ತೆಗೆದುಕೊಳ್ಳಬೇಕು. ಅದಕ್ಕಾಗಿ ಮಹದಾಯಿ ರಿವರ್ ನೀರನ್ನು ಡೈವರ್ಷನ್ ಮಾಡಿ ಮಲಪ್ರಭಾ ನೀರಿಗೆ ಕೂಡಿಸಿದರೆ ಹುಬ್ಬಳ್ಳಿ ಮಹಾ ನಗರಪಾಲಿಕೆ ಜನರಿಗೆ ಯಾವ ತೊಂದರೆಯೂ ಬರುವುದಿಲ್ಲ. ಅದೂ ಅಲ್ಲದೆ ಬೆಳಗಾವಂ ಮತ್ತು ಧಾರವಾಡ ಜಿಲ್ಲೆಯ ಸಾವಿರಾರು ಎಕರೆ ಜಮೀನಿಗೆ ನೀರನ್ನು ಕೂಡ ಒದಗಿಸಲು ಇದರಿಂದ ಸಾಧ್ಯವಾಗುತ್ತದೆ. ಅದಕ್ಕಾಗಿ ೬೦ ಕೋಟಿ ರೂಪಾಯಿಗಳ ರಫ್ ಎಸ್ಟಿಮೇಟ್ಸ್ ಕೂಡ ಮಾಡಿರುತ್ತಾರೆ. ಬಹುಶ: ಮಾನ್ಯ ನರಸಿಂಹಮೂರ್ತಿಯವರಿಗೆ ಈ ವಿಚಾರ ಗೊತ್ತಿರ ಬಹುದು. ಅದನ್ನು ಕಾರ್ಯರೂಪಕ್ಕೆ ತರತಕ್ಕಂಥ ಪ್ರಯತ್ನವನ್ನು

ಈಗಿನಿಂದಲೇ ಮಾಡಬೇಕೆಂದು ನಾನು ಅವರಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಹುಬ್ಬಳ್ಳಿ ಮಹಾನಗರ ಕಾರ್ಪೊರೇಷನ್ ಆದನಂತರ ಕಾರ್ಪೊರೇಷನ್‌ನಲ್ಲಿ ಕೆಲಸ ಮಾಡುವಂಥ ಜನ ಬೇರ್ಪಟ್ಟಿದ್ದಾರೆ. ವೆಸ್ಟೆಡ್ ಇಂಟರೆಸ್ಟ್ ಕೂಡ ಅಲ್ಲಿ ಆಗಿದೆ. ಈ ಕಾರ್ಪೊರೇಷನ್ ಆಕ್ಟ್ ಬಂದು ೧೨ ವರ್ಷಗಳೇ ಕಳೆದರೂ ಕೂಡ ಅಲ್ಲಿ ಸೀನಿಯರ್ ಇರತಕ್ಕಂಥ ಜನರ ಬಗ್ಗೆ ಸೀನಿಯಾರಿಟಿ ಲಿಸ್ಟ್ ಮಾಡಿಲ್ಲ. ಕಾಮನ್ ಕೇಡರ್ ಮಾಡಿ ಅಲ್ಲಿ ಎಂದು ನಾವು ಅನೇಕ ಸಲ ಒತ್ತಾಯ ಮಾಡಿ ಹೇಳಿದ್ದರೂ ಅದನ್ನೂ ಕೂಡ ಮಾಡಲಿಲ್ಲ. ತಾವಾದರೂ ಈ ಕೆಲಸ ಮಾಡುತ್ತೀರೆಂದು ತಿಳಿದು ಕೊಂಡಿರುತ್ತೇವೆ. ಇದರಿಂದ ಅಡ್ಮಿನಿಸ್ಟ್ರೇಷನ್ ಚುರುಕಾಗುತ್ತದೆಂದು ಹೇಳಬಯಸುತ್ತೇನೆ. ಇದನ್ನು ಮಾನ್ಯ ಮಂತ್ರಿಗಳು ಬಹುಶ: ಒಪ್ಪಿಕೊಳ್ಳುತ್ತಾರೆಂಬ ವಿಶ್ವಾಸ ನನಗಿದೆ.

ಇನ್ನು ಆರೋಗ್ಯವನ್ನು ಕಾಪಾಡಿಕೊಳ್ಳುವುದು ಬಹಳ ಮಹತ್ವವಾದ ವಿಚಾರವಾಗಿದೆ. ಹುಬ್ಬಳ್ಳಿ ಧಾರವಾಡ ಮಹಾನಗರ ಸಭೆಯ ವಿಚಾರದಲ್ಲಿ ಹೇಳಬೇಕಾದರೆ, ಅಲ್ಲಿಯ ಜನರನ್ನು ಆರೋಗ್ಯವಂತರನ್ನಾಗಿ ಮಾಡುವುದು ಕಾರ್ಪೊರೇಷನ್ ಅಥವಾ ವಸತಿ ಹಾಗೂ ನಗರಾಭಿವೃದ್ಧಿ ಖಾತೆಯ ಮಂತ್ರಿಗಳ ಕರ್ತವ್ಯ. ಅದಕ್ಕೆ ಬೇಕಾದಂಥ ಕಾರ್ಯಕ್ರಮಗಳನ್ನು ಹಾಕಿಕೊಂಡು ಅದನ್ನು ಮಾಡಬೇಕು. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಯಸುವುದೇನೆಂದರೆ, ಹುಬ್ಬಳ್ಳಿ ಧಾರವಾಡ ನಗರ ಪಾಲಿಕೆಯ ಪ್ರದೇಶದಲ್ಲಿ ಅನೇಕ ಕೊಳಚೇ ಪ್ರದೇಶಗಳು ಇರುತ್ತವೆ. ೧೯೭೪–೭೫ರಲ್ಲಿ ೫೭ ಸ್ಲಮ್ಸ್‌ಗಳನ್ನು ಗುರುತಿಸಿ ಅವುಗಳನ್ನು ಅಭಿವೃದ್ಧಿ ಪಡಿಸಬೇಕೆಂದು, ಇಂಪ್ರೂವ್‌ಮೆಂಟ್ ಮಾಡಬೇಕೆಂದು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೆವು. ಆದರೆ ಆ ಎಲ್ಲ ಕಾರ್ಯಕ್ರಮಗಳು ಕಾಗದದ ಮೇಲೆಯೇ ಉಳಿಯಿತು. ಸಾಕಷ್ಟು ಹಣ ಸಿಕ್ಕದೆ ಹೋದುದರಿಂದ ೫೭ರಲ್ಲಿ ಕೆಲವೊಂದನ್ನು ಸ್ಲಮ್ ಬೋರ್ಡ್‌ಗೆ ವಹಿಸಿ ಕೊಟ್ಟರು. ಕೆಲವೊಂದು ಸ್ಲಮ್ಸ್‌ಗಳನ್ನು ಕಾರ್ಪೊರೇಷನ್‌ಗೆ ವಹಿಸಿಕೊಟ್ಟರು. ಆಡಳಿತಾತ್ಮಕ ದೋಷದಿಂದ ಇಬ್ಬರೂ ಕೆಲಸ ಮಾಡಲಿಲ್ಲ. ಅಂದರೆ ಎಷ್ಟು ಕೆಲಸ ಮಾಡಬೇಕೆಂದು ನಿರೀಕ್ಷೆ ಇಟ್ಟುಕೊಂಡಿದ್ದರೋ ಅಷ್ಟು ಕೆಲಸವನ್ನು ಮಾಡಲಾಗಲಿಲ್ಲ. ಆದರಿಂದ ಈ ಕೆಲಸವನ್ನು ಸ್ಲಮ್ ಬೋರ್ಡ್‌ನವರಿಗೆ ವಹಿಸಿಕೊಡಿ ಇಲ್ಲವೇ ಕಾರ್ಪೊರೇಷನ್‌ನವರಿಗೆ ವಹಿಸಿಕೊಡಿ. ಈಗ ಇಬ್ಬರೂ ಸಹ ಸರಿಯಾಗಿ ಸ್ಲಮ್‌ಗಳ ಅಭಿವೃದ್ಧಿ ಕೆಲಸವನ್ನು ತೆಗೆದುಕೊಳ್ಳದೆ ಇದು ಗಂಡಹೆಂಡಿರಜಗಳದಂತಾಗಿದೆ. ಇದರಿಂದ ಜನರಿಗೆ ತೊಂದರೆ ಆಗಿದೆ. ಆದ್ದರಿಂದ ಇದನ್ನು ಸರಿ ಪಡಿಸಬೇಕೆಂದು ಹೇಳುತ್ತೇನೆ.

ಇನ್ನು ತಾವು ಅನೇಕ ಬೇಡಿಕೆಗಳಿಗೆ ಹಣವನ್ನು ಪೂರೈಸುತ್ತೀರಿ ಒಂದು ನಗರ ಇಲ್ಲವೇ ಪಟ್ಟಣ ಸುಧಾರಿಸಬೇಕಾದರೆ ಕುಡಿಯುವ ನೀರಿನ ಅವಶ್ಯಕತೆ ಬಹಳವಾಗಿರುತ್ತವೆ. ಅದರ ಜೊತೆಗೆ ಸರ್ಕಾರದವರು ರಸ್ತೆಗಳ ರಿಪೇರಿ ಕಾರ್ಯವನ್ನು ಕೂಡ ಮಾಡಬೇಕಾಗಿದೆ. ಇವತ್ತು ಎಲ್ಲಿ ಹೋದರೂ ಕೂಡ ಹುಬ್ಬಳ್ಳಿ ಧಾರವಾಡ ನಗರಗಳಲ್ಲಿ ಮೊಣಕಾಲು ಉದ್ದ ಹಳ್ಳಕೊಳ್ಳಗಳನ್ನು ಕಾಣುತ್ತೇವೆ. ಮುಂಜಾನೆ ಮಕ್ಕಳು ನಡೆಯುತ್ತಿರಬೇಕಾದರೆ ಬಿದ್ದು ಕೈಕಾಲುಗಳನ್ನು ಮುರಿದುಕೊಳ್ಳತಕ್ಕಂಥ ರೀತಿಯಲ್ಲಿ ರಸ್ತೆಗಳು ಇರುತ್ತವೆ. ಈಗ ರಸ್ತೆಗಳ ರಿಪೇರಿಗಾಗಿ ನೀವು ಕೊಟ್ಟತಕ್ಕಂಥ ಹಣ ಸಾಲದು. ಪ್ರತ್ಯೇಕವಾಗಿ ಸ್ಪೆಷಲ್ ಫಂಡ್‌ನ್ನು ಇದಕ್ಕಾಗಿ ಕೊಡಬೇಕೆಂದು ನಾವು ಈಗಾಗಲೇ ಮಾನ್ಯ ಅರ್ಥ ಮಂತ್ರಿಗಳನ್ನು ಮತ್ತು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಂಡಿದ್ದೇವೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಯೋಚನೆ ಮಾಡೋಣವೆಂದು ಹೇಳಿದ್ದಾರೆ. ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಮಾನ್ಯ ಮುಖ್ಯಮಂತ್ರಿಗಳಲ್ಲಿ ಈ ಬಗ್ಗೆ ಒತ್ತಾಯತಂದರೆ ಬಹುಶ: ಸಾಕಷ್ಟು ಹಣವನ್ನು ಇದಕ್ಕೆ ಮೀಸಲಿಡಬಹುದು. ಈ ಹಣದಿಂದ ಹುಬ್ಬಳ್ಳಿ ನಗರ ಪಾಲಿಕೆಯಲ್ಲಿ ಎಷ್ಟು ರಸ್ತೆಗಳು ಇರುತ್ತವೆಯೋ ಅಷ್ಟು ರಸ್ತೆಗಳ ರಿಪೇರಿ ಕಾರ್ಯವನ್ನು ಮಾಡುವುದರ ಜೊತೆಗೆ ಹೊಸ ರಸ್ತೆಗಳನ್ನು ಮಾಡುವಂಥ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ವಿಶೇಷವಾಗಿ ಸೊಳ್ಳೆಗಳ ಬಗ್ಗೆ ಹೇಳಬೇಕಾಗಿದೆ. ಸೊಳ್ಳೆಗಳು (ಮಸ್ಕಿಟೋಸ್) ಬೆಂಗಳೂರಿನಲ್ಲಿದೆಯೋ ಇದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ನಮ್ಮ ಮಹಾ ನಗರದಲ್ಲಿ ಇದರ ಕಾಟ ಸಾಕಷ್ಟಿದೆ. ಇದರಿಂದ ಬೇರೆ ಬೇರೆ ರೋಗಗಳು ಬರುತ್ತವೆ. ಹಿಂದೆ ಮಲೇರಿಯಾ ಎರಾಡಿಕೇಷನ್ ಸ್ಕೀಂ ಎಂದು ಬಂತು. ಆ ಸ್ಕೀಮಿಗೆ ಕೇಂದ್ರ ಸರ್ಕಾರದವರಿಂದ ಹಣ ಬಂತು. ಆ ಹಣವನ್ನು ಕೇವಲ ಬೆಂಗಳೂರು ನಗರದಲ್ಲಿ ಬಳಸಿಕೊಳ್ಳಲಾಯಿತು. ಉಳಿದ ಕಡೆಗೆ ಒಂದು ನಯಾಪೈಸೆಯನ್ನೂ ಬಳಸಲಿಲ್ಲ. ನಿಮ್ಮ ಖಾತೆಯವರು ಬೆಂಗಳೂರು ನಗರಕೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿದ್ದಾರೆ. ಅದರ ಬಗ್ಗೆ ನಾನು ಅಂಕಿಸಂಖ್ಯೆಗಳನ್ನು ಹೇಳಬಲ್ಲೆ. ಬೆಂಗಳೂರಲ್ಲದೆ ಇನ್ನೂ ಐದು ಮಹಾನಗರಗಳಿವೆ, ಅನೇಕ ಪಟ್ಟಣಗಳಿವೆ. ಅವುಗಳ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು. ಹೆಚ್ಚಿನ ಹಣ ಅಲ್ಲಿಗೆ ಕೊಡಿ ಎಂದು ಹೇಳದಿದ್ದರೂ ಪ್ರೊಪೋರ್ಷನೇಟಾಗಿ ಕೊಡಿ ಎಂದು ಹೇಳುತ್ತಿದ್ದೇನೆ. ಆದರೆ ಈಗ ಬೆಂಗಳೂರಿನವರಿಗೇ ಸಿಂಹಪಾಲು ಹೋಗುತ್ತಿದೆ ಈ ತಾರತಮ್ಯ ತೆಗೆದುಹಾಕುವಂತಹ ಪ್ರಯತ್ನವನ್ನು ತಾವು ಮಾಡುತ್ತೀರಿ ಎಂಬ ನಂಬಿಕೆ ನನಗಿದೆ.

ಇನ್ನು ನಿವೇಶನರಹಿತರಿಗೆ ನಿವೇಶನ ಕೊಡುತ್ತೇವೆಂದು ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ನಮ್ಮ ಪಕ್ಷದವರು ಮಾತ್ರವಲ್ಲದೆ ಎಲ್ಲ ರಾಜಕೀಯ ಪಕ್ಷಗಳವರೂ ಹೇಳಿದ್ದಾರೆ. ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ನಾವು ಪ್ರಯತ್ನ ಮಾಡಬೇಕು. ಅದಕ್ಕಾಗಿ ವಿಶೇಷ ಕಾರ್ಯಕ್ರಮ ಹಾಕಿಕೊಳ್ಳಬೇಕು. ಹುಬ್ಬಳ್ಳಿ ಧಾರವಾಡ ಮಟ್ಟಿಗೆ ಹೇಳುವುದಾದರೆ ಕಾಂಗ್ರೆಸ್ ಕಮಿಟಿಯಿಂದ ನಾವು ಸರ್ವೆ ಮಾಡಿದ್ದೇವೆ. [illegible] ಸಾವಿರ ನಿವೇಶನಗಳು ನಮಗೆ ಬೇಕಾಗಿದೆ. ಇದನ್ನು ಹೇಗೆ ಕಾರ್ಯರೂಪದಲ್ಲಿ ತರಬೇಕು ಎಂಬುದನ್ನು ತತ್ವಶಃ ಒಪ್ಪಿಕೊಂಡಿದ್ದೇವೆ. ನಿವೇಶನರಹಿತರಿಗೆ ನಿವೇಶನ ಕೊಡುವುದು ನಮ್ಮ ಆದ್ಯ ಕರ್ತವ್ಯ ಆಗಬೇಕು. ಅದರಲ್ಲೂ ಏಕನಾಮಿಕಲಿ ವೀಕರ್ ಸೆಕ್ಷನ್‌ನವರಿಗೆ ರಕ್ಷಣೆ ಕೊಡುತ್ತೇವೆಂಬ ಭರವಸೆಯನ್ನು ಕೊಟ್ಟಿದ್ದೇವೆ. ಇದನ್ನು ಈಡೇರಿಸುವುದಕ್ಕೆ ವಿಶೇಷ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳಬೇಕೆಂದು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ಆಕ್ಟ್ರಾಯಿ ತೆಗೆದಿದ್ದರಿಂದ ಕಾರ್ಪೊರೇಷನ್ನಾಗಲೀ, ಮುನಿಸಿಪಾಲಿಟಿಯಾಗಲೀ ತ್ವರಿತಗತಿಯಿಂದ ಕೆಲಸ ಮಾಡುವುದಕ್ಕೆ ಆಗದೆ ಅವುಗಳ ಪ್ರಗತಿ ಕುಂಠಿತವಾಗುತ್ತಿದೆ. ಈ ಸಮಸ್ಯೆ ನಮ್ಮ ರಾಜ್ಯದ ಮಟ್ಟಿಗೆ ಮಾತ್ರವಲ್ಲ ಇಡೀ ದೇಶದ ಸಮಸ್ಯೆ ಆಗಿದೆ. ಬಹಳ ತೊಂದರೆಯಾಗಿದೆ ಈ ಸಂಸ್ಥೆಗಳಿಗೆ ಸಕಾಲಕ್ಕೆ ಸಾಕಷ್ಟು ಹಣ ಬರದೇ ಹೋಗಿದ್ದರಿಂದ ಇವುಗಳ ಪ್ರಗತಿ ಕುಂಠಿತವಾಗಿದೆ, ತಾವು ಆಕ್ಟ್ರಾಯ್ ಕಾಂಪೆನ್‌ಸೇಷನ್ ಕೊಡುತ್ತಿದ್ದೇವೆಂದು ಹೇಳಬಹುದು. ಆದರೆ ಈಗ ಕೊಡುತ್ತಿರುವ ಕಾಂಪೆನ್‌ಸೇಷನ್‌ಗಿಂತ ಮೂರು ನಾಲ್ಕು ಪಟ್ಟು ಹಣ ಆಕ್ಟ್ರಾಯಿಯಿಂದ ಬರುತ್ತಿತ್ತು. ಆಯಿತು, ಪರಿಹಾರ ಕೊಟ್ಟಿದ್ದೀರಿ. ಆದರೆ ಯಾವಾಗ ಕೊಟ್ಟಿದ್ದೀರಿ ? ಸಕಾಲದಲ್ಲಿ ಕೊಟ್ಟಿಲ್ಲ. ಹಂತಹಂತವಾಗಿ ಅಂದರೆ ಮೂರು ತಿಂಗಳಿಗೊಮ್ಮೆ ಕೊಡುವ ವ್ಯವಸ್ಥೆ ಮಾಡಬೇಕು. ಸಕಾಲಕ್ಕೆ ಹಣ ಬಿಡುಗಡೆ ಮಾಡಬೇಕು. ಒಂದನೇ ಟರ್ಮಿನ ಹಣವನ್ನು ಎರಡನೇ ಟರ್ಮಿನಲ್ಲಿ ಕೊಡುವ ವ್ಯವಸ್ಥೆ ಇದೆ. ಅದರ ಬದಲು ಯಾವ ತಿಂಗಳಲ್ಲಿ ಕೊಡಬೇಕೋ ಆ ತಿಂಗಳಲ್ಲಿ ಕೊಡುವ ವ್ಯವಸ್ಥೆಯನ್ನು ನೀವು ಮಾಡಬೇಕು. ಸರ್ಕಾರದವರು ಕೊಡುವಂಥ ಸಹಾಯಧನ, ಸಬ್ಸಿಡಿ, ಬೇರೆ ಬೇರೆ ಡೆವಲಪ್‌ಮೆಂಟ್ ಗ್ರ್ಯಾಂಟ್‌ಗಳನ್ನು ಸರ್ಕಾರ ಬಿಡುಗಡೆ ಮಾಡಿದ ತಕ್ಷಣ ಕಾರ್ಪೊರೇಷನ್‌ಗಳಿಗೆ ಮುನಿಸಿಪಾಲಿಟಿಗಳಿಗೆ ಮುಟ್ಟುವ ವ್ಯವಸ್ಥೆ ಮಾಡಬೇಕು. ಇಷ್ಟು ದಿವಸ ಹಣದ ಕೊರತೆ ಇದೆ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಿರಿ. ಸುದೈವದಿಂದ ಈಗ ನಮ್ಮ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಿದೆ. ಆದ್ದರಿಂದ ಆರ್ಥಿಕ ಸಮಸ್ಯೆ ಅಡ್ಡ ಬರುವುದಿಲ್ಲ. ಆದ್ದರಿಂದ ನಾನು...

ಶ್ರೀ ಆರ್. ವಿ. ದೇಶಪಾಂಡೆ.—ಆರ್ಥಿಕ ಪರಿಸ್ಥಿತಿ ಸುಧಾರಿಸಿದ್ದರೆ ಸಂತೋಷ. ಆದರೆ ಹಣಕಾಸಿನ ಮಂತ್ರಿಗಳನ್ನು ಕೇಳಿ ನಾಲ್ಕು ತಿಂಗಳಿಂದ ಎಲ್. ಒ. ಸಿ. ಕೊಟ್ಟಿಲ್ಲ.

ಶ್ರೀ ಗೋಪಿನಾಥ ಆರ್. ಸಾಂಡ್ರಾ.—ನಿಮ್ಮ ತಪ್ಪು ಕಲ್ಪನೆ ಅದು. ಕಾರ್ಪೊರೇಷನ್‌ನವರಿಗೆ ಪಿ. ಡಬ್ಲ್ಯು. ಡಿ. ನವರಿಗೆ ಹಣ ಇಲ್ಲ ಎಂದು ಹೇಳುವುದಿಲ್ಲ. ಇನ್ನೂ ಹೆಚ್ಚಿಗೆ ಕೊಡುತ್ತೇನೆಂದು ಅರ್ಥ ಮಂತ್ರಿಗಳು ಹೇಳಿದಾಗ ಚೀಫ್ ಇಂಜನಿಯರ್‌ರವರು ತಮಗೆ ಬೇಕಾದಾಗ ಕೇಳುತ್ತೇವೆಂದು ಹೇಳಿದ್ದನ್ನು ನಾನು ಕೇಳಿದ್ದೇನೆ.

ನಿಮ್ಮ ಸರ್ಕಾರ ಇದ್ದಾಗ ಹಣದ ಕೊರತೆ ಇತ್ತು ನಿಜ. ಆದರೆ ಈಗ ನಮ್ಮ ಸರ್ಕಾರ ಬಂದ ಮೇಲೆ ಹಣದ ಕೊರತೆ ಇಲ್ಲ ಎಂದು ತಮಗೆ ಖಚಿತಪಡಿಸುತ್ತೇವೆ. ಈಗ ಗ್ರ್ಯಾಂಟ್ಸ್ ಮತ್ತು ಸಬ್ಸಿಡಿ ಏನು ಕೊಡುತ್ತೀರಿ ಅದರ ಬಗ್ಗೆ ಒಂದು ಸಲಹೆ ಮಾಡುತ್ತೇನೆ. ಈ ಹಣವನ್ನು ಸಕಾಲದಲ್ಲಿ ಅವರಿಗೆ ತಲುಪುವ ಹಾಗೆ ನೋಡಿಕೊಳ್ಳಬೇಕು. ಮಾರ್ಚಿ ೩೧ನೇ ತಾರೀಖು ಅನೇಕ ಗ್ರ್ಯಾಂಟ್, ಸಬ್ಸಿಡಿ, ಡೆವಲಪ್‌ಮೆಂಟ್ ಗ್ರ್ಯಾಂಟ್ ರಿಲೀಸ್ ಮಾಡಿದರು. ಆದರೆ ನಿನ್ನೆಯವರೆಗೂ ಆ ಗ್ರ್ಯಾಂಟ್ ರಿಲೀಸ್ ಆಗಿದ್ದರೂ ಕೂಡಾ ಡೈರೆಕ್ಟರೇಟ್‌ನವರು ಹಣವನ್ನು ಕೊಟ್ಟಿರುವುದಿಲ್ಲ. ನಿನ್ನೆ ಮೊನ್ನೆ ಕೊಟ್ಟಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಇಂತಹದು ಆಗದೇ ಇರುವ ಹಾಗೆ ನೋಡಿಕೊಳ್ಳಬೇಕು. ಇದು ಸಕಾಲದಲ್ಲಿ ಮುಟ್ಟುವ ವ್ಯವಸ್ಥೆಯನ್ನು ನೀವು ಮಾಡಿ ಎಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಈಗಾಗಲೇ ನನಗೆ ತಿಳಿದಮಟ್ಟಿದ ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ಜನತೆಯ ಮೇಲೆ ಹೆಚ್ಚಿನ ಕರಬಾರ ಬಿದ್ದಿದೆ. ಇದನ್ನು ಇನ್ನೂ ಹೆಚ್ಚು ಮಾಡುವುದು ಸರಿಯಲ್ಲ. ಇನ್ನೂ ಹೆಚ್ಚು ಮಾಡುವ ಗೊಡವೆಗೆ ಹೋಗದೆ ಎಲ್ಲೆಲ್ಲಿ ಲೀಕೇಜ್ ಇದೆ ಅದನ್ನು ಗಟ್ಟಿ ಮಾಡಿದರೆ ಬಹುಶಃ ನಮಗೆ ಆರ್ಥಿಕ ತೊಂದರೆ ಬರುವುದಿಲ್ಲವೆಂದು ಹೇಳುತ್ತೇನೆ. ಮತ್ತೆ ಅನೇಕ ಕಾರ್ಯಕ್ರಮಗಳನ್ನು ತಾವು ಏನು ಹಾಕಿಕೊಂಡಿದ್ದೀರಿ ಅವುಗಳ ಬಗ್ಗೆ ಸಹಾಯ ಮಾಡಲು ಹುಡ್ಕೋದವರು, ಎಲ್.ಐ.ಸಿ. ದವರು ಹಾಗೂ ಬೇರೆ ಬೇರೆ ರಾಷ್ಟ್ರೀಕೃತ ಬ್ಯಾಂಕಿನವರು ಜೊತೆಗೆ ಅಂತರರಾಷ್ಟ್ರೀಯ ಹಣಕಾಸಿನ ಸಂಸ್ಥೆಯವರು ಕೂಡಾ ಮುಂದೆ ಬಂದಿದ್ದಾರೆ. ಇಂತಹವರಿಂದ ತಾವು ಸಹಾಯ ಪಡೆದುಕೊಳ್ಳಬೇಕೆಂದು ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಕಾರ್ಪೊರೇಷನ್ ಮತ್ತು

ಮುನಿಸಿಪಾಲಿಟಿಗಳಲ್ಲಿ ಲೆಕ್ಕ ತಪಾಸಣೆ ಕಳೆದ ೪-೫ ವರ್ಷಗಳಿಂದ ಆಗಿಲ್ಲ. ಪ್ರತಿವರ್ಷವೂ ಆಡಿಟ್ ಆಗುತ್ತಿಲ್ಲ. ಹುಬ್ಬಳ್ಳಿ-ಧಾರವಾಡ ಅಭಿವೃದ್ಧಿ ಪ್ರಾಧಿಕಾರದ ೧೯೭೬-೭೭ನೇ ಇಸವಿಯ ಆಡಿಟ್ ರಿಪೋರ್ಟ್ ೧೯೮೦ರಲ್ಲಿ ಆಗಿದ್ದು ಈಗ ಅದು ನಮ್ಮ ಕೈ ಸೇರಿದೆ. ಪ್ರತಿ ಪ್ರಾಧಿಕಾರದಲ್ಲೂ ಆಯಾ ವರ್ಷದ ಲೆಕ್ಕಪತ್ರ ತಪಾಸಣೆ ಆಯಾ ವರ್ಷವೇ ಆಗಬೇಕು ಒಂದು ವೇಳೆ ಹಾಗೆ ಮಾಡಲಾಗಿಲ್ಲದಿದ್ದರೆ ಅಂತಹ ಪ್ರಾಧಿಕಾರದವರ ಮೇಲೆ ಕಾರ್ಯಕ್ರಮ ತೆಗೆದುಕೊಂಡು ಅವರು ಸರಿಯಾದ ಮಾರ್ಗದಲ್ಲಿ ಹೋಗುವಂತೆ ದಾರಿ ತೋರಬೇಕೆಂದು ಹೇಳುತ್ತೇನೆ. ಇನ್ನು ಕಾರ್ಪೊರೇಷನ್ ಒಡೆತನಕ್ಕೆ ಒಳಪಟ್ಟ ಅನೇಕ ಭೂಮಿಗಳಿವೆ, ಆ ಭೂಮಿಯನ್ನು ವೈಯುಕ್ತಿಕವಾಗಿ ತಮಗೆ ಬೇಕಾದವರಿಗೆ ವಿಲೇವಾರಿ ಮಾಡುವಂತಹ ಒಂದು ವ್ಯವಸ್ಥೆ ಕಳೆದ ೫-೬ ವರ್ಷಗಳಿಂದ ನಡೆದುಕೊಂಡು ಬಂದಿದೆ. ಈ ವ್ಯವಸ್ಥೆಯನ್ನು ಮೊದಲು ತಡೆಯಬೇಕು, ಕಾರ್ಪೊರೇಷನ್ ಜಮೀನನ್ನು ಯಾರಿಗೂ ಕೊಡಬಾರದು. ಹಾಗೂ ಈ ಜಾಗವನ್ನು ಕಾರ್ಪೊರೇಷನ್ ಸ್ವತಃ ಉಪಯೋಗ ಮಾಡಿಕೊಳ್ಳಬೇಕೆಂದು ಮಾನ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ನಿವೇಶನ ರಹಿತರಿಗೆ ನಿವೇಶನ ಕೊಡುವುದು ನಮ್ಮ ಕರ್ತವ್ಯ. ಅದನ್ನು ನಾವು ಮಾಡಬೇಕು. ಈ ದಿಶೆಯಲ್ಲಿ ಕಾಯ್ದೆ ತಿದ್ದುಪಡಿ ಮಾಡಬೇಕಾಗುತ್ತದೆ. ಈ ಬಗ್ಗೆ ಮಾನ್ಯ ಧರ್ಮಸಿಂಗ್ ಅವರು ಏನು ಕೋರ್ಟ್ ಕೇಸ್‌ಗಳ ಬಗ್ಗೆ ಹೇಳಿದರು, ಅದು ನಿಜ ಇದೆ. ನಿವೇಶನಕ್ಕೆ ಜಾಗ ಅಕ್ವೈರ್ ಮಾಡಿದ ನಂತರ ಭೂಮಾಲೀಕರು ನ್ಯಾಯಾಲಯಕ್ಕೆ ಹೋಗುತ್ತಾರೆ. ಇಂತಹ ಪ್ರಸಂಗಗಳು ಹೆಚ್ಚು ಆಗದಂತೆ ಕಾಯ್ದೆಯಲ್ಲಿ ಯಾವ ರೀತಿ ತಿದ್ದುಪಡಿ ಮಾಡಬೇಕೋ ಅದನ್ನು ಮಾಡಿ ಈ ಕಾರ್ಯಕ್ರಮದ ಲಾಭ ಹೆಚ್ಚು ಜನರಿಗೆ ಸಿಗುವ ಹಾಗೆ ಮಾಡಬೇಕು. ಮತ್ತೆ ಲ್ಯಾಂಡ್ ಅಕ್ವೈರ್ ಮಾಡಿದ ಮೇಲೆ ಭೂಮಾಲೀಕರಿಗೆ ಯೋಗ್ಯವಾದ ಬೆಲೆಯನ್ನು ಕೊಡುವ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಭೂಮಾಲೀಕರಿಗೆ ಬಹಳ ತೊಂದರೆಯಾಗುತ್ತದೆ. ಇದು ಸರಿಯಲ್ಲ ಭೂಮಾಲೀಕರಿಗೆ ಸಕಾಲಕ್ಕೆ, ಯೋಗ್ಯ ಬೆಲೆ ಕೊಡುವ ವ್ಯವಸ್ಥೆ ಮಾಡಿದರೆ ಆದಷ್ಟು ಜಾಗ್ರತೆ ನಮ್ಮ ಕಾರ್ಯಕ್ರಮಗಳು ಜಾರಿಗೆ ಬರುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲವೆಂದು ನಾನು ಹೇಳುತ್ತೇನೆ.

೪-೪೫ ಪಿ.ಎಂ.

ಈ ಹೌಸಿಂಗ್ ಬೋರ್ಡ್ ಏನಿದೆ, ಅಲ್ಲಿ ಹಿಂದೆ ಲೋಪದೋಷಗಳು ಏನಿದ್ದವು ಎಂಬುದನ್ನು ಹೇಳುವುದಕ್ಕಿಂತ ಮುಂದೆ ಏನು ಮಾಡಬೇಕೆನ್ನುವ ಬಗ್ಗೆ ಇಲ್ಲಿ ಹೇಳಬಯಸುತ್ತೇನೆ. ಹೌಸಿಂಗ್ ಬೋರ್ಡ್ ಚುರುಕು ಆಗಬೇಕು. ಹೌಸಿಂಗ್ ಬೋರ್ಡ್‌ನವರು ಎಲ್ಲ ಕಡೆ ಮನೆಗಳನ್ನು ಕಟ್ಟುವ ಕಾರ್ಯಕ್ರಮಗಳನ್ನು ಹಾಕಿಕೊಂಡಿರುತ್ತಾರೆ. ಅವರು –೨-೫-೧೦ ಮನೆಗಳನ್ನು ಮಾಡಿ ಟೈಮ್ ಕಳೆಯುತ್ತಿದ್ದಾರೆ, ಅದನ್ನು ಮಾಡಬಾರದು. ಅವರು ಮನೆಗಳನ್ನು ಕಟ್ಟುವಾಗ ಎಂತಹ ದರ್ಜೆಯ ಮನೆಗಳನ್ನು ಕಟ್ಟುತ್ತಾರೆಂದರೆ ಕಳಪೆ ಮನೆಗಳನ್ನು ಕಟ್ಟುತ್ತಾರೆ. ಅಲ್ಲಿ ಉಪಯೋಗಿಸುವ ಇಟ್ಟಿಗೆ ಸರಿಯಿರುವುದಿಲ್ಲ, ಬಾಗಿಲು ಕಿಟಕಿಗಳು ಸರಿ ಇರುವುದಿಲ್ಲ. ಬಾಗಿಲು ಕಿಟಕಿಗಳಿಗೆ ಉಪಯೋಗಿಸತಕ್ಕ ಕಟ್ಟಿಗೆ ಸರಿ ಇರುವುದಿಲ್ಲ ಇವುಗಳನ್ನು ಹೇಳುತ್ತಾ ಹೋದರೆ ಅದು ಪೂರ್ತಿ ಇದೆ. ಹೌಸಿಂಗ್ ಕಾಲೋನಿಗಳ ಹತ್ತಿರ ಮಾನ್ಯ ಮಂತ್ರಿಗಳು ಹೋಗಿ ಅಲ್ಲಿ ವಾಸ ಮಾಡತಕ್ಕ ಜನರನ್ನು ಕೇಳಿರಿ, ಅವರು ಸರಿಯಾಗಿ ಉತ್ತರ ಕೊಡುತ್ತಾರೆ. ಇನ್ನು ಮುಂದೆ ಇಂತಹ ಲೋಪದೋಷಗಳು ಆಗದಂತೆ ನೀವು ಸೂಕ್ತ ಮಾರ್ಗದರ್ಶನ ನೀಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹೌಸಿಂಗ್ ಬೋರ್ಡ್‌ನವರು ಮನೆಗಳನ್ನು ಕಟ್ಟುತ್ತಾರೆ. ಅವರು ಅಲ್ಲಿ ರಸ್ತೆಗಳನ್ನು ಅರ್ಧಂಬರ್ಧ ಮಾಡುತ್ತಾರೆ. ಗಟಾರಗಳನ್ನು ಅರ್ಧಂಬರ್ಧ ಮಾಡುತ್ತಾರೆ. ಈ ರೀತಿ ಮಾಡುವುದರಿಂದ ಅಲ್ಲಿನ ನಿವಾಸಿಗಳಿಗೆ ಬಹಳ ತೊಂದರೆಯಾಗುತ್ತದೆ. ಅಲ್ಲಿನ ಜನರು ಕಾರ್ಪೊರೇಷನ್‌ನವರ ಹತ್ತಿರ ಹೋಗಿ ಮನೆಗಳನ್ನು ನಮ್ಮ ಸ್ವಾಧೀನಕ್ಕೆ ಕೊಡಿ ಎಂದು ಕೇಳಿದರೆ, ಕಾರ್ಪೊರೇಷನ್‌ನವರು ನಮಗೆ ಹೌಸಿಂಗ್ ಬೋರ್ಡ್‌ನವರು ಇನ್ನು ಚಾರ್ಜ್ ಕೊಟ್ಟಿಲ್ಲವೆಂದು ಹೇಳುತ್ತಾರೆ. ಹೌಸಿಂಗ್ ಬೋರ್ಡ್‌ನವರು ಅರ್ಧಂಬರ್ಧ ಮಾಡಿರತಕ್ಕ ಕೆಲಸಗಳನ್ನು ನಾವು ಏತಕ್ಕೆ ತಲೆಯ ಮೇಲೆ ಹಾಕಿಕೊಳ್ಳಬೇಕೆಂದು ಕಾರ್ಪೊರೇಷನ್‌ನವರು ಹೇಳುತ್ತಾರೆ. ಹೌಸಿಂಗ್ ಬೋರ್ಡ್‌ನವರು ಮನೆಗಳನ್ನು ಕಟ್ಟುವ ಕಡೆಗೆ ಎಲ್ಲ ರೀತಿಯ ವ್ಯವಸ್ಥೆಯನ್ನು ಸರಿಯಾಗಿ ಮಾಡಬೇಕೆಂದು ಅಧಿಕಾರಿಗಳಿಗೆ ಒತ್ತಾಯ ಮಾಡಬೇಕು. ಅಲ್ಲಿ ಸರಿಯಾದ ರಸ್ತೆ ಮಾಡಬೇಕು ಗಟಾರ ಮಾಡಬೇಕು, ಅಂಡರ್‌ಗ್ರೌಂಡ್ ಡ್ರೈನೇಜ್, ಮಾಡಬೇಕೆಂದು ಕಾಯಿದೆಯಲ್ಲಿದ್ದರೂ ಅವರು ಅರ್ಧಂಬರ್ಧ ಮಾಡುತ್ತಾರೆ, ಹಾಗೆಯೇ ಮನೆಗಳ ಪೊಸಿಷನ್ ಕೊಡುತ್ತಾರೆ. ಇದು ಸರಿಯಲ್ಲ. ಸಂಪೂರ್ಣವಾಗಿ ಎಲ್ಲ ಕೆಲಸಗಳನ್ನು ಮಾಡಿ ಕಾರ್ಪೊರೇಷನ್‌ನವರಿಗೆ ಹ್ಯಾಂಡ್‌ಓವರ್ ಮಾಡಿದರೆ ಅವರು ಮೆಂಟೇನೆನ್ಸ್ ಮಾಡುವುದಕ್ಕೆ ಸರಿಯಾಗುತ್ತದೆ. ಅರ್ಧಂಬರ್ಧ ಮಾಡಿ ಕೊಟ್ಟರೆ ಅದು ಸರಿಯಾಗುವುದಿಲ್ಲ. ಹುಬ್ಬಳ್ಳಿ-ಧಾರವಾಡದಲ್ಲಿ

ಇಂತಹ ಪರಿಸ್ಥಿತಿ ಇದೆ. ಹೌಸಿಂಗ್‌ಬೋರ್ಡ್ ಕಾಲೋನಿಗಳಲ್ಲಿ ಸರಿಯಾದ ರಸ್ತೆಯಿಲ್ಲ, ಗಟಾರ ಇಲ್ಲ ಒಳಚರಂಡಿ ವ್ಯವಸ್ಥೆ ಇಲ್ಲ, ಇದೆಲ್ಲವನ್ನು ಪುನಃ ಹೇಗೆ ಮಾಡುವುದೆಂದು ಮುಖ್ಯ ಅಭಿಯಂತರರು ಕೇಳುತ್ತಾರೆ. ಹೀಗೆ ಎಲ್ಲ ಕೆಲಸಗಳೂ ಯದ್ವಾತದ್ವ ನಡೆಯುತ್ತಿವೆ. ಅದರ ಬಗ್ಗೆ ತಾವು ಹೆಚ್ಚು ಗಮನ ಕೊಡಬೇಕು. ನಮಗೆ ಹಣದ ಕೊರತೆಯಿಲ್ಲ ನಾನು ಆಗಲೇ ಹೇಳಿದ್ದೇನೆ. ನೀವು ಮನಸ್ಸು ಮಾಡಿ ಹೆಚ್ಚು ಹೆಚ್ಚು ಕಾರ್ಯಕ್ರಮಗಳನ್ನು ಹಾಕಿಕೊಂಡು ನಿಮ್ಮ ೧ ಕೋಟಿ ೫೦ ಲಕ್ಷ ರೂಪಾಯಿಗಳ ಬೇಡಿಕೆಗಳು ಏನಿದೆ ಅದರ ಬಗ್ಗೆ ಕೆಲಸ ಮಾಡಲು ಹೆಚ್ಚು ಗಮನ ಹರಿಸಬೇಕು.

ಇನ್ನು ಕೊಳಚೆ ಪ್ರದೇಶಗಳ ಬಗ್ಗೆ ಹೇಳುವುದಾದರೆ, ಮೊದಲು ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿ ಕೊಳಚೆ ಪ್ರದೇಶಗಳು ೫೭ ಇದ್ದವು. ಈಗ ಮತ್ತೆ ೩೦-೩೫ ಕೊಳಚೆ ಪ್ರದೇಶಗಳು ಹುಟ್ಟಿಕೊಂಡಿವೆ. ಅಲ್ಲಿ ವಾಸ ಮಾಡತಕ್ಕ ಜನರಿಗೆ ಅನುಕೂಲಗಳನ್ನು ಮಾಡಿಕೊಡುವುದು ನಿಮ್ಮ ಖಾತೆಯ ಜವಾಬ್ದಾರಿ ಆಗಿದೆ. ಅವರಿಗೆ ಬೇರೇನು ಅನುಕೂಲ ಬೇಡ. ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಿ. ಬೀದಿ ದೀಪದ ವ್ಯವಸ್ಥೆ ಮಾಡಿಕೊಡಿ. ಗಟಾರ ಮತ್ತು ರಸ್ತೆ ವ್ಯವಸ್ಥೆಯನ್ನು ಮಾಡಲಿಕ್ಕೇಬೇಕು. ಅವರು ಇಲ್‌ಲೀಗಲ್ ಆಗಿ ಕಟ್ಟಡ ಕಟ್ಟಿರುತ್ತಾರೆಂದು ಹೇಳಿ ನೀವು ನಿಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಬೇಡಿ. ಈ ಜನರು ಕೂಡ ಸಾವಿರಾರು ಸಂಖ್ಯೆಯಲ್ಲಿದ್ದಾರೆ. ಅವರೆಲ್ಲರು ಬಡವರು ಇದ್ದಾರೆ, ದೀನದಲಿತರು ಇದ್ದಾರೆ ಹರಿಜನರಿದ್ದಾರೆ. ಏನೋ ಯಾವುದೋ ಕಾರಣದಿಂದ ಅಲ್ಲಿ ಮನೆಗಳನ್ನು ಕಟ್ಟಿಕೊಂಡು ೧೦-೧೫ ವರ್ಷಗಳಿಂದ ಅಲ್ಲಿದ್ದಾರೆ. ಅವರಿಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ದೀಪ ಇಲ್ಲ, ರಸ್ತೆ ಇಲ್ಲ, ಕಾರಾಗೃಹದಲ್ಲಿ ವಾಸ ಮಾಡುವ ರೀತಿಯಲ್ಲಿ ದಟ್ಟ ಅರಣ್ಯ ಪ್ರದೇಶದಲ್ಲಿ ವಾಸ ಮಾಡುವ ಹಾಗೆ ಅವರು ವಾಸ ಮಾಡುತ್ತಿದ್ದಾರೆ. ಅದನ್ನು ಸುಧಾರಿಸಬೇಕೆಂದು ಹೇಳುತ್ತೇನೆ. ಇಲ್‌ಲೀಗಲ್ ಕನ್ಸ್ಟ್ರಕ್ಷನ್ ಮಾಡಿರುವುದರಿಂದ ರಸ್ತೆ ಮಾಡುವುದಕ್ಕೆ ಬರುವುದಿಲ್ಲ, ಗಟಾರ ಮಾಡುವುದಕ್ಕೆ ಬರುವುದಿಲ್ಲ ದೀಪದ ವ್ಯವಸ್ಥೆ ಮಾಡುವುದಕ್ಕೆ ಬರುವುದಿಲ್ಲವೆಂದು ಕಾರ್ಪೊರೇಷನ್ ಕಮಿಷನರ್‌ರವರು ಹೇಳುತ್ತಾರೆ. ಇವುಗಳ ಬಗ್ಗೆ ನೀವು ಹೆಚ್ಚಿನ ಮುತುವರ್ಜಿಯನ್ನು ವಹಿಸಿ ಕೊನೆಯ ಪಕ್ಷ ಕುಡಿಯುವ ನೀರು, ರಸ್ತೆ, ದೀಪ ಇವುಗಳನ್ನಾದರೂ ಒದಗಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕಾರ್ಪೊರೇಷನ್‌ನಲ್ಲಿ ಬಿಲ್ಡಿಂಗ್ ಕಟ್ಟಲಿಕ್ಕೆ ಪರ್ಮಿಷನ್ ತೆಗೆದುಕೊಳ್ಳಬೇಕಾದರೆ ಮೊದಲನೆ ಹಂತವಾಗಿ ಕಾರ್ಪೊರೇಷನ್‌ನಿಂದ ಡೆವಲಪಮೆಂಟ್ ಅಥಾರಿಟಿಗೆ ಹೋಗಬೇಕು ನಂತರ ಡೆವಲಪ್‌ಮೆಂಟ್ ಅಥಾರಿಟಿಯಿಂದ ಕಾರ್ಪೊರೇಷನ್‌ಗೆ ಬರಬೇಕು. ಇದು ಎರಡು ಹಂತ ಆಗುತ್ತದೆ. ಎರಡು ಕಡೆ ಓಡಾಟಗಳಿಂದ ಜನರು ಮನೆ ಕಟ್ಟುವುದೇ ಬೇಡವೆನ್ನುವ ಪರಿಸ್ಥಿತಿಗೆ ಬಂದಿದ್ದಾರೆ. ಆದ್ದರಿಂದ ಸಿಂಗಲ್ ಏಜೆನ್ಸಿ ಮಾಡಬೇಕು. ಬೇರೆ ಕಡೆ ಏನಿದೆಯೋ ನನಗೆ ಗೊತ್ತಿಲ್ಲ. ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ನೀರು ಸರಬರಾಜು ಮಾಡುವವರು ಕರ್ನಾಟಕ ಅರ್ಬನ್ ವಾಟರ್‌ಸಪ್ಲೈ ಬೋರ್ಡ್‌ನವರು, ಅದನ್ನು ಹಂಚಿಕೆ ಮಾಡುವವರು ಕಾರ್ಪೊರೇಷನ್‌ರವರು. ಈ ರೀತಿ ಬೇರೆ ಬೇರೆ ಏಜೆನ್ಸಿಗಳು ಇರುವುದರಿಂದ ಜನರಿಗೆ ಫಾಸಿಯಾಗುತ್ತದೆ. ಕಾರ್ಪೊರೇಷನ್‌ರವರ ಹತ್ತಿರ ಹೋದರೆ ಕೆಯುಡಬ್ಲ್ಯುಎಸ್ ಕಡೆಗೆ ಹೋಗಿ ಎಂದು ಹೇಳುತ್ತಾರೆ. ಕೆಯುಡಬ್ಲ್ಯುಎಸ್ ಅವರ ಹತ್ತಿರ ಹೋದರೆ ಕಾರ್ಪೊರೇಷನ್‌ರವರ ಹತ್ತಿರ ಹೋಗಿಯೆಂದು ಹೇಳುತ್ತಾರೆ.

ಹೀಗೆ ಅಲ್ಲಿ ಜನರನ್ನು ಇತ್ತ ಕಡೆಗೆ ಅತ್ತ ಕಡೆಗೆ ಓಡಾಡಿಸುವ ಪದ್ಧತಿ ಏನಿದೆ, ಅದನ್ನು ತಪ್ಪಿಸಿ ಸಿಂಗಲ್ ಏಜೆನ್ಸಿ ಮಾಡಬೇಕು. ಒಬ್ಬರಿಗೇ ಇದರ ಜವಾಬ್ದಾರಿಯನ್ನು ಕೊಡಬೇಕೆಂದು ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಆ ಮೇಲೆ ನಮ್ಮಲ್ಲಿ ಕೆಲವೊಂದು ಅನಧಿಕೃತವಾದ ಜೋಪಡಿಗಳು ಸ್ಲಮ್‌ಗಳು ತಲೆಯೆತ್ತಿವೆ. ಈ ಸ್ಲಮ್‌ಗಳನ್ನು ರೆಗ್ಯುಲರೈಸ್ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಇದನ್ನು ಆದಷ್ಟು ಬೇಗ ಮಾಡಿದರೆ ಒಳ್ಳೆಯದು. ನಾನು ಪುನಃ ಮಾನ್ಯ ಮುಖ್ಯ ಮಂತ್ರಿಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ. ಸಾವಿರಾರು ಇಂತಹ ಜೋಪಡಿಗಳನ್ನು ಬುಲ್‌ಡೋಜರ್ ಮೂಲಕ ಕೆಡವಬೇಕೆಂದು ಕೆಲವು ಅಧಿಕಾರಿಗಳು ಪ್ರಯತ್ನ ಮಾಡಿದರು. ಅದನ್ನು ತಪ್ಪಿಸಲಿಕ್ಕೆ ಮುಖ್ಯ ಮಂತ್ರಿಗಳ ಮೊರೆ ಹೊಕ್ಕಿದ್ದಕ್ಕೆ ತಡೆಯಾಜ್ಞೆ ಕೊಟ್ಟಿದ್ದಾರೆ. ಅದನ್ನು ಕೊಟ್ಟು ಮೂರು-ನಾಲ್ಕು ತಿಂಗಳಾಯಿತು. ಮತ್ತೆ ಯಾರಾದರೂ ಅಧಿಕಾರಿ ಬಂದು ಏನಾದರೂ ಮಾಡುವ ಸಂಭವ ಇರುವುದರಿಂದ ಆದಷ್ಟು ಬೇಗ ಇದನ್ನು ರೆಗ್ಯುಲರೈಸ್ ಮಾಡಬೇಕು. ಈಗಾಗಲೇ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಬಜೆಟ್ ಭಾಷಣದಲ್ಲಿಕೂಡ ಹೇಳಿದ್ದೀರಿ ಆದ್ದರಿಂದ ಇದನ್ನು ಆದಷ್ಟು ಮಟ್ಟಿಗೆ ಕಾರ್ಯಗತ ಮಾಡಬೇಕೆಂದು ನಾನು ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತೊಂದು ಮಹತ್ವದ ವಿಷಯ ಏನೆಂದರೆ ಈ ಸ್ಲಮ್‌ಗಳಲ್ಲಿ ವಾಸಮಾಡುತ್ತಿರುವಂಥ ಜನ ಬಡ ಜನರು. ಅವರು ತಮ್ಮ ರೋಗ ರುಜಿನಗಳಿಗೆ ಪಟ್ಟಣಕ್ಕೆ ಬಂದು ಔಷಧಿ ತೆಗೆದುಕೊಳ್ಳುವಂಥ ಶಕ್ತಿ ಸಾಮರ್ಥ್ಯ

ಅವರಿಗೆ ಇರುವುದಿಲ್ಲ. ಆದ್ದರಿಂದ ಮೊಬೈಲ್ ಆಸ್ಪತ್ರೆ ಆಗಬೇಕು ಮತ್ತು ಇದನ್ನು ಕಾರ್ಪೊರೇಷನ್‌ನವರೇ ಮಾಡಬೇಕು. ಈ ಸ್ಲಮ್‌ಗಳಲ್ಲಿ ವಾಸಮಾಡುವ ಜನರ ರೋಗರುಜಿನಗಳಿಗೆ ಔಷಧ ಕೊಡಲು ಮೊಬೈಲ್ ಆಸ್ಪತ್ರೆಯನ್ನು ಕಾರ್ಪೊರೇಷನ್‌ನವರು ವ್ಯವಸ್ಥೆ ಮಾಡಬೇಕು. ಇಲ್ಲದೇ ಹೋದರೆ ಈ ಜೋಪಡಿಗಳು ಊರ ಹೊರಗೆ ಇರುತ್ತವೆ. ಮಕ್ಕಳಿಗೆ ಏನಾದರೂ ಅನಾರೋಗ್ಯ ಸಂಭವಿಸಿದರೆ, ಅವರ ಕಣ್ಣಿಗೆ ಕಬ್ಬಿಣದ ಚೂರು ಇತ್ಯಾದಿ ಬಿದ್ದರೆ ಅವರಿಗೆ ಕೂಡಲೇ ಚಿಕಿತ್ಸೆ ದೊರೆಯುವುದಿಲ್ಲ. ಬಸ್ಸಿನಲ್ಲಿ ಬರಲು ಅವರಲ್ಲಿ ಹಣ ಇರುವುದಿಲ್ಲ. ಅವರೂ ಉದಾಸೀನ ಮಾಡಿದರೆ ಮಕ್ಕಳು ಕಣ್ಣು ಕಳೆದುಕೊಳ್ಳುತ್ತಾರೆ, ಕಾಲಿಗೆ ಏಟಾದರೆ ಕಾಲು ಕಳೆದುಕೊಳ್ಳುತ್ತಾರೆ. ಸ್ಲಮ್‌ಗಳು ಊರ ಹೊರಗೆ ಇರುವುದರಿಂದ ಅವರು ಬಸ್ಸು ಹಿಡಿದು ಬರಬೇಕಾದರೆ ಒಂದೆರಡು ರೂಪಾಯಿ ಇದಕ್ಕಾಗಿಯೇ ಖರ್ಚು ಮಾಡಬೇಕಾಗುತ್ತದೆ. ಇದನ್ನು ದೂರ ಮಾಡಲಿಕ್ಕೆ ಮೊಬೈಲ್ ಆಸ್ಪತ್ರೆ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈ ಸೈಟುಗಳನ್ನು ಅಲಾಟ್‌ಮೆಂಟ್ ಮಾಡುವಾಗಲೂ ಹೆಚ್ಚಿನ ಮುತುವರ್ಜಿ ವಹಿಸಿ ಮಾಡಬೇಕು. ಸರಿಯಾಗಿ ವಿತರಣೆ ಮಾಡುವಂಥ ವ್ಯವಸ್ಥೆ ಮಾಡಬೇಕು. ಸ್ಲಮ್‌ಗಳಲ್ಲಿ ಏನು ಜನ ಇರುತ್ತಾರೆ, ಅವರಿಗೆ ಮೊದಲು ಕೊಡಬೇಕು. ಬೇರೆ ಜನರಿಗೆ ಅವಕಾಶ ಕೊಡಬಾರದು. ಒಂದು ವೇಳೆ ಬೇರೆ ಜನರು ಸ್ಥಿತಿವಂತರು ಯಾರಾದರು ಇದ್ದರೆ ಅವರನ್ನು ಹೊರಗೆ ಹಾಕುವಂಥ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಡೆವಲಪ್‌ಮೆಂಟ್ ಅಥಾರಿಟಿ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ಹುಬ್ಬಳ್ಳಿ-ಧಾರವಾಡಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಇಲ್ಲಿ ದುಡ್ಡು ತೆಗೆದುಕೊಳ್ಳುವಂಥ ಒಂದು ವ್ಯವಸ್ಥೆ ಇದೆ. ಬ್ಯಾಂಕಲ್ಲಿ ದುಡ್ಡು ಇರುತ್ತಾರೆ, ೮-೧೦ ಲಕ್ಷ ರೂಪಾಯಿ ಬಡ್ಡಿ ಬರುತ್ತದೆ. ಅದರಿಂದ ಕೆಲಸ ಮಾಡಿಕೊಂಡಿದ್ದಾರೆ, ಯಾವುದೇ ಒಳ್ಳೆಯ ಕಾರ್ಯಕ್ರಮವನ್ನು ಇದುವರೆಗೂ ತೆಗೆದು ಕೊಂಡಿಲ್ಲ. ಇದಕ್ಕೆ ಏನು ಚಾವಟಿ ಏಟು ಹಾಕಿ ಇಲ್ಲವೇ ಬೇರೆ ಏನಾದರೂ ಮಾಡಿ ಇದನ್ನು ಸುಧಾರಿಸಿರಿ. ಇನ್ನೊಂದು ಹುಬ್ಬಳ್ಳಿ-ಧಾರವಾಡ ಮಹಾ ನಗರದಲ್ಲಿ ರಾಯನಾಳ ಗ್ರಾಮದ ನೂರಾರು ಎಕರೆ ಫಾರೆಸ್ಟ್ ಜಮೀನನ್ನು ಡೆವಲಪ್‌ಮೆಂಟ್ ಅಥಾರಿಟಿಯವರು ತೆಗೆದುಕೊಂಡರು. ೧೦ ಸಾವಿರ ನಿವೇಶನಗಳನ್ನು ಕೊಡುವಂಥ ವ್ಯವಸ್ಥೆ ಮಾಡಿಕೊಂಡು ಇದನ್ನು ತೆಗೆದುಕೊಂಡು, ಅದಕ್ಕಾಗಿ ೬೦-೭೦ ಲಕ್ಷ ರೂಪಾಯಿ ಬೆಲೆಯನ್ನು ಕೂಡ ಫಾರೆಸ್ಟ್ ಖಾತೆಗೆ ತುಂಬಿದರು. ಶ್ರೀ ರಾಮಕೃಷ್ಣ ಹೆಗಡೆಯವರು, ಶ್ರೀ ಬೊಮ್ಮಾಯಿಯವರು ಬಂದು ಉದ್ಘಾಟನೆ ಮಾಡಿದರು. ಆದರೆ ಮುಂದೆ ಏನೂ ಆಗಲಿಲ್ಲ. ಅಲ್ಲಿನ ಜನ ನಾಲ್ಕು ವರ್ಷದಿಂದ ಚಳುವಳಿ ಮಾಡುತ್ತಿದ್ದಾರೆ, ತಮಗೆ ಭೂಮಿ ಕೊಡಬೇಕು ಎಂದು ಆದರೆ ಇಲ್ಲಿಯವರೆಗೆ ಯಾರೂ ಏನೂ ಮಾಡಲಿಲ್ಲ. ಇದರ ಬಗ್ಗೆ ತಾವು ಎಲ್ಲ ಮಾಹಿತಿಯನ್ನು ತರಿಸಿಕೊಂಡು ರಾಯನಾಳ ಗ್ರಾಮದ ನೂರಾರು ಎಕರೆಯನ್ನು ಏನು ಅಕ್ವೈರ್ ಮಾಡಿಕೊಂಡಿದ್ದರು, ೧೦ ಸಾವಿರ ನಿವೇಶನಗಳನ್ನು ಕೊಡುವುದಕ್ಕೆ ಯೋಜನೆಯನ್ನು ಮಾಡಿಕೊಂಡಿದ್ದರು. ಆ ಯೋಜನೆ ಈಗ ಸ್ಥಗಿತವಾಗಿದೆ. ಆದ್ದರಿಂದ ದಯಮಾಡಿ ಹೆಚ್ಚಿನ ಮಾಹಿತಿ ತೆಗೆದುಕೊಂಡು ಕೂಡಲೇ ಕಾರ್ಯಗತ ಮಾಡಬೇಕೆಂದು ಹೇಳುತ್ತೇನೆ. ನಾನು ಈ ಡೆವಲಪ್‌ಮೆಂಟ್ ಅಥಾರಿಟಿ ಬಗ್ಗೆ ಹೆಚ್ಚು ಹೇಳುವುದಿಲ್ಲ. ನೀವೇ ಪ್ರಕಟಣೆ ಮಾಡಿದ್ದು ನಗರ ಅಭಿವೃದ್ಧಿ ಪ್ರಾಧಿಕಾರ ಎಂದು. ಅದರ ಹಿಂದಿನ ನಗರಾಭಿವೃದ್ಧಿ ಮಂಡಳಿಯ ಲೆಕ್ಕ ಶೋಧನಾ ವರದಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಅನೇಕ ದೊಡ್ಡ ದೊಡ್ಡವರು ಡೆವಲಪ್‌ಮೆಂಟ್ ಅಥಾರಿಟಿಯವರಿಗೆ ಹಣ ಕೊಡಬೇಕಾಗಿದೆ. ಅದನ್ನು ಓದಿದರೆ ಬಹಳಷ್ಟು ಆಗುತ್ತದೆ. ದಯವಿಟ್ಟು ತಾವು ಓದಬೇಕು. ಹಲವಾರು ಲೋಪ ದೋಷಗಳನ್ನು ಅದರಲ್ಲಿ ಕಾಣಿಸಿದ್ದಾರೆ. ಸ್ವಜನ ಪಕ್ಷಪಾತ ಮಾಡಿದ್ದಾರೆ. ಹಣ ಪೋಲಾಗಿದೆ, ಬಾಕಿ ಬರುವುದು ಇದೆ ಎಂಬುದನ್ನು ಲೆಕ್ಕ ಪರಿಶೋಧಕರು ಏನು ತೋರಿಸಿದ್ದಾರೆ. ಅದನ್ನು ಸಂಪೂರ್ಣವಾಗಿ ಗಣನೆಗೆ ತೆಗೆದುಕೊಂಡು ಇದರ ಬಗ್ಗೆ ಯೋಗ್ಯ ವಿಚಾರಣೆ ಮಾಡಿ ತಪ್ಪಿತಸ್ಥರಿಗೆ ಯೋಗ್ಯ ಶಿಕ್ಷೆ ಮತ್ತು ದಂಡ ವಿಧಿಸಬೇಕೆಂದು ಹೇಳುತ್ತೇನೆ. ಇನ್ನೊಂದು ಮಾತು, ಡೆವಲಪ್‌ಮೆಂಟ್ ಅಥಾರಿಟಿಯವರು ಪ್ರೈವೇಟ್ ಲೇಔಟ್ ಮಾಡುವವರಿಗೆ, ಹದಿನೇಳು, ಹದಿನೇಳುವರೆ ಪರ್ಸೆಂಟ್ ಸೂಪರ್‌ವಿಷನ್ ಚಾರ್ಜ್ ಕೇಳುತ್ತಾರೆ, ಇದನ್ನು ಆ ಜನ ಕೊಡುತ್ತಿದ್ದಾರೆ. ಪ್ರೈವೇಟ್‌ನವರು ಏನು ಮನೆ ಕಟ್ಟುವ ಕಾರ್ಯಕ್ರಮ ಮಾಡುತ್ತಿದ್ದಾರೆ, ಅದಕ್ಕೆ ಇದರಿಂದ ಧಕ್ಕೆಯಾಗುತ್ತದೆ. ಆದ್ದರಿಂದ ಇದನ್ನು ಕಡಿಮೆ ಮಾಡಬೇಕೆಂದು ಹೇಳಿ, ಮತ್ತೊಮ್ಮೆ ಜಾಗತಿಕ ಬ್ಯಾಂಕಿನವರು ಹುಬ್ಬಳ್ಳಿ ಧಾರವಾಡ ಮಹಾ ನಗರಗಳಲ್ಲಿ ನೂರಾರು ಎಕರೆ ತೆಗೆದುಕೊಂಡಿದ್ದಾರೆ. ಹಣ ಕಟ್ಟಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ಸಹ ಹೆಚ್ಚಿನ ಮುತುವರ್ಜಿ ವಹಿಸಬೇಕೆಂದು ಕೇಳಿಕೊಂಡು, ಕೆ.ಯು.ಡಬ್ಲ್ಯು.ಎಸ್.ನಲ್ಲಿ ಇವತ್ತು ಚೀಫ್ ಇಂಜಿನಿಯರ್ಸ್ ಇಲ್ಲ, ಎಂ.ಡಿ. ಇಲ್ಲ, ಎಸ್.ಇ.ಗಳು ಇಲ್ಲ, ಎಕ್ಸಿಕ್ಯುಟಿವ್ ಇಂಜಿನಿಯರ್ಸ್ ಇಲ್ಲ, ಯಾರೂ ಇಲ್ಲ. ಕಾರ್ಯಕ್ರಮ ಬೇಕಾದಷ್ಟು ತೆಗೆದುಕೊಂಡಿದ್ದೀರಿ ಆದರೆ ಕೆಲಸ ಮಾಡುವವರು ಇಲ್ಲ. ದಯವಿಟ್ಟು ಯಾರು

ಹೆಚ್ಚಿನ ಮಾಹಿತಿ ತಿಳಿದುಕೊಂಡಿದ್ದಾರೆ, ಅನುಭವಿಗಳು ಇದ್ದಾರೆ, ಅವರು ನಿವೃತ್ತಿಯಾಗಿದ್ದರೂ ಪರವಾಯಿಲ್ಲ, ಅವರನ್ನು ತೆಗೆದುಕೊಂಡು ತ್ವರಿತಗತಿಯಿಂದ ಈ ಕೆಲಸ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಂಡು ಮತ್ತೊಮ್ಮೆ ಹುಬ್ಬಳ್ಳಿ ಧಾರವಾಡ ಮಹಾ ನಗರ ಮತ್ತು ಉತ್ತರ ಕನ್ನಡ ಪಟ್ಟಣಗಳಿಗಾಗಿ ಏನು ಪ್ರಯತ್ನ ಮಾಡಬೇಕೋ ಅದನ್ನು ಮಾಡುತ್ತೀರೆಂಬ ಭರವಸೆ, ವಿಶ್ವಾಸ ನನಗಿದೆ ಮತ್ತು ಈ ಪಟ್ಟಣಗಳಿಗೆ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ. ತಾವು ಈಗಾಗಲೇ ಪ್ರತಿಜ್ಞೆ ಮಾಡಿದ್ದೀರಿ ಹುಬ್ಬಳ್ಳಿಗೆ ಬಂದಾಗ ಈ ಎಲ್ಲಾ ಸೌಕರ್ಯಗಳನ್ನು ಕೊಡುವವರೆಗೆ ನಾನು ಒಂದು ಹೊತ್ತು ಊಟ ಮಾಡುತ್ತೇನೆಂದು ಹೇಳಿರುವುದನ್ನು ತಮ್ಮ ಗಮನಕ್ಕೆ ಹಾಗೂ ತಮ್ಮ ನೆನಪಿಗೆ ತಂದು ನಾವು ಹೇಳಿದ ಎಲ್ಲಾ ಕೆಲಸಗಳನ್ನೂ ಮಾಡಬೇಕೆಂದು ವಿನಂತಿ ಮಾಡಿಕೊಂಡು, ಅಧ್ಯಕ್ಷರು ಸಾಕಷ್ಟು ಸಮಯ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು. — ಇದುವರೆಗೆ ಸುಮಾರು ೫ ಗಂಟೆಗಳ ಕಾಲ ಈ ಬೇಡಿಕೆಗಳ ಮೇಲೆ ಚರ್ಚೆ ನಡೆದಿದೆ. ಇದರಲ್ಲಿ ೩ ಗಂಟೆ ೪೦ ನಿಮಿಷ ವಿರೋಧ ಪಕ್ಷದವರಿಗೆ ಸಿಕ್ಕಿದೆ. ಉಳಿದಿದ್ದು, ೧೫೦ ಜನ ಸದಸ್ಯರನ್ನು ಪ್ರತಿನಿಧಿಸತಕ್ಕ ಪಕ್ಷಕ್ಕೆ ಸಿಕ್ಕಿದೆ. ವಿರೋಧ ಪಕ್ಷಗಳಲ್ಲಿ ಒಂದು ಸೂಚನೆ ಏನೆಂದರೆ, ಬೇಡಿಕೆಗಳ ಮೇಲೆ ಮಾತನಾಡುವುದಾದರೆ, ಪ್ರತಿಯೊಬ್ಬರು ಅವರವರ ಕ್ಷೇತ್ರದ ಸಮಸ್ಯೆಗಳನ್ನು ಹೇಳಬೇಕೆಂದರೆ ಈಗ ವಿರೋಧ ಪಕ್ಷದವರಿಗೆ ಇಂತಿಷ್ಟೇ ಕಾಲ ಕೊಡಬೇಕೆಂಬ ನಿಯಮವನ್ನು ಈಗ ನಾನು ಸ್ವಲ್ಪ ಸಡಿಲ ಮಾಡಬೇಕಾಗುತ್ತದೆ. ಇದನ್ನು ತಾವು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು.

ಶ್ರೀ ಪಾಟೀಲ್ ನಾಗರಾಜ್. — ೩-೪-೫ ಬೇಡಿಕೆಗಳು ಒಂದೇ ಇಲಾಖೆಗೆ ಸೇರಿದ್ದು, ಅವೆಲ್ಲವೂ ಒಟ್ಟಿಗೆ ಚರ್ಚೆಗೆ ಬರುವುದರಿಂದ, ತಾವು ಕೊಡುವ ಕಾಲ ಸ್ವಲ್ಪ ಕಡಿಮೆಯಾಗುತ್ತಿದೆ. ಆದುದರಿಂದ ದಯ ಮಾಡಿ, ಕಾಲಾವಕಾಶವನ್ನು ಸ್ವಲ್ಪ ಜಾಸ್ತಿ ಮಾಡಬೇಕು.

ಶ್ರೀ ಕೆ. ಲಕ್ಕಣ್ಣ. — ಮಾನ್ಯ ಅಧ್ಯಕ್ಷರೇ, ವಿರೋಧಪಕ್ಷದವರಿಗೇ ಹೆಚ್ಚು ಸಮಯ ಕೊಟ್ಟರೆ, ಬೇರೆಯವರಿಗೆ ಅವಕಾಶ ಸಿಕ್ಕದ ಹಾಗೆ ಆಗುತ್ತದೆ. ಈ ಅಧಿವೇಶನ ಪ್ರಾರಂಭವಾದಾಗಿನಿಂದಲೂ ಪಾಟೀಲ್ ನಾಗರಾಜ್ ಅವರಿಗೇ ಆದ್ಯತೆ ಜಾಸ್ತಿ ಕೊಡುತ್ತಿದ್ದೀರಿ, ನಮಗೆ ಕೊಡುವುದಿಲ್ಲ. ಅವರಿಂದಲೇ ಈ ಸದನದಲ್ಲಿ ಕೆಲಸಕಾರ್ಯಗಳು ಕಡಿಮೆಯಾಗಿವೆ. ದಯಮಾಡಿ ನಮಗೂ ಚರ್ಚೆಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಎಂ. ವೀರಣ್ಣ. — ಸಭಾಧ್ಯಕ್ಷರೇ, ನಗರ ಪ್ರದೇಶದ ಸಮಸ್ಯೆಗಳನ್ನು ಕುರಿತು ಹೇಳಲು ಸ್ವಲ್ಪ ಹೆಚ್ಚಿನ ಕಾಲಾವಕಾಶ ಅಗತ್ಯವಾಗಿ ಬೇಕಾಗಿರುವುದರಿಂದ ನಮಗೆ ತಾವು ಸ್ವಲ್ಪ ಹೆಚ್ಚಿನ ಕಾಲಾವಕಾಶ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಅನೇಕ ಸಹ ಸದಸ್ಯರು ಇವತ್ತು ಪಟ್ಟಣದಿಂದ ಬಂದಿದ್ದಾರೆ, ಆದ್ದರಿಂದ ಅವರ ಸಮಸ್ಯೆಗಳನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೆಚ್ಚಿನ ಕಾಲಾವಕಾಶವನ್ನು ಕಲ್ಪಿಸಿಕೊಡಬೇಕೆಂದು ಮಾನ್ಯ ಸಭಾಧ್ಯಕ್ಷರಲ್ಲಿ ವಿನಂತಿಸುತ್ತೇನೆ.

ಶ್ರೀ ಕೆ. ಶಿವಮೂರ್ತಿ. — ಮಾನ್ಯ ಅಧ್ಯಕ್ಷರೇ, ಇವತ್ತು ೧೫೦ ಜನ ರೂಲಿಂಗ್ ಪಾರ್ಟಿಯ ಸದಸ್ಯರು ಇದ್ದಾರೆ. ಆದ್ದರಿಂದ ವಿರೋಧಪಕ್ಷದವರಿಗೆ ಹೆಚ್ಚಿನ ಕಾಲಾವಕಾಶವನ್ನು ಯಾವರೀತಿ ಕೊಡುತ್ತೀರೋ ಅದೇ ರೀತಿಯಾಗಿ ನಮಗೂ ಕೊಡಬೇಕು. ನಮ್ಮ ಪಕ್ಷದಲ್ಲಿ ಹೊಸದಾಗಿ ಬಂದಿರತಕ್ಕ ಸದಸ್ಯರು ಇದ್ದಾರೆ, ಇಲ್ಲಿಯ ಪ್ರೊಸೀಜರ್ ಇನ್ನೂ ಅವರಿಗೆ ಗೊತ್ತಾಗಿಲ್ಲ. ಯಾವರೀತಿ ಮಾತನಾಡಬೇಕು ಹೇಗೆ ಮಾತನಾಡಬೇಕು ಎಂಬುದನ್ನು ಇನ್ನೂ ಅವರು ತಿಳಿದುಕೊಳ್ಳಬೇಕಾಗಿದೆ. ಆದ್ದರಿಂದ ಇಲ್ಲಿ ಹಿಂದೆ ಕುಳಿತಿರತಕ್ಕಂಥ ಹೊಸಬರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಪಾಟೀಲ್ ನಾಗರಾಜ್. — ಅಧ್ಯಕ್ಷರೇ, ಈ ವಿಚಾರದಲ್ಲಿ ಆಡಳಿತ ಪಕ್ಷದವರು ಸ್ವಲ್ಪ ಮೌನ ವಹಿಸಬೇಕು. ವಿರೋಧಪಕ್ಷದವರಿಗೆ ಹೆಚ್ಚಿನ ಕಾಲಾವಕಾಶ ಕೊಡಬೇಕು, ಸರ್ಕಾರದ ನೀತಿ ನಿರೂಪಣೆ ಬಗ್ಗೆ ಟೀಕೆ ಮಾಡಬೇಕಾಗುತ್ತದೆ ಅಥವಾ ಸಲಹೆ ಕೊಡಬೇಕಾಗುತ್ತದೆ. ಆದ್ದರಿಂದ ಸ್ವಲ್ಪ ಹೆಚ್ಚಿನ ಅವಕಾಶವನ್ನು ನಮಗೆ ನೀವು ಕೊಡಬೇಕಾಗುತ್ತದೆ.

ಶ್ರೀ ಬಿ. ಎಂ. ಇದಿನಬ್ಬ. — ಅಧ್ಯಕ್ಷರು ಹೇಳಿದಂಥ ಮಾತು ಬಹಳ ಸಹಜವಾದುದು. ಪ್ರತಿಯೊಬ್ಬ ಸದಸ್ಯರಿಗೂ ಕೂಡಾ ಅವರವರ ಕ್ಷೇತ್ರದ ವಿಚಾರಗಳನ್ನು ಹೇಳಲಿಕ್ಕೆ ಇರುತ್ತದೆ. ಎಲ್ಲರಿಗೂ ಮಾತನಾಡಬೇಕೆಂದು ಇರುತ್ತದೆ. ಅದು ಸರಿಯಾದುದು. ಇದು ಅವರು ಹೇಳಬೇಕು, ಇವರು ಹೇಳಬೇಕು ಎನ್ನತಕ್ಕಂಥ ಪ್ರಶ್ನೆ ಅಲ್ಲ. ಎಲ್ಲ ಕ್ಷೇತ್ರದವರಿಗೂ ಹೇಳಲು ಅನೇಕ ಸಮಸ್ಯೆಗಳು

ಇರುತ್ತವೆ. ಕೇವಲ ವಿರೋಧ ಪಕ್ಷದವರಿಗೆ ಮಾತ್ರ ಸಮಸ್ಯೆಗಳು ಇರುವಂತಹದಲ್ಲ. ನಮಗೂ ಸಮಸ್ಯೆಗಳು ಉಂಟು.

MR. SPEAKER.—Honble Minister of State for co-operation is making a statement.

ಮಂತ್ರಿಯವರಿಂದ ಹೇಳಿಕೆ

ರಾಜ್ಯದಲ್ಲಿ ಸಹಕಾರ ಸಂಘಗಳ ಚುನಾವಣೆಗಳನ್ನು ಮುಂದೂಡುವ ಬಗ್ಗೆ

† ಡಾ. ಹೆಚ್ ಆರ್. ರಾಜು (ಸಹಕಾರ ಇಲಾಖೆಯ ರಾಜ್ಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ ಬೆಳಿಗ್ಗೆ ನಮ್ಮ ಸದಸ್ಯರಾದಂಥ ವಿ. ಎಸ್. ಆಚಾರ್‌ರವರು ೭೩ನೇ ನಿಯಮದ ಮೇರೆಗೆ ಒಂದು ಪ್ರಶ್ನೆಯನ್ನು ಸೂಚಿಸಿದ್ದರು. ಅದಕ್ಕೆ ಉತ್ತರವನ್ನು ಸಂಜೆ ಹೇಳುತ್ತೇನೆಂದು ನಾನು ಮಾಡುವೆಯ ಹೇಳಿಕೊಂಡಿದ್ದೆ. ಅದರ ಪ್ರಕಾರ ಈ ಹೇಳಿಕೆಯನ್ನು ಕೊಡುತ್ತಿದ್ದೇನೆ. ೧೯೮೭–೮೮ರಿಂದ ಮುಂದೂಡಲ್ಪಟ್ಟಿದ್ದ ಮಹಾಸಭೆ ಮತ್ತು ಚುನಾವಣೆಗಳನ್ನು ಹಂತಹಂತವಾಗಿ ನಡೆಸುವ ಬಗ್ಗೆ ಈಗಾಗಲೇ ಸರಕಾರದ ಆಜ್ಞೆಯಾಗಿರುವುದು ನಿಜವಾಗಿರುತ್ತದೆ. ಈಗ ಮಳೆಗಾಲವಾಗಿದ್ದು, ಬಹುತೇಕ ಸದಸ್ಯರು ಕೃಷಿ ಕೆಲಸಗಳಲ್ಲಿ ಮಗ್ನರಾಗಿರುವ ಕಾರಣ ಮಹಾಸಭೆಗಳಲ್ಲಿ ಮತ್ತು ಚುನಾವಣೆಗಳಲ್ಲಿ ಭಾಗವಹಿಸಲು ತೊಂದರೆ ಇರುವುದಾಗಿಯೂ, ಅದುದರಿಂದ ಮಹಾಸಭೆಗಳನ್ನು ಮತ್ತು ಚುನಾವಣೆಗಳನ್ನು ಮುಂದೂಡಬೇಕೆಂದು ಮನವಿಗಳು ಬಂದಿರುತ್ತವೆ. ಈ ಬಗ್ಗೆ ಅನೇಕ ಶಾಸಕರೂ ಚುನಾವಣೆಗಳನ್ನು ಮುಂದೂಡಬೇಕೆಂದು ಒತ್ತಾಯಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಈ ಪ್ರಶ್ನೆ ಸರಕಾರದ ತೀವ್ರ ಗಮನದಲ್ಲಿದೆ ಎಂದು ಹೇಳಲು ಇಚ್ಛಿಪಡುತ್ತೇನೆ.

ಶ್ರೀ ಪಿ. ಸಿ. ಸಿದ್ದನಗೌಡರ್.—ಡಿಸಿಷನ್ ಏನು ಎಂದು ಗೊತ್ತಾಗಲಿಲ್ಲ. ಚುನಾವಣೆ ಮಾಡುತ್ತಾರೋ, ಮುಂದೂಡುತ್ತಾರೋ ಗೊತ್ತಾಗಲಿಲ್ಲ.

ಅಧ್ಯಕ್ಷರು.—ತೀವ್ರ ಗಮನದಲ್ಲಿದೆ ಎಂದು ಹೇಳಿದ್ದಾರೆ.

ಶ್ರೀ ಪಿ ಸಿ. ಸಿದ್ದನಗೌಡರ್.—ಶಾಸಕರ ಕಾರಣದಿಂದ ಮುಂದಕ್ಕೆ ಹಾಕಬಾರದು. ನನ್ನ ಒಂದು ಪಾಯಿಂಟ್ ಏನೆಂದರೆ ಶಾಸಕರು ಹೇಳಿರುತ್ತಾರೆ ಎಂದು ಚುನಾವಣೆ ಮುಂದಕ್ಕೆ ಹಾಕಬಾರದು. ಅವರಿಗೆ ಏನಾದರೂ ಟೆಕ್ನಿಕಲ್ ತೊಂದರೆಗಳು ಇದ್ದರೆ ಸರಕಾರ ಚುನಾವಣೆಗಳನ್ನು ಮುಂದಕ್ಕೆ ಹಾಕಲಿ. ಸದನ ಇದೆ ಎಂದು, ಶಾಸಕರು ಹೇಳಿದ್ದಾರೆ ಎಂದು ಮುಂದಕ್ಕೆ ಹಾಕಬಾರದು. ರಿಕವರಿ ಆಗಲಿಲ್ಲ, ಡಿಫಾಲ್ಟರ್ ಇದ್ದಾರೆ ಎಂಬ ಪಾಯಿಂಟ್ ಮೇಲೆ ಮುಂದೂಡಲಿ. ಸದನ ಇರುವುದರಿಂದ ಮುಂದೂಡಿದೆ ಎಂದು ಹೇಳುವುದು ಬೇಡ.

ಈ ಬಗ್ಗೆ ನನ್ನ ರಿಕ್ವೆಸ್ಟ್ ಏನೆಂದರೆ ಚುನಾವಣೆ ಮಾಡತ್ತಾರೆಯೋ, ಮಾಡುವುದಿಲ್ಲವೇ ಎಂದು ಗೊತ್ತಾಗಲಿಲ್ಲ. ಒಂದು ವೇಳೆ ಮುಂದೂಡುವುದು ಇದ್ದರೆ ಬೇಗ ತೀರ್ಮಾನ ತೆಗೆದುಕೊಳ್ಳಬೇಕು. ಎಲೆಕ್ಷನ್‌ನ ಕ್ಯಾಲೆಂಡರ್ ಆಫ್ ಇವೆಂಟ್ಸ್ ತೆಗೆದುಕೊಂಡರೆ ಒಂದೊಂದು ಇನ್‌ಸ್ಟಿಟ್ಯೂಷನ್‌ಗೆ ಒಂದು ಸಾವಿರ ಎಂದರೂ ಕೋಟಿಗಟ್ಟಲೆ ಹಾಳಾಗುತ್ತದೆ. ಈಗಾಗಲೇ ಅನೇಕ ಸಹಕಾರ ಸಂಘಗಳು ಕೆಲಸ ಹಾಕಿರುತ್ತವೆ. ಇಂತಹ ಪರಿಸ್ಥಿತಿಯೊಳಗೆ ಸರಕಾರ ಏನಾದರೂ ತೀರ್ಮಾನ ತೆಗೆದುಕೊಳ್ಳಲಿ, ಆದರೆ ಇಮ್ಮಿಡಿಯಟ್ ಆಗಿ ತೆಗೆದುಕೊಳ್ಳಲಿ. ಸದನದ ಸದಸ್ಯರ ಮೇಲೆ ಹಾಕುವುದು ಬೇಡ.

ಶ್ರೀ ರುಕ್ಮಯ್ಯ ಪೂಜಾರಿ.—ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳುವ ಅವಶ್ಯಕತೆ ಇದೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಅನೇಕ ಸಹಕಾರ ಸಂಘಗಳಲ್ಲಿ ತಾರೀಖು ನಿಗದಿಯಾಗಿದೆ. ಹಳ್ಳಿಮಟ್ಟದ ಸಹಕಾರ ಸಂಘಗಳು ಈ ತಿಂಗಳ ಕೊನೆಯೊಳಗೆ ತಮ್ಮ ಮಹಾಸಭೆಗಳನ್ನು ಮಾಡಬೇಕೆಂದು ತೀರ್ಮಾನ ಆಗಿದೆ. ತಾಲ್ಲೂಕು ಮಟ್ಟದ ಸಹಕಾರ ಸಂಸ್ಥೆಗಳು ಇಂತಿಂತಹ ಅವಧಿಯಲ್ಲಿ ಮಾಡಬೇಕೆಂದು ಇದೆ. ಜಿಲ್ಲಾಮಟ್ಟ ರಾಜ್ಯಮಟ್ಟ ಹೀಗೆ ಇದು ಸೆಪ್ಟೆಂಬರ್‌ವರೆಗೆ ಕೂಡಾ ಹೋಗತಕ್ಕಂಥ ಪರಿಸ್ಥಿತಿ ಇದೆ. ಇವತ್ತಿನ ದಿವಸ ೧೭ನೇ ತಾರೀಖು. ಈ ತಿಂಗಳೊಳಗೆ ಹಳ್ಳಿಮಟ್ಟದ ಸಹಕಾರ ಸಂಘಗಳ ಮಹಾಸಭೆಗಳನ್ನು ಮಾಡಬೇಕೆಂದು ಸರಕಾರ ಈಗಾಗಲೇ ನಿರ್ದೇಶನ ನೀಡಿದೆ ಎಂಬ ಮಾತನ್ನು ಮಾನ್ಯ ಸಚಿವರು ತಿಳಿಸಿದ್ದಾರೆ. ಇನ್ನೂ ಇದನ್ನು ಡೋಲಾಯಮಾನವಾಗಿ ಇಟ್ಟಿರುವ ಕಾರಣದಿಂದ ಇದು ನಡೆಯುತ್ತದೆಯೋ ಇಲ್ಲವೇ ಎನ್ನುವುದನ್ನು ಒಂದು ಮಾತಿನಲ್ಲಿ ಚುಟುಕ ಉತ್ತರ ಕೊಟ್ಟರೆ ಆಗುತ್ತದೆ. ಇವತ್ತಿನ ದಿವಸ ಪರಿಸ್ಥಿತಿ ಏನಾಗಿದೆ ಎಂದರೆ, ಅನೇಕ ಕಡೆ ರೈತರು ಸಾಲ ವಜಾವಾಗುತ್ತದೆ